ಹಿರೇಕೆರೂರು ತಾಲೂಕಿನ ಕೆರೆಗಳು : ಚಾರಿತ್ರಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : ೧೪೦೧೦೪೦೫.೦೦೧೪



ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೯

ಹಿರೇಕೆರೂರು ತಾಲೂಕಿನ ಕೆರೆಗಳು : ಚಾರಿತ್ರಿಕ ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು
ನೋಂದಣಿ ಸಂಖ್ಯೆ : ೧೮೦೧೦೮೦೩೦೦೧೪

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
೨೦೧೯

ಪರಿವಿಡಿ

ಅಧ್ಯಾಯ – ಒಂದು

೧.೧ ಅಧ್ಯಯನದ ಉದ್ದೇಶ,

೧.೨ ಅಧ್ಯಯನದ ವ್ಯಾಪ್ತಿ

೧.೩ ಅಧ್ಯಯನ ಸ್ವರೂಪ ಮತ್ತು ವಿಧಾನ,

೧.೪ ಅಧ್ಯಯನ ಸಮೀಕ್ಷೆ.

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನ ಸ್ವರೂಪ ಮತ್ತು ವಿಧಾನ, ಅಧ್ಯಯನ ಸಮೀಕ್ಷೆ

ಪ್ರಸ್ತಾವನೆ

ಕೆರೆ ಎನ್ನುವುದು ಒಂದು ರೀತಿಯಲ್ಲಿ ಕೃತಕ ಜಲಾಶಯವೆಂದು ಹೇಳಬಹುದು. ಹರಿಯುವ ನೀರಿಗೆ ಒಡ್ಡು ನಿರ್ಮಿಸಿ ಶೇಖರಿಸಿಡುವ ಚಿಕ್ಕ ಜಲಾಶಯವೇ ಕೆರೆ. ನೀರಾವರಿಗಾಗಿ ಮನುಷ್ಯ ಕಂಡುಕೊಂಡ ಕೃತಕ ಸಾಧನ. ಕರ್ನಾಟಕ ರಾಜ್ಯದಲ್ಲಿ ಪ್ರತಿ ಮೂರು ಹಳ್ಳಿಗೆ ಎರಡು ಕೆರೆಗಳು ಇದ್ದವು ಎನ್ನುವುದು ನಮ್ಮ ಪೂರ್ವಜರು ಕೆರೆ ನೀರಾವರಿಗೆ ಕೊಟ್ಟ ಪ್ರಾಮುಖ್ಯತೆಯನ್ನು ಬಿಂಬಿಸುತ್ತದೆ.

ಒಂದು ಗ್ರಾಮದ ಕೆರೆ ಎಂದರೆ ಅದು ಆ ಗ್ರಾಮದ ಅವಿಭಾಜ್ಯ ಅಂಗ, ಪ್ರವಾಹ ಮತ್ತು ನೀರಿನ ಬರವನ್ನು ತಡೆಗಟ್ಟಬಲ್ಲ ಸಂರಕ್ಷಕ, ರೈತರ ಭೂಮಿಗೆ ನೀರುಣಿಸುವ ಜಲಾಶಯ, ಮೀನುಗಾರಿಕೆಯ ಕೇಂದ್ರ, ದನ–ಕರು, ಪಶು–ಪಕ್ಷಿಗಳ ದಾಹ ನೀಗಿಸುವ ತೊರೆ, ಜಲಚರಗಳ ತಾಣ, ದಾರಿಹೋಕರ ವಿಶ್ರಾಂತಿಯ ಸ್ಥಳ, ಗ್ರಾಮದ ಮನೋರಂಜನೆಯ ಸ್ಥಳವೂ ಕೂಡ. ಗ್ರಾಮ ಪರಿಸರವನ್ನು ತಂಪಾಗಿಸುವ ಕೆರೆ ಗ್ರಾಮಕ್ಕೊಂದು ಏರ್‌ಕಂಡೀಷನರ್ ಇದ್ದಂತೆ. ಗ್ರಾಮದ ಜನರ ಸಂತೃಪ್ತಿಗೆ ಕಾರಣವಾದ ಕೆರೆ ಆ ಗ್ರಾಮದ ಚೇತನ, ಅವರ ಪಾಲಿನ ದೈವ! ದೇವತೆ! ಅನ್ನ ನೀಡುವ ಅಮ್ಮ ಎಂದರೂ ತಪ್ಪಾಗಲಾರದು.

ಕೆರೆಯ ನಿರ್ಮಾಣ ನಮ್ಮ ನಾಡಿನ ಸಂಸ್ಕೃತಿಯಾಗಿ ಬೆಳೆದು ಬಂದಿತು. ರಾಜಮಹಾರಾಜರು, ರಾಣಿಯರು, ಮಂತ್ರಿಗಳು, ಶ್ರೀಮಂತರು, ವಣಿಕರು, ಶ್ರೀಸಾಮಾನ್ಯರು ಅಷ್ಟೇ ಏಕೆ.. ಸನ್ಯಾಸಿ, ಸೂಳೆಯರೂ ಕೆರೆಯ ನಿರ್ಮಾಣದಲ್ಲಿ ಭಾಗಿಯಾಗಿದ್ದರು. ಕೆರೆಯನ್ನು

ಕಟ್ಟಿಸುವುದು ಜನತೆಯ ಔದಾರ್ಯದ ಮತ್ತು ದಾನ ಶೀಲತೆಯ ಸಂಕೇತವಾಗಿತ್ತು. ಇದು ಧಾರ್ಮಿಕ ಕಾರ್ಯವೆಂದು, ಮೋಕ್ಷ ಸಾಧನೆಯ ಮಾರ್ಗವೆಂದು ನಮ್ಮ ಹಿರಿಯರ ನಂಬಿಕೆಯಾಗಿತ್ತು. ಗ್ರಾಮ ಸಂಸ್ಕೃತಿಯನ್ನು ಬಿಂಬಿಸಬಲ್ಲ ಶಾಸನಗಳ ಪಾತ್ರ ಗೌಣವಾದರೂ ಅಂದಿನ ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುವಲ್ಲಿ ಶಾಸನಗಳು ಶಕ್ತವಾಗಿವೆ.

ನಾಡಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆರೆ-ಕಟ್ಟೆಗಳ ಪಾತ್ರ ಅತ್ಯಂತ ಪ್ರಮುಖವಾದುದು. ಕೃಷಿ ಪ್ರಧಾನವಾದ ಭಾರತೀಯ ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ಕೃಷಿ ತಳಹದಿಯಾಯಿತಲ್ಲದೆ ಮಾನವನ ಜೀವನಕ್ರಮವನ್ನೇ ಬದಲಾಯಿಸಿತು. ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತ್ಯಾವಶ್ಯಕ. ಕೃಷಿಗೆ ನೀರನ್ನೊದಗಿಸಲು ಮಾನವನು ಅನುಸರಿಸಿದ್ದ ಕೃತಕ ಜಲ ಸಂಗ್ರಾಹಕಗಳಾದ ಕೆರೆ-ಕಟ್ಟೆಗಳನ್ನು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಗಳ ಕಾರ್ಯಕ್ಷೇತ್ರವು ನದಿ-ಸರೋವರ ಮುಂತಾದ ಜಲಸಂಚಯನವಿದ್ದ ಸ್ಥಳದ ಸುತ್ತಮುತ್ತಲೂ ತಳವೂರಿ ಗ್ರಾಮಗಳು ರೂಪುಗೊಂಡವು.

ಕೆರೆಗಳಿಂದ ನೀರಾವರಿ ಮಾಡಿಕೊಳ್ಳುವುದು ದ್ರಾವಿಡ ಪದ್ಧತಿ. ಈ ಪದ್ಧತಿ ಹಲವಾರು ದೃಷ್ಟಿಯಿಂದ ಶ್ರೇಷ್ಠವಾದದ್ದೆಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಕನ್ನಡ ನಾಡಿನಲ್ಲಿ ಕೆರೆ ಕಟ್ಟಿಸುವ ಇತಿಹಾಸ ಕದಂಬರ ಪೂರ್ವದಲ್ಲಿ ನಾಗರಿಂದ ಮೊದಲಾದರೂ, ಕದಂಬ ದೊರೆ ಮಯೂರವರ್ಮನು ನಿರ್ಮಿಸಿದ 'ಚಂದ್ರವಳ್ಳಿ ಕೆರೆ'ಯು ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆ ಎನ್ನಲಾಗಿದೆ. ನಂತರ ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ಮನೆತನಗಳು ವಿಫುಲ ಪ್ರಮಾಣದಲ್ಲಿ ಕೆರೆ-ಕಟ್ಟೆಗಳನ್ನು ನಿರ್ಮಿಸಿದ್ದಾರೆ. ಬಾದಾಮಿ ಚಾಲುಕ್ಯರು ಸಾಮ್ರಾಜ್ಯದ ಎಲ್ಲೆಡೆಗಳಲ್ಲಿಯೂ ಕೆರೆಗಳನ್ನು ನಿರ್ಮಿಸಿದರೆಂದು ಶಾಸನ ಉಲ್ಲೇಖಿಸುತ್ತದೆ. ಕಲ್ಯಾಣ ಚಾಲುಕ್ಯರ ಕ್ರಿ.ಶ. ೯೭೩ ರಿಂದ ೧೩೩೬ ರ ಅವಧಿಯಲ್ಲಿ ಅಧಿಕ ಕೆರೆಗಳು ನಿರ್ಮಾಣಗೊಂಡವು. ಅವುಗಳ ಪ್ರಮಾಣದಲ್ಲಿ ಎಲ್ಲೆಲ್ಲಿ ಕೆರೆಗಳನ್ನು ಕಟ್ಟಲು ಸಾಧ್ಯವೋ ಅಲ್ಲೆಲ್ಲಾ ಕೆರೆಗಳನ್ನು ಕಟ್ಟಿಬಿಟ್ಟಿದ್ದಾರೆ. ಹೊಸ ಕೆರೆಗಳಿಗೆ ಸ್ಥಳ ಹುಡುಕುವುದು ದುಸ್ತರ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಆ ಕಾರಣವಾಗಿ ಅವರ ಕಾಲವನ್ನು 'ಕೆರೆಗಳ ಸುವರ್ಣಯುಗ' ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗುವುದಕ್ಕಿಂತ ಕೆರೆ-ಕಟ್ಟೆಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗುವುದು ಉತ್ತಮ.

ಕೆರೆಗಳ ಇತಿಹಾಸ ಬಿಚ್ಚಿಡುವ ಆಕರಗಳು

ಯಾವುದೇ ಧಾರ್ಮಿಕ ಕಾರ್ಯಗಳಿಗಿಂತ ಜನರಿಗೆ, ದನಕರುಗಳಿಗೆ ಕುಡಿಯಲು ಹಾಗೂ ಕೃಷಿಗೆ ನೀರು ಪೂರೈಸುವುದು ಅತ್ಯಂತ ಪುಣ್ಯದ ಕೆಲಸವೆಂದು ಬಲವಾದ ನಂಬಿಕೆ ನಮ್ಮ ಹಿರಿಯರಲ್ಲಿ ಬೆಳೆದು ಬಂದಿತ್ತು. ಹಾಗಾಗಿ ಈ ಪುಣ್ಯ ಕಾರ್ಯದಲ್ಲಿ ಸಮಾಜದ ಎಲ್ಲ ವರ್ಗದ ಜನರೂ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿದ್ದರು. ರಾಜಮಹಾರಾಜರು

ರಾಜ್ಯದ ರಕ್ಷಣೆ, ಪ್ರಜೆಗಳ ಹಿತ ಮುಖ್ಯವೆಂದು ಭಾವಿಸಿದ್ದರು. ಕೃಷಿ ಪ್ರಧಾನವಾದ ಈ ದೇಶದಲ್ಲಿ ನೀರಾವರಿಯ ಅಗತ್ಯತೆಯನ್ನು ಮನಗಂಡಿದ್ದರು. ಸಾವಿರಾರು ವರ್ಷಗಳ ಹಿಂದೆ ಅವರು ನಿರ್ಮಿಸಿದ ಹಲವು ಕೆರೆಗಳು ಇಂದಿಗೂ ಉಳಿದಿವೆ. ಇಂತಹ ಹಳೆಯ ಕಾಲದ ಆಣೆಕಟ್ಟು, ಕೆರೆ–ಕಾಲುವೆಗಳ ಇತಿಹಾಸವನ್ನು ಈ ಕೆಳಗಿನ ಐತಿಹಾಸಿಕ ಗ್ರಂಥಗಳು ಸ್ಪಷ್ಟವಾಗಿ ವಿವರಿಸುತ್ತವೆ.

೧) ಶಾಸನಗಳು

೨) ಐತಿಹಾಸಿಕ ಗ್ರಂಥಗಳು ಹಾಗೂ ಸಾಹಿತ್ಯ ಕೃತಿಗಳು

೩) ವಿದೇಶಿ ಪ್ರವಾಸಿಗರ ಬರಹಗಳು

೪) ಸರ್ಕಾರದ ದಾಖಲೆಗಳು

೫) ಜಾನಪದ ಸಾಹಿತ್ಯ

ಶಾಸನಗಳು

ಕೆರೆಗಳ ಕುರಿತು ವಿಫುಲವಾಗಿ ಮಾಹಿತಿ ದೊರೆಯುವುದು ಶಾಸನಗಳಿಂದಲೇ. ಅದರಲ್ಲೂ ಶಿಲಾಶಾಸನಗಳಿಂದಲೇ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಕ್ರಿ.ಪೂ. ೨೦೦ ರಿಂದ ಕ್ರಿ.ಶ. ೧೮೦೦ ರವರೆಗೆ ಅಸಂಖ್ಯಾತ ಕೆರೆಗಳು ಇದ್ದುದರ ಬಗೆಗೆ ಸಾವಿರಾರು ಶಾಸನಗಳು ಅವುಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಜಲಾಶಯವೊಂದರ ಅತಿ ಪುರಾತನ ಶಾಸನವೆಂದರೆ, ಕ್ರಿ.ಶ. ೧೫೦ ರ ರುದ್ರದಾಮನ ಜುನಾಗಢ ಶಾಸನ. ಕ್ರಿ.ಶ. ೪ ನೇ ಶತಮಾನದಲ್ಲಿ ಚಿತ್ರದುರ್ಗದಲ್ಲಿರುವ ಚಂದ್ರವಳ್ಳಿ ಶಿಲಾಶಾಸನವು ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಆಳ್ವಿಕೆ ಮಾಡಿದ ಕದಂಬ ಅರಸ ಮಯೂರವರ್ಮನ ಕಾಲಾವಧಿಯಲ್ಲಿ ನಿರ್ಮಿಸಲಾದ ಚಂದ್ರವಳ್ಳಿ ಕೆರೆಯು ಅತ್ಯಂತ ಪ್ರಾಚೀನ ಕೆರೆ ಎಂದು ತಿಳಿಸುತ್ತದೆ. ಕೆರೆಯ ನಿರ್ಮಾಣದ ಕುರಿತು ಅತ್ಯಂತ ಅಮೂಲ್ಯವಾದ ಶಾಸನವೆಂದರೆ ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕ್ರಿ.ಶ. ೧೩೬೯ ರಲ್ಲಿ ದೊರೆತ 'ಪೊರುಮಾಮಿಲ್ಲ ಶಾಸನ'. ಅದನ್ನು ಕೆರೆ ನೀರಾವರಿಯ ಕೈಪಿಡಿ ಎಂದು ಕರೆಯಲಾಗುತ್ತದೆ.

ಇತಿಹಾಸಪೂರ್ವದಲ್ಲಿ ಕೆರೆ ನೀರಾವರಿ

ಬೇಸಾಯವನ್ನು ಕಂಡುಕೊಳ್ಳುವ ಪೂರ್ವದಲ್ಲಿ ಸಂಚಾರಿಯಾಗಿದ್ದ ಆದಿಮಾನವ ಆಹಾರಕ್ಕಾಗಿ ಪ್ರಾಣಿಗಳನ್ನು ಭೇಟೆಯಾಡುವುದರ ಜೊತೆಗೆ ಹೊಳೆ, ಹಳ್ಳ, ಹೊಂಡ ಮುಂತಾದ ಜಲಾಶಯಗಳಲ್ಲಿ ಅಹಾರಕ್ಕಾಗಿ ಮೀನು ಹಿಡಿಯುತ್ತಿದ್ದನೆಂದು ಊಹಿಸಲಾಗಿದೆ. ಆದಿಮಾನವನ ಬದುಕೆಲ್ಲ ಜಲಾಶಯಗಳ ಸುತ್ತಮುತ್ತ ಕೇಂದ್ರೀಕೃತವಾಗಿತ್ತು. ಬೇಸಾಯವನ್ನು ಕಂಡುಕೊಂಡ ಮೇಲೆ ಅವನ ಬದುಕಿನಲ್ಲಿ ಒಂದು ಕ್ರಮಬದ್ಧತೆ ಬೆಳೆದು ಬಂತು. ಒಂದೆಡೆ ನೆಲೆಯಾಗಿ

ನಿಲ್ಲಲು ಸಾಧ್ಯವಾಯಿತು. ಸಮಸ್ಯೆಗಳು ಮಾತ್ರ ತಪ್ಪಲಿಲ್ಲ. ಆ ಸಮಸ್ಯೆಗಳಿಂದಾಗಿಯೇ ಉತ್ಕರ್ಷದ ಬದುಕಿಗೆ ಚಾಲನೆ ದೊರೆಯಿತು. ಸಕಾಲಕ್ಕೆ ಬಾರದ ಮಳೆಯಿಂದಾಗಿ ತನ್ನ ಅಗತ್ಯಕ್ಕೆ ಬೇಕಾದ ಮಳೆಯ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಆದಿಮಾನವ ಪ್ರಕೃತಿಯಿಂದಲೆ ನೋಡಿ ಕಲಿತ. ನೂತನ ಶಿಲಾಯುಗದ ಮಾನವನು ಅಲ್ಲಲ್ಲಿ ತಗ್ಗುಗಳಲ್ಲಿ ನಿಂತ ಮಳೆನೀರನ್ನು ಮಳೆಬಾರದ ಸಮಯದಲ್ಲಿ ಬಳಸತೊಡಗಿದ. ಕ್ರಮೇಣ ಒಡ್ಡುಗಳನ್ನು ಕಟ್ಟಿ ನೀರನ್ನು ನಿಲ್ಲಿಸಿದ. ಹೊಳೆ-ಹಳ್ಳಗಳಿಗೆ ಕಾಲುವೆ ತೋಡಿ ಹೊಲಕ್ಕೆ ನೀರು ಹರಿಸಿಕೊಂಡು ಬೆಳೆ ಬೆಳೆಯತೊಡಗಿದ.

ತನಗೆ, ದನಕರುಗಳಿಗೆ ಕುಡಿಯುವುದಕ್ಕೆ, ಆಹಾರ ಬೇಯಿಸಿಕೊಳ್ಳುವುದಕ್ಕೆ, ಬೇಸಾಯಕ್ಕೆ ನೀರು ಪಡೆಯುವುದಕ್ಕೂ ಕೆರೆ, ಕಟ್ಟೆ, ಹೊಂಡ ಮೊದಲಾದ ಜಲಾಶಯಗಳನ್ನು ನಿರ್ಮಿಸಿಕೊಂಡು ಸ್ಥಿರತೆಯ ಹಸನಾದ ಬದುಕಿನತ್ತ ಹೆಜ್ಜೆಯಿಟ್ಟ. ಇತಿಹಾಸಪೂರ್ವದಲ್ಲಿ ಕೆರೆಗಳನ್ನು ಮೊದಲಿಗೆ ನಿರ್ಮಾಣ ಮಾಡಿದವರು ತಾಮ್ರ ಮತ್ತು ಬೃಹತ್ ಶಿಲಾಯುಗದ ಜನರು. ಪೂನಾದ ಹತ್ತಿರವಿರುವ ಇನಾಂಗಾಂವ ನಲ್ಲಿ ತಾಮ್ರಯುಗದ ಜನರು ಕಟ್ಟಿದ ಕೆರೆ ಪತ್ತೆಯಾಗಿದೆ. ಅದರ ಕಾಲ ಕ್ರಿ.ಪೂ. ೧೫೦೦. ಬೆಟ್ಟದ ಇಳಿಜಾರಿನಲ್ಲಿ ಜಲಸಂಗ್ರಹ ಕಾರ್ಯ ನಡೆದಿತ್ತು. ಇತಿಹಾಸ ಪೂರ್ವದಲ್ಲಿಯೂ ಜಲಾಶಯ ನಿರ್ಮಾಣದ ತಾಂತ್ರಿಕತೆ ಮೊಳಕೆಯೊಡೆಯಿತು. ಕರ್ನಾಟಕದ ಕೊಪ್ಪಳ ಜಿಲ್ಲೆಯ ಹಿರೇಬೆಣಕಲ್ ಗುಡ್ಡದಲ್ಲಿ ಬೃಹತ್ ಶಿಲಾಯುಗದ ಕಾಲದಲ್ಲಿಯೇ ಬಂಡೆಯನ್ನೊಡೆದು ಅದರಲ್ಲಿ ನೀರನ್ನು ಶೇಖರಿಸಿರುವುದು ತಿಳಿದು ಬರುತ್ತದೆ.

ದಕ್ಷಿಣ ಭಾರತದಲ್ಲಿ ಕ್ರಿ.ಪೂ. ಮೊದಲನೆಯ ಸಹಸ್ರಮಾನದಲ್ಲಿಯೇ ಮಹಾಶಿಲಾಯುಗದ ಮಾನವನು ನೀರಾವರಿ ವಿಧಾನಗಳನ್ನು ಅರಿತಿದ್ದನು. ಅವರು ತಮ್ಮ ಆರ್ಥಿಕ ವ್ಯವಸ್ಥೆಯ ವಿಕಾಸಕ್ಕೆ ಕೆರೆ ನೀರಾವರಿ ವಿಧಾನವನ್ನು ಅಳವಡಿಸಿಕೊಂಡಿದ್ದರು ಎಂಬುದನ್ನು ಸ್ಪಷ್ಟವಾಗಿ ಅರಿಯಬಹುದು.

೧.೧ ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 'ಹಿರೇಕೆರೂರ ತಾಲೂಕಿನ ಕೆರೆಗಳು : ಚಾರಿತ್ರಿಕ ಅಧ್ಯಯನ'ಕ್ಕೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆತ ಮಾಹಿತಿಗಳು ಮತ್ತು ಈ ಕುರಿತು ಬಂದಂತಹ ಪುಸ್ತಕಗಳು, ಲೇಖನಗಳೇ ಪ್ರಧಾನ ಆಕರಗಳಾಗಿವೆ. ಇವುಗಳ ಆಧಾರದ ಮೇಲೆ ಕೆರೆಗಳ ಕುರಿತಾದ ಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ. ಪ್ರಾಚೀನ ಕಾಲದಲ್ಲಿ ನಮ್ಮ ಪೂರ್ವಜರು ಕೆರೆಗಳನ್ನು ನಿರ್ಮಿಸಿ ಕೃಷಿಗೆ ಅನುವು ಮಾಡಿಕೊಟ್ಟಿದ್ದಾರೆ. ಅವು ಇಂದಿಗೂ ಜೀವಂತವಾಗಿರುವುದನ್ನು ನೋಡಬಹುದು. ಆ ಮೂಲಕ ಕೆರೆ ನಿರ್ಮಾಣ, ಜಲತಂತ್ರಜ್ಞಾನ, ನೀರಿನ ಬಳಕೆ, ನೀರಿನ ವಿತರಣೆ ಮತ್ತು ನಿರ್ವಹಣೆ ಮುಂತಾದ ಸಂಗತಿಗಳನ್ನು ಅರಿಯಬಹುದು. ಪ್ರಾಚೀನ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಕೆರೆಗಳನ್ನು ಅಲಕ್ಷ್ಯಕ್ಕೊಳಪಡಿಸದೇ ಅವುಗಳನ್ನು ದಾಖಲೆ ಮಾಡಿ ಸಂರಕ್ಷಿಸಿ ಮುಂದಿನ ಪೀಳಿಗೆಗೆ ಸದುಪಯೋಗವಾಗುವಂತೆ

ಮಾಡುವುದೇ ಈ ಅಧ್ಯಯನದ ಉದ್ದೇಶ. ಜೊತೆಗೆ ಪ್ರಾಚೀನ ತಂತ್ರಜ್ಞಾನವನ್ನು ವಿಶ್ಲೇಷಿಸಿ ಅರ್ಥೈಸಿಕೊಳ್ಳುವುದೂ ಸಹ ಮುಖ್ಯವಾಗಿದೆ. ಇತ್ತೀಚೆಗೆ ನಗರೀಕರಣ ಮತ್ತು ಭೂ ಒತ್ತುವರಿಯಿಂದ ಮಾಯವಾಗುತ್ತಿರುವ ಕೆರೆಗಳತ್ತ ಗಮನಹರಿಸಿ ಸಂರಕ್ಷಿಸುವುದು ಪ್ರಮುಖ ಕರ್ತವ್ಯವಾಗಿದೆ. ಹಿರೇಕೆರೂರು ತಾಲೂಕಿನಲ್ಲಿ ಸಣ್ಣ ಮತ್ತು ದೊಡ್ಡ ಪ್ರಮಾಣದ ಕೆರೆಗಳು ಸಾಕಷ್ಟಿದ್ದು, ದುಃಸ್ಥಿತಿಯಲ್ಲಿವೆ. ಸರ್ಕಾರ ಇತ್ತೀಚೆಗೆ ಕೆರೆಗಳ ಜೀರ್ಣೋದ್ಧಾರ ಮಾಡಲು ಯೋಜನೆಗಳನ್ನು ರೂಪಿಸಿವೆ. ಆದರೆ ಈ ಪ್ರಯತ್ನಗಳು ಸಾಕಷ್ಟು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಹಿಂದೆಲ್ಲ ಕೆರೆ ನಿರ್ಮಾಣ, ಕೆರೆಗಳ ಮೇಲುಸ್ತುವಾರಿ ಗ್ರಾಮಸಮಿತಿಯ ಮೇಲ್ವಿಚಾರಣೆಯಾಗಿತ್ತು. ಆದ್ದರಿಂದ ಕೆರೆಗಳನ್ನು ನಿರ್ಮಿಸಿದವರಿಗೆ ಕೆರೆಯ ಆಯಕಟ್ಟಿನಲ್ಲಿ ಭೂಮಿ ಪ್ರತಿಫಲವಾಗಿ ದೊರೆಯುತ್ತಿತ್ತು. ಬೇಸಾಯಗಾರರಿಗೆ ತೃಪ್ತಿಕರವಾಗುವಂತೆ ಗ್ರಾಮಸಮುದಾಯ ತನ್ನ ಅಧಿಕಾರಿಗಳ ಮೂಲಕ ನೀರನ್ನು ಸಮರ್ಪಕವಾಗಿ ಹಂಚುತ್ತಿತ್ತು. ಇಂತಹ ಪದ್ಧತಿಯು ಇಂದಿಗೂ ಇದೆಯೇ ಅಥವಾ ಕಣ್ಮರೆಯಾಗಿದೆಯೇ ಎಂಬುದನ್ನು ಪರಿಶೀಲಿಸಿ ಪರಾಮರ್ಶಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಹಿರೇಕೆರೂರು ತಾಲೂಕಿನ ಕೆರೆಗಳು : ಚಾರಿತ್ರಿಕ ಅಧ್ಯಯನ ಎಂಬ ಅಧ್ಯಯನವು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ. ಪ್ರಾಚೀನ ಕಾಲದಲ್ಲಿ ಕೆರೆಗಳು ಮಹತ್ವ ಸ್ಥಾನ ಪಡೆದುಕೊಂಡಿದ್ದವು. ಕೇವಲ ಗ್ರಾಮೀಣ ಪ್ರದೇಶಕ್ಕೆ ಮಾತ್ರವಲ್ಲದೆ ಎಲ್ಲ ಕಡೆಯೂ ದಿನಬಳಕೆಗೆ ಮತ್ತು ಇತರ ನಿತ್ಯದ ಕಾರ್ಯಗಳಿಗೆ ಉಪಯೋಗವಾಗುತ್ತಿದ್ದವು. ಅದರಲ್ಲಿಯೂ ಗ್ರಾಮೀಣ ಪ್ರದೇಶಗಳು ಬಹುತೇಕವನ್ನು ಆಕ್ರಮಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಕೇವಲ ನಿತ್ಯದ ಕೆಲಸಗಳಿಗೆ ಮಾನವನ ಹಾಗೆಯೇ ಪ್ರಾಣಿ–ಪಕ್ಷಿಗಳ ಜೀವನಾಡಿಯೂ ಆಗಿದ್ದವು. ಮಳೆಯು ಸಕಾಲಕ್ಕೆ ಬಾರದೆ ಹೋಗಿದ್ದರೆ ಕೆರೆಗಳೇ ಕೃಷಿಯ ಎಲ್ಲಾ ಭಾರವನ್ನು ಹೊರುತ್ತಿದ್ದವು.

ಅಂದಿನ ಕಾಲದಲ್ಲೇ ಕೆರೆಗಳು ಎಲ್ಲಾ ಕಾರ್ಯಚಟುವಟಿಕೆಗಳಿಗೆ ಸದುಪಯೋಗ ಆಗುತ್ತಿದ್ದವು. ಆದರೆ ಇಂದಿನ ಆಧುನಿಕತೆಯು ಹೊಸ್ತಿಲಲ್ಲಿರುವ ಪ್ರಸ್ತುತ ಎಲ್ಲಾ ಕಾರ್ಯಚಟುವಟಿಕೆಗಳು ಕೆರೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಎಲ್ಲೆಂದರಲ್ಲಿ ಬೋರ್‌ವೆಲ್‌ಗಳ ಸಂಖ್ಯೆ ಜಾಸ್ತಿಯಾಗಿ ಕೆರೆಗಳನ್ನು ಮೂಲೆಗುಂಪು ಮಾಡಿವೆ. ಜೊತೆಗೆ ಕೆರೆಗಳಲ್ಲಿ ಹೂಳೆತ್ತುವ ಕಾರ್ಯವು ಸರ್ಕಾರಗಳು, ಸಂಬಂಧಿಸಿದ ಪಂಚಾಯಿತಿಗಳು ಸಕಾಲಕ್ಕೆ ಕೈಗೆತ್ತಿಕೊಳ್ಳದೆ ಹೋಗಿದ್ದರಿಂದ ಕೆರೆಗಳು ಇಂದು ಸಂಪೂರ್ಣ ಹಾಳಾಗುವ ಸ್ಥಿತಿ ತಲುಪಿವೆ. ಆದ್ದರಿಂದ ಕೆರೆಗಳ ಪ್ರಸ್ತುತ ಪರಿಸ್ಥಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸ್ವತಃ ಅವಲೋಕಿಸಿ ಅದನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಹಾಗೂ ಕೆರೆಗಳನ್ನು ತಕ್ಕಮಟ್ಟಿಗೆಯಾದರೂ ಸುಧಾರಣೆ ಮಾಡಿದರೆ ಈಗಲೂ ಸಹ ಅವುಗಳಿಂದ ಉಪಯೋಗವಿದೆ ಎಂದು ಈ ಮೂಲಕ ಕೆರೆಗಳ ಮಹತ್ವವನ್ನು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಪ್ರತಿಯೊಂದಕ್ಕೂ ಕೂಡ ತನ್ನದೇಯಾದ ವ್ಯಾಪ್ತಿ ಇದ್ದೇ ಇರುತ್ತದೆ. ಯಾವುದೇ ವಿಷಯವು ತನ್ನ ವ್ಯಾಪ್ತಿಯನ್ನು ಮೀರಿ ಮುಂದುವರೆಯಲಾರದು. ಅದಕ್ಕೆ ಈ ಅಧ್ಯಯನದ ವಿಷಯವೇನು ಹೊರತಾಗಿಲ್ಲ. ವ್ಯಾಪ್ತಿ ಎಂದರೆ ಆ ಕ್ಷೇತ್ರದ ವೈಶಾಲ್ಯ, ವಿಷಯದ ಹರವು. ಅಂದರೆ ಒಂದು ಅಧ್ಯಯನದ ಮೇರೆಗಳನ್ನು ಗುರುತಿಸುವುದು ಎಂದರ್ಥ. ಒಂದು ವಿಷಯದ ಬಗ್ಗೆ ಅಥವಾ ಒಂದು ಸ್ಥಳದ ಬಗ್ಗೆ ಅಧ್ಯಯನ ಮಾಡಬೇಕಾದರೆ ಅದು ಎಷ್ಟರಮಟ್ಟಿಗೆ ತನ್ನ ಪ್ರದೇಶವನ್ನು ಎಲ್ಲಿಯವರೆಗೆ ವಿಸ್ತರಿಸಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಅಧ್ಯಯನದ ದೃಷ್ಟಿಯಿಂದ ಒಳ್ಳೆಯದು. ಪ್ರಸ್ತುತ ಅಧ್ಯಯನ ವಿಷಯದ ವ್ಯಾಪ್ತಿಯನ್ನು ಹಿರೇಕೆರೂರು ತಾಲೂಕಿನ ಅಡಿಯಲ್ಲಿ ಬರುವ ಕೆಲ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಂದರೆ ಹಿರೇಕೆರೂರು ತಾಲೂಕಿನ ವ್ಯಾಪ್ತಿಯೊಳಗೆ ಮಾತ್ರ ಕ್ಷೇತ್ರಕಾರ್ಯ ಕೈಗೊಂಡು ಅಧ್ಯಯನ ಮಾಡಲಾಗಿದೆ. ಈ ಪರಿಸರದ ಭೌಗೋಳಿಕತೆಯು ಕೆರೆಗಳ ಅಧ್ಯಯನದಲ್ಲಿ ಎಷ್ಟರಮಟ್ಟಿಗೆ ಸಹಾಯಕವಾಗಿದೆ ಎಂಬ ಹಿನ್ನೆಲೆಯಲ್ಲಿ ಇದರ ವ್ಯಾಪ್ತಿಯನ್ನು ನಿರ್ಧಿಷ್ಟಪಡಿಸಲಾಗಿದೆ.

೧.೩ ಅಧ್ಯಯನ ಸ್ವರೂಪ ಮತ್ತು ವಿಧಾನ

ಪ್ರಸ್ತುತ ಅಧ್ಯಯನದ ವಿಷಯವನ್ನಾಧರಿಸಿ ಅಧ್ಯಯನ ದೃಷ್ಟಿಯಿಂದ ಒಟ್ಟು ಐದು ಅಧ್ಯಾಯಗಳನ್ನಾಗಿ ವರ್ಗೀಕರಿಸಿಕೊಳ್ಳಲಾಗಿದೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ, ಅಧ್ಯಯನ ಸಮೀಕ್ಷೆ ಕುರಿತು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಹಿರೇಕೆರೂರು ತಾಲೂಕಿನ ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ ಏನು ಎಂಬುದನ್ನು ಸಮಗ್ರವಾದ ರೀತಿಯಿಂದ ಮಾಹಿತಿಯನ್ನು ಸಂಗ್ರಹಿಸಿ ಈ ಅಧ್ಯಾಯದಲ್ಲಿ ತೋರ್ಪಡಿಸುವ ಪ್ರಯತ್ನ ಮಾಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಕೆರೆಗಳ ನೀರಾವರಿ ಚಟುವಟಿಕೆಗಳ ಕುರಿತು ವಿವರಿಸಲಾಗಿದೆ. ಹಿರೇಕೆರೂರು ತಾಲೂಕಿನ ಮತ್ತು ತಾಲೂಕಿನಲ್ಲಿರುವ ವಿವಿಧ ಗ್ರಾಮಗಳ ಕೆರೆಗಳ ಕುರಿತಾದ ಸವಿಸ್ತಾರವಾದ ವಿಷಯ ಮತ್ತು ಆ ಕೆರೆಗಳ ನೀರಾವರಿ ಚಟುವಟಿಕೆಗಳನ್ನು ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಕೆರೆಗಳ ಕುರಿತಾದ ನಂಬಿಕೆ ಮತ್ತು ಆಚರಣೆಗಳು ಕುರಿತಾಗಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಕೆರೆಗಳಿಗೆ ಸಂಬಂಧಿಸಿದಂತೆ ವಿಶೇಷವಾದ ಕೆಲ ನಂಬಿಕೆಗಳಾದ ಕೆರೆಯನ್ನು ಕಟ್ಟಿಸುವ ಸಂದರ್ಭದಲ್ಲಿ ಅಡಚಣೆಯಾದಾಗ ಕೆರೆಗೆ ಆಹುತಿ ನೀಡುವುದು, ನರಬಲಿ, ಪರಾಣಿಬಲಿಗಳನ್ನು ಕೊಡುವುದರ ಬಗ್ಗೆ ಇಲ್ಲಿ ಸಮಗ್ರ ರೀತಿಯಲ್ಲಿ ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವಾಗಿದೆ. ಅದರ ಜೊತೆಗೆ ಕೊನೆಟಿಪ್ಪಣಿ, ಆಕರಗ್ರಂಥಗಳು, ನಕ್ಷೆಗಳು, ಛಾಯಾಚಿತ್ರಗಳೊಂದಿಗೆ ಈ ಪ್ರಬಂಧದ ಕ್ರಮವನ್ನು ಸವಿವರವಾಗಿ ವಿವರಿಸಲಾಗಿದೆ.

ಅಧ್ಯಯನ ವಿಧಾನವು ಬಹುತೇಕ ಕ್ಷೇತ್ರಕಾರ್ಯ ಮತ್ತು ಇತರ ಸಂಶೋಧನ ಗ್ರಂಥಗಳ ಪರಾಮರ್ಶೆ ಮೂಲಕ ಪ್ರಬಂಧವು ಅಕ್ಷರ ರೂಪದಿಂದ ಕಾರ್ಯರೂಪ ಪಡೆದಿದೆ ಎಂದು ಹೇಳಬಹುದಾಗಿದೆ.

೧.೪ ಅಧ್ಯಯನ ಸಮೀಕ್ಷೆ

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ತಾಲೂಕಿನ ಕುರಿತಂತೆ ಕೆಲ ಅಧ್ಯಯನಗಳು ನಡೆದಿರುವುದು ಅಧ್ಯಯನಗಳಿಂದ ತಿಳಿದು ಬಂದಿದೆ. ಇನ್ನು ಕೆರೆಗಳ ಕುರಿತಾಗಿ ಸಮಗ್ರವಾಗಿ ಯಾವುದೇ ಅಧ್ಯಯನಗಳಾಗಿಲ್ಲವೆಂದೇ ನನ್ನ ಅಭಿಪ್ರಾಯ. ಕೆಲ ಕೃತಿಗಳನ್ನು ಅಧ್ಯಯನ ಮಾಡಿದ ನಂತರ ತಾಲೂಕಿನ ಕುರಿತಂತೆ ಈ ಕೆಳಗಿನ ಅಧ್ಯಯನಗಳು ನಡೆದಿರುವುದು ಕಂಡುಬಂದಿದೆ. ಅವುಗಳನ್ನು ಈ ಕೆಳಗಿನಂತೆ ಸಮೀಕ್ಷೆಗೊಳಪಡಿಸಲಾಗಿದೆ.

ಉಷಾರಾಣಿ ಎಚ್.ಎಸ್. ಅವರ **'ಹೊಯ್ಸಳ ಕಾಲದ ಕೆರೆ ನೀರಾವರಿ : ಒಂದು ವಿಶ್ಲೇಷಣೆ'** ಎಂಬ ಲೇಖನವು ಇತಿಹಾಸ ದರ್ಶನ ಸಂಪುಟ ೭ ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ನೀರು ಮನುಷ್ಯ ಮತ್ತು ಸಕಲ ಜೀವರಾಶಿಗಳಿಗೆ ಎಷ್ಟು ಅತ್ಯಗತ್ಯ ಎಂಬುದನ್ನು ತಿಳಿಸಿದ್ದಾರೆ. ಕರ್ನಾಟಕದಲ್ಲಿ ಸುಮಾರು ೩೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ ಹೊಯ್ಸಳರು ನೀರಾವರಿಗೆ ನೀಡಿದ ಪ್ರೋತ್ಸಾಹ, ಅದರಲ್ಲೂ ಕೆರೆ ನೀರಾವರಿಯನ್ನು ಕುರಿತು ಶಾಸನೋಕ್ತವಾಗಿ ವಿಶ್ಲೇಷಿಸಿದ್ದಾರೆ. (ಗೋಪಾಲ್ ಆರ್., ಗಂಗಾಧರ ಟಿ.ಎಸ್ ಅವರು ಸಂಪಾದಿಸಿರುವ ವಿಜಯನಗರ ಅಧ್ಯಯನ ಸಂಪುಟ).

ದೀಕ್ಷಿತ್ ಜಿ.ಎಸ್. ಮತ್ತು ಇತರರು ರಚಿಸಿದ **'ಟ್ಯಾಂಕ್ ಇರಿಗೇಶನ್ ಇನ್ ಕರ್ನಾಟಕ : ಎ ಹಿಸ್ಟಾರಿಕಲ್ ಸರ್ವೆ'** ಎಂಬ ಕೃತಿಯಲ್ಲಿ ಪ್ರಾಚೀನ ಕಾಲದಿಂದ ಬ್ರಿಟಿಷರ ಆಡಳಿತದವರೆಗಿನ ಕೆರೆಗಳ ಸಂರಕ್ಷಣೆಯನ್ನು ಪರಿಶೀಲಿಸಿದ್ದಾರೆ. ಜಲನಿರ್ವಹಣೆ ಮತ್ತು ಹಣಕಾಸು ಹೂಡಿಕೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಬಂಡವಾಳ ಹೂಡಿಕೆಗಳ ಕುರಿತು ಚರ್ಚಿಸಿದ್ದಾರೆ. ಈ ಕೃತಿಯನ್ನು ನೀಲತ್ತಹಳ್ಳಿ ಕಸ್ತೂರಿಯವರು 'ಕರ್ನಾಟಕದಲ್ಲಿ ಕೆರೆ ನೀರಾವರಿ' ಎಂಬ ಶಿರೋನಾಮೆಯೊಂದಿಗೆ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದಾರೆ.

ಕೊಟ್ರಯ್ಯ ಸಿ.ಟಿ.ಎಂ. ರವರ **'ಇರಿಗೇಶನ್ ಸಿಸ್ಟಮ್ ಅಂಡರ್ ದಿ ವಿಜಯನಗರ ಎಂಪೈರ್'** ಗ್ರಂಥದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಪ್ರಮುಖ ಕೆರೆಗಳು ಹಾಗೂ

ಪೂರಕ ಕಾಮಗಾರಿಗಳಾದ ಕಾಲುವೆಗಳು, ತೂಬುಗಳು ಮತ್ತು ಕೋಡಿಗಳ ರಚನೆಯಲ್ಲಿ ನಮ್ಮ ಹಿರಿಯರು ಅನುಸರಿಸಿದ ತಂತ್ರಜ್ಞಾನದ ಅರಿವನ್ನು ಮೂಡಿಸಿದ್ದಾರೆ. ಕೆರೆಗಳನ್ನು ಕಟ್ಟುವಲ್ಲಿ ಮುಂದಾದ ರಾಜರು, ದಂಡನಾಯಕರು ಮತ್ತು ಗ್ರಾಮಗಳ ಸ್ಥಾನಿಕ ಅಧಿಕಾರಿಗಳ ಬಗ್ಗೆ ಶಾಸನಾಧಾರಗಳ ಮೂಲಕ ಪರಿಚಯಿಸಿದ್ದಾರೆ. ಇದರಲ್ಲಿ ಸಂಪೋಷಣೆ ಮತ್ತು ಬಲಿದಾನಗಳು ಎಂಬ ಅಧ್ಯಯನದಲ್ಲಿ ನೀರಾವರಿ ಕಾರ್ಯಗಳಲ್ಲಿ ನಡೆಯುತ್ತಿದ್ದ ಮಾನವರ ಮತ್ತು ಪ್ರಾಣಿಗಳ ಬಲಿದಾನಗಳ ಬಗ್ಗೆ ಚರ್ಚಿಸಿದ್ದಾರೆ. ಈ ಕೃತಿಯನ್ನು ಧ್ರುವನಾರಾಯಣ ಎಂ. ರವರು 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' ಎಂಬ ಹೆಸರಿನೊಂದಿಗೆ ಕನ್ನಡಕ್ಕೆ ಅನುವಾದಿಸಿದ್ದಾರೆ.

ಸಿ.ಎಸ್. ವಾಸುದೇವನ್ ರವರು **'ಹಂಪಿ ಪರಿಸರದ ಕೆರೆಗಳು'** ಕೃತಿಯಲ್ಲಿ ಕೆರೆ ಕಟ್ಟಿಸುವುದರೊಂದಿಗೆ ಅದರ ರಕ್ಷಣೆ ಮತ್ತು ನಿರ್ವಹಣೆಯ ಭಾದ್ಯತೆಗಳು, ಕೆರೆ ಕಟ್ಟುವವರಿಗೆ ಕಟ್ಟುಮಾನ್ಯ, ಕಟ್ಟುಕೊಡುಗೆ, ಬಿಟ್ಟುವತ್ತ, ದಸವಂದ ಇನ್ನಿತರ ಸವಲತ್ತುಗಳನ್ನು ನೀಡಿರುವುದನ್ನು ಹೇಳಿದ್ದಾರೆ. ಜೊತೆಗೆ ಕೆರೆ ಕಟ್ಟಿಸಲು ಇದ್ದ ನಂಬಿಕೆ ಮತ್ತು ಆಚರಣೆಗಳನ್ನು ಕುರಿತು ಚರ್ಚಿಸಿದ್ದಾರೆ. ಪ್ರಾಚೀನ ಭಾರತದಲ್ಲಿದ್ದ ಕೆರೆ ನೀರಾವರಿ ಪದ್ಧತಿಯೊಂದಿಗೆ ವಿಜಯನಗರ ಕಾಲದಲ್ಲಿದ್ದ ಕೆರೆ ನೀರಾವರಿ ಪದ್ಧತಿ, ಹೊಸಪೇಟೆ ತಾಲೂಕಿನ ವಿಜಯನಗರ ಕಾಲದ ಕೆರೆಗಳು, ವಿಜಯನಗರ ಕಾಲದ ತೆರಿಗೆ ಪದ್ಧತಿ, ಕೆರೆ ಕಟ್ಟಲು ಇದ್ದ ನಂಬಿಕೆ–ಆಚರಣೆಗಳನ್ನು ಕುರಿತು ಚರ್ಚಿಸುತ್ತಾ ಬಳ್ಳಾರಿ ಜಿಲ್ಲೆಯಲ್ಲಿ ಅಧಿದೇವತೆಯಾಗಿ ಪೂಜ್ಯಗೊಳ್ಳುವ ಕನ್ನೀರಮ್ಮನ ಬಗ್ಗೆ ಸಂಕ್ಷಿಪ್ತವಾಗಿ ಬರೆದಿದ್ದಾರೆ.

ಮುನಿರಾಜಪ್ಪನವರು ಸಂಪಾದಿಸಿರುವ **'ಕರ್ನಾಟಕ ಕೆರೆ ನೀರಾವರಿ ಅಧ್ಯಯನ'** ಎಂಬ ಕೃತಿಯಲ್ಲಿ ಹತ್ತು ಲೇಖನಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಕಂಡುಬರುವ ಪ್ರಮುಖವಾದ ಕೆರೆಗಳ ಚಿತ್ರಣವನ್ನು ಈ ಲೇಖನಗಳಲ್ಲಿ ನೀಡಿದ್ದಾರೆ.

ರಾಜಾರಾಂ ಹೆಗಡೆಯವರು ಸಂಪಾದಿಸಿದ **'ಕೆರೆ ನೀರಾವರಿ ನಿರ್ವಹಣೆ : ಚಾರಿತ್ರಿಕ ಅಧ್ಯಯನ'** ಎಂಬ ಗ್ರಂಥವು ಕರ್ನಾಟಕದ ಕೆಲವು ಜಿಲ್ಲೆಗಳ ಪ್ರಮುಖ ಕೆರೆಗಳ ಚಾರಿತ್ರಿಕ ಅಂಶಗಳನ್ನು ಕುರಿತಾಗಿದೆ. ಇದು ಕೆರೆಗಳ ನಿರ್ವಹಣೆ, ತಂತ್ರಜ್ಞಾನ, ಜನಸಾಮಾನ್ಯರ ಪಾತ್ರ, ಫ್ರಾನ್ಸಿಸ್ ಬುಕಾನನ್ ಕಂಡಂತೆ ನೀರಾವರಿ ಬೆಳೆಗಳ ಬಗ್ಗೆ ಚರ್ಚಿಸುವ ಲೇಖನಗಳ ಸಂಪುಟವಾಗಿದೆ.

'ಹಿರೇಕೆರೂರು ತಾಲೂಕಿನ ಗ್ರಾಮನಾಮಗಳ ಅಧ್ಯಯನ' ಕುರಿತಂತೆ ಡಾ. ಭೋಜರಾಜ ಪಾಟೀಲ ರವರು ಸಂಪೂರ್ಣ ಮಾಹಿತಿ ನೀಡುವುದರೊಂದಿಗೆ ಸಮಗ್ರ ಅಧ್ಯಯನ ಕೈಗೊಂಡಿದ್ದಾರೆ. ಇವರು ಈ ತಮ್ಮ ಕೃತಿಯಲ್ಲಿ ಹಿರೇಕೆರೂರ ತಾಲೂಕಿನಲ್ಲಿ ಬರುವ ಎಲ್ಲಾ ಗ್ರಾಮಗಳ ನಾಮ ಅಧ್ಯಯನವನ್ನು ಮಾಡಿದ್ದಾರೆ.

'ಹಿರೇಕೆರೂರು ತಾಲೂಕು ದರ್ಶನ' ಎಂಬ ಕೃತಿಯನ್ನು ಸಹ ಡಾ. ಭೋಜರಾಜ ಪಾಟೀಲ ಅವರೇ ಹೊರತಂದಿದ್ದು, ಇದರಲ್ಲಿ ಹಿರೇಕೆರೂರ ತಾಲೂಕಿನ ಸಮಗ್ರ ಪರಿಚಯ ಮಾಡಿಕೊಡುವುದರ ಮೂಲಕ ಮುಂದಿನ ಪೀಳಿಗೆಗೆ, ಸಂಶೋಧನಾರ್ಥಿಗಳಿಗೆ ಸದುಪಯೋಗವಾಗುವಂತೆ ಸಂಪೂರ್ಣ ಅಧ್ಯಯನ ಮಾಡಿ ದಾಖಲಿಸಿದ್ದಾರೆ. ಈ ರೀತಿ ಒಟ್ಟಾರೆಯಾಗಿ ಕೆರೆಗಳ ಕುರಿತಂತೆ ಅಧ್ಯಯನಗಳಾಗಿರುವುದು ಕಂಡುಬರುತ್ತದೆ.

ವಿವಿಧ ದೃಷ್ಟಿಕೋನಗಳಿಂದ ಕೆರೆಗಳಿಗೆ ಸಂಬಂಧಿಸಿದ ಅಧ್ಯಯನಗಳು ನಡೆದಿವೆ. ಆದರೆ ಹಿರೇಕೆರೂರು ತಾಲೂಕಿನ ಕೆರೆ ನೀರಾವರಿ ವ್ಯವಸ್ಥೆ ಕುರಿತಂತೆ ಸೂಕ್ಷ್ಮವಾದ ಅಧ್ಯಯನಗಳು ನಡೆಯದಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ 'ಹಿರೇಕೆರೂರು ತಾಲೂಕಿನ ಕೆರೆಗಳು : ಚಾರಿತ್ರಿಕ ಅಧ್ಯಯನ' ಎಂಬ ವಿಷಯವನ್ನು ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಸಂಶೋಧನಾ ನೆಲೆಯಲ್ಲಿ ಸಮಗ್ರವಾಗಿ ಅಧ್ಯಯನವನ್ನು ಮಾಡಲಾಗಿದೆ.

* * *

ಅಧ್ಯಾಯ – ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ – ಎರಡು

ಭೌಗೋಳಿಕ ಪರಿಸರ ಮತ್ತು ಚಾರಿತ್ರಿಕ ಹಿನ್ನೆಲೆ

ಹಾವೇರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಹಿರೇಕೆರೂರು ಒಂದು. ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ೫೪ ಕಿ.ಮೀ. ದೂರದಲ್ಲಿದ್ದು, ಹಾವೇರಿ ಜಿಲ್ಲೆಯ ದಕ್ಷಿಣದ ಮೇರೆಯಲ್ಲಿದೆ. ಮಲೆನಾಡಿನ ಸೆರಗಿನಲ್ಲಿರುವ ಈ ಊರು ಬಯಲು ನಾಡಿನಲ್ಲಿ ಗಣನೆಯಾಗಿದ್ದರೂ ಉಭಯ ಸಂಸ್ಕೃತಿಗಳ ಸಂಗಮವಾಗಿದೆ. ಹಿರೇಕೆರೂರು ಪಟ್ಟಣದ ಇತಿಹಾಸ ಸಾರಲು ಇದೆ. ಊರಲ್ಲಿ ೧೭ ಶಾಸನಗಳು, ಹಿರೇಕೆರೂರು ಹೊರಗೆ ೯ ಶಾಸನಗಳು ಲಭ್ಯವಿವೆ. ಭೌಗೋಳಿಕವಾಗಿ ಇದು ೭೫.೩೭' ಪೂರ್ವ ರೇಖಾಂಶ ಹಾಗೂ ೧೪೦.೨೦' ಉತ್ತರ ಅಕ್ಷಾಂಶದ ಮೇಲೆ ನೆಲೆಸಿದೆ. ಈ ತಾಲೂಕು ೮೦೭ ಚ. ಕೀ. ಮೀ. ವಿಸ್ತಾರ ಹೊಂದಿದ್ದು, ಸಮುದ್ರಮಟ್ಟದಿಂದ ೫೯೦ ಮೀ. ಎತ್ತರದಲ್ಲಿದೆ. ವಾರ್ಷಿಕ ಸರಾಸರಿ ೫೭೯.೧೬ ಮಿ.ಮೀ ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸದಿಂದ ಕೂಡಿದೆ. ಇಲ್ಲಿನ ಭೂಮೇಲ್ಮೈ ಕಪ್ಪು ಮಣ್ಣಿನಿಂದ ಕೂಡಿದ್ದು, ಎರೆಮಣ್ಣಿನ ಲಕ್ಷಣ ಹೊಂದಿದೆ. ಈ ತಾಲೂಕಿನ ದಕ್ಷಿಣ ಭಾಗ ಮಲೆನಾಡು ಸೀಮೆಗೆ ಹೊಂದಿಕೊಂಡಿದ್ದು, ಇದನ್ನು 'ಅರೆಮಲೆನಾಡು' ಎಂದು ಗುರುತಿಸಿದ್ದಾರೆ. ಉತ್ತರ ಭಾಗ ಬಯಲುಸೀಮೆಗೆ ಹೊಂದಿಕೊಂಡಿದೆ. ಈ ತಾಲೂಕು ಹಲವು ಬೆಟ್ಟಗಳ ಸಾಲುಗಳು ಹಾಗೂ ಸ್ಥಾನಿಕ ಬೆಟ್ಟ-ಮರಡಿಗಳಿಂದಲೂ, ಹೊಳೆ-ಹಳ್ಳ, ಹಲವು ಕೆರೆಕಟ್ಟೆ, ಕಾಲುವೆಗಳಿಂದ ಸಂಪದವಾಗಿದೆ. 'ಹಿರೇಕೆರೆ' ಕೆರೆಯಿದ್ದು, ೯೦೦ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಜಾಲಿಕಟ್ಟೆ, ಬೊರಗಟ್ಟಿ, ಹೊದೂರ, ಚನ್ನಶೆಟ್ಟಿ, ಅಡ್ಡಗಟ್ಟಿ ಕೆರೆಗಳಿವೆ. ಸುಣ್ಣದ ಕಾಲುವೆ ಹಳ್ಳ ಹರಿಯುತ್ತದೆ.

ಕೃಷಿ ಅವಲಂಬಿಸಿ ಹತ್ತಿ, ಗೋವಿನಜೋಳ, ಮೆಣಸಿನಕಾಯಿ, ಜೋಳ ಮುಖ್ಯ ಬೆಳೆಗಳು. ಸಾವಿ, ನವಣೆ, ಹೆಸರು, ಅಲಸಂದಿ, ಉದ್ದು ಉಪಬೆಳೆಗಳು. ಮಾವು, ವೀಳ್ಯದೆಲೆ, ಚಿಕ್ಕು, ಬಾಳೆ, ತೆಂಗು ಅಡಿಕೆ ತೋಟಗಾರಿಕೆ ಬೆಳೆಗಳು.[೧]

ಈ ತಾಲೂಕಿನ ಆಗ್ನೇಯ ಭಾಗದಲ್ಲಿ ತುಂಗಭದ್ರ ನದಿಯು, ದಕ್ಷಿಣ ಭಾಗದಲ್ಲಿ ಕುಮದ್ವತಿ ನದಿ ಯು ಹರಿದಿದೆ. ಹಲವು ಹಳ್ಳಗಳು ಸಾಮಾನ್ಯವಾಗಿ ಮಳೆಗಾಲದಲ್ಲಿ ಜೀವತಳೆದು ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ದೊಡ್ಡ ಕೆರೆಗಳು ಕೆಲವು. ಕಟ್ಟೆಗಳು ಮಾತ್ರ ಹೇರಳವಾಗಿವೆ. ಗುಡ್ಡದ ಸಾಲುಗಳು, ಹೊಳೆ–ಹಳ್ಳ, ಕೆರೆ–ಕಟ್ಟೆಗಳು ಸೇರಿಕೊಂಡು ತಾಲೂಕಿನಲ್ಲಿ ಅಧಿಕ ಜಲಸೂಚಿ ಗ್ರಾಮಗಳನ್ನು ಹುಟ್ಟುಹಾಕಿವೆ. ಮಾನವ ಸಂಸ್ಕೃತಿಯ ವಿಕಾಸ ಹಂತದಲ್ಲಿ ಜಲಕ್ಕೆ ಅತಿ ಮುಖ್ಯ ಸ್ಥಾನವಿದೆ. ಜಗತ್ತಿನ ಬಹುತೇಕ ನಾಗರಿಕತೆಗಳೆಲ್ಲವೂ ನದಿಗಳ ದಂಡೆಯ ಮೇಲೆಯೇ ಜೀವನವನ್ನು ಆರಂಭಿಸಿದವೆಂದು ತಿಳಿಯುತ್ತದೆ. ಸದಾ ಸಂಚಾರಿಯಾಗಿದ್ದ ಆದಿಮಾನವನು ಒಂದೆಡೆ ತನ್ನ ಅಸ್ತಿತ್ವವನ್ನು ಕಂಡುಕೊಂಡನು. ಆಗ ನೀರು ಅತಿಮುಖ್ಯವಾಗಿ ಬೇಕಾಗಿತ್ತು. ಈ ಕಾರಣದಿಂದ ಕಾಡನ್ನು ತೊರೆದು ನೀರಿನ ಸಮೀಪ ತಮ್ಮ ನೆಲೆಗಳನ್ನು ಕಟ್ಟಿಕೊಂಡನು ಅಥವಾ ಸಹಜವಾಗಿ ಹರಿಯುವ ನೀರಿಗೆ ಕೆರೆ, ಕೊಳ, ಕುಂಟೆಗಳಂತಹ ಕೃತಕ ಜನ ಸಂಗ್ರಹಗಳನ್ನು ನಿರ್ಮಿಸಿಕೊಂಡರು.[೨]

ಹಿರೇಕೆರೂರು ತಾಲೂಕಿನ ಪಶ್ಚಿಮ ಭಾಗವು ಪಶ್ಚಿಮಘಟ್ಟದ ಸೆರಗಿನಲ್ಲಿ ಬರುವುದರಿಂದ ಮಲೆನಾಡು ಸೀಮೆಯ ಸೆರಗಿನಲ್ಲಿ ಸೇರ್ಪಡೆಯಾಗುತ್ತದೆ. ಇಲ್ಲಿಯ ಭೂಪ್ರದೇಶ ಪಶ್ಚಿಮದಿಂದ ಪೂರ್ವದ ಕಡೆಗೆ ಇಳಿಜಾರಾಗಿ ಮುಂದುವರೆದಿದೆ. ಸವಣೂರು, ಹಾವೇರಿ, ಬ್ಯಾಡಗಿ, ರಾಣೇಬೆನ್ನೂರು ತಾಲೂಕುಗಳು ಸಾಮಾನ್ಯವಾಗಿ ಬೆಳವಲ ನಾಡಿನಲ್ಲಿ ಸೇರ್ಪಡೆಯಾಗುತ್ತವೆ. ಒಟ್ಟಾರೆ ಹಿರೇಕೆರೂರು ತಾಲೂಕು ಅರೆಮಲೆನಾಡು ಎನ್ನಿಸಿದೆ. ತಾಲೂಕಿನ ಭೂಮಿಯು ಕಪ್ಪು ಹಾಗೂ ಕಪ್ಪು ಮಿಶ್ರಿತ ಕೆಂಪು ಮಣ್ಣಿನಿಂದ ಸಮೃದ್ಧವಾಗಿದೆ.

ನೀರಾವರಿ

ತುಂಗಭದ್ರಾ, ಕುಮದ್ವತಿ ಇವು ತಾಲೂಕಿನ ನೀರಾವರಿ ಮೂಲಗಳು. ಈ ತಾಲೂಕಿನಲ್ಲಿ ಮಳೆ ಕಡಿಮೆ ಪ್ರಮಾಣದಲ್ಲಿ ಬಿದ್ದರೂ, ಇಲ್ಲಿಯ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಹರಿದು ಬರುತ್ತಿರುವುದರಿಂದ ಇಲ್ಲಿಯ ಜಲಸಂಪತ್ತು ಹೆಚ್ಚಿದೆ. ನದಿ ಬಯಲುಗಳು ಫಲವತ್ತಾಗಿವೆ. ಶಿಗ್ಗಾವಿ ತಾಲೂಕಿನಲ್ಲಿ ಹೊಳೆ ಹರಿಯದಿದ್ದರೂ ನೀರಾವರಿಗೇನೂ ತೊಂದರೆಯಾಗಿಲ್ಲ. ಹಳೆ ನೀರಾವರಿ ಬಾವಿಗಳು, ಆಧುನಿಕ ಕೊಳವೆ ಬಾವಿಗಳು ಭರಡುತ್ತಿವೆ. ತಾಲೂಕು ಔದ್ಯೋಗಿಕವಾಗಿ ಬಹಳ ಹಿಂದೆ ಬಿದ್ದಿದೆ. ಯಾವೊಂದೂ ದೊಡ್ಡ ಉದ್ದಿಮೆ ಇಲ್ಲ.

ಕುಮದ್ವತಿ

ಶಿಕಾರಿಪುರ ತಾಲೂಕಿನ ಹುಮಚದ ಹತ್ತಿರ ಅಗಸ್ತ್ಯ ಪರ್ವತದಲ್ಲಿ ಹುಟ್ಟಿ ಕುಂಸಿ ಮತ್ತು ಶಿಕಾರಿಪುರಗಳ ಮೂಲಕ ಉತ್ತರಕ್ಕೆ ಹರಿದು ಮಾಸೂರು ಹತ್ತಿರ ತಾಲೂಕನ್ನು ಪ್ರವೇಶಿಸಿ ಮದಗದ ಕೆರೆಯಲ್ಲಿ ಲೀನವಾಗುತ್ತದೆ. ೯೬ ಕಿ.ಮೀ. ಉದ್ದವಿರುವ ಈ ನದಿಯು ಹಾವೇರಿ ಜಿಲ್ಲೆಯಲ್ಲಿ ೩೨ ಕಿ.ಮೀ. ದೂರ ಹರಿಯುತ್ತದೆ. ಮದಗದ ಕೆರೆಗೆ ಈ ನದಿಯೇ ಜೀವಾಳವಾಗಿದೆ.

ಈ ಕೆರೆಗೆ ಸಣ್ಣ ಕಟ್ಟೆ ಇರುವುದರಿಂದ ಎಡದಂಡೆ, ಬಲದಂಡೆ ಕಾಲುವೆಗಳನ್ನು ನಿರ್ಮಿಸಲಾಗಿದೆ. ಇದರಿಂದ ಸುಮಾರಷ್ಟು ಜಮೀನು ನೀರಾವರಿಯಾಗಿದೆ.

ಹವಾಮಾನ

ತಾಲೂಕಿನಲ್ಲಿ ಉತ್ತಮ ಹವಾಗುಣವಿದೆ. ನವಂಬರ್, ಡಿಸೆಂಬರ್, ಜನವರಿ ತಿಂಗಳು ಚಳಿಗಾಲ, ಫೆಬ್ರವರಿ, ಮಾರ್ಚ್, ಏಪ್ರೀಲ್ ಬೇಸಿಗೆಕಾಲವಾಗಿದ್ದು, ಮೇದಿಂದ ಅಕ್ಟೋಬರ್ ವರೆಗೆ ಮಳೆಗಾಲವಾಗಿರುತ್ತದೆ. ತಾಲೂಕಿನ ಸರಾಸರಿ ಮಳೆ ೭೫೩ ಮಿ.ಮೀ. ಈ ತಾಲೂಕಿನಲ್ಲಿ ಹುಲ್ಲು ಯಥೇಚ್ಚವಾಗಿ ಬೆಳೆಯುವುದರಿಂದ ಪಶುಪಾಲನೆಯ ಜೊತೆಗೆ ಹೈನುಗಾರಿಕೆಯೂ ಲಾಭದಾಯಕ ವೃತ್ತಿಯಾಗಿದೆ. ಇಡೀ ತಾಲೂಕಿನಲ್ಲಿ ಕೆ.ಎಂ.ಎಫ್. ಸಂಸ್ಥೆ, ಪೂರಕವಾಗಿ ಕೆಲವು ಖಾಸಗಿ ಸಂಸ್ಥೆಗಳು, ಹಾಲು ಶೇಖರಿಸುವ, ಶುದ್ಧೀಕರಿಸುವ ವಿತರಿಸುವ ಉದ್ಯೋಗದಲ್ಲಿ ತೊಡಗಿಕೊಂಡಿವೆ.

ಹಿರೇಕೆರೂರು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರ ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿಯ ವ್ಯಾಪ್ತಿಗೆ ಒಳಪಟ್ಟಿದೆ. ಹಿರೇಕೆರೂರ ಪಟ್ಟಣ ಪಂಚಾಯತಿಯನ್ನು ಹೊಂದಿದೆ. ಕೊಳವೆಬಾವಿಗಳ ಮೂಲಕ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ನಳಗಳ ಮೂಲಕ ಕುಡಿಯುವ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೧೯೧೯೧. ಇದರಲ್ಲಿ ಪುರುಷರು ೯೭೭೮, ಮಹಿಳೆಯರು ೯೪೨೩ ರಷ್ಟಿದ್ದಾರೆ. ಸಾಕ್ಷರತಾ ಪ್ರಮಾಣ ೧೫೧೧೯. ಇದರಲ್ಲಿ ಪುರುಷರು ೭೯೦೦, ಮಹಿಳೆಯರು ೭೨೧೯. ೨೦ ಅಂಗನವಾಡಿ ಕೇಂದ್ರಗಳು, ಕನ್ನಡ ಮತ್ತು ಉರ್ದು ಮಾಧ್ಯಮ ಸೇರಿ ಒಟ್ಟು ೮ ಸರಕಾರಿ ಪ್ರಾಥಮಿಕ ಶಾಲೆಗಳು, ೨ ಅನುದಾನರಹಿತ ಖಾಸಗಿ ಪ್ರಾಥಮಿಕ ಶಾಲೆಗಳಿವೆ. ೨ ಸರಕಾರಿ ಪ್ರೌಢ ಶಾಲೆ, ೬ ಅನುದಾನಸಹಿತ, ೨ ಅನುದಾನರಹಿತ ಪ್ರೌಢ ಶಾಲೆಗಳಿವೆ. ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅನುದಾನಿತ ಕೆ.ಎಚ್. ಪಾಟೀಲರ ಪದವಿ ಪೂರ್ವ ಕಾಲೇಜು, ಶ್ರೀ ಸಂಗಮೇಶ್ವರ ಪದವಿ ಪೂರ್ವ ಕಾಲೇಜುಗಳಿವೆ. ಬಿ.ಸಿ. ಪಾಟೀಲ್ ಪದವಿ ಪೂರ್ವ ಕಾಲೇಜುಗಳಿವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆ, ರಾಣಿಚೆನ್ನಮ್ಮ ಶಾಲೆಗಳಿವೆ. ಕೈಗಾರಿಕೆ ತರಬೇತಿ ಕೇಂದ್ರ, ಪಾಲಿಟೆಕ್ನಿಕ್ ಕೇಂದ್ರ, ಶಿಕ್ಷಕರ ತರಬೇತಿ ಕೇಂದ್ರಗಳಿವೆ.[೩]

ತಾಲೂಕಿನ ಪ್ರಾಗೈತಿಹಾಸ

ಪ್ರಾಗೈತಿಹಾಸ ಕಾಲದಲ್ಲಿ ಶಿಲಾಯುಗದ ಮಾನವರು ಈ ಭಾಗದಲ್ಲಿ ವಾಸವಾಗಿದ್ದುದರ ಕುರುಹುಗಳು ಈ ತಾಲೂಕಿನಲ್ಲಿ ಸಾಕಷ್ಟು ದೊರತಿವೆ. ಇಲ್ಲಿ ಹರಿಯುವ ತುಂಗಭದ್ರಾ, ಕುಮದ್ವತಿ ನದಿಗಳು ಪ್ರಾಗೈತಿಹಾಸಿಕ ನೆಲೆಗಳಿಗೆ ಆಸ್ಪದವಿತ್ತಿವೆ. ಹಳ್ಳೂರು, ನಾಗವಂದ, ಭೈರನಪಾದ,

ಗುಡ್ಡದಮಾದಾಪುರ, ಶಿರಗಂಬಿ ತಾಲೂಕಿನ ಪ್ರಾಗೈತಿಹಾಸಿಕ ನೆಲೆಗಳಾಗಿವೆ. ಇವುಗಳ ಕಾಲವನ್ನು ೧೫೦,೦೦೦ ವರ್ಷಗಳ ಈಚಿನಿಂದ ಪೂರ್ವದಲ್ಲಿಯ ಸಮಯವೆಂದು ನಿರ್ಧರಿಸಲಾಗಿದೆ. (ಇಲ್ಲಿ ೨೦೦೦ ವರ್ಷಗಳ ಹಿಂದಿನ ಕಾಲದ ವಸ್ತುಗಳು ದೊರೆತಿವೆ). ಹಳ್ಳೂರು ಉತ್ಖನನದಲ್ಲಿ ದೊರೆತ ಕಲ್ಲಿನ ಆಯುಧಗಳು ಶಿಲಾಯುಗಕ್ಕೆ ಸಂಬಂಧಿಸಿವೆ. ಇಲ್ಲಿ ದೊರೆತ ಕಬ್ಬಿಣದ ಉಪಕರಣಗಳು ಇತಿಹಾಸಪೂರ್ವ ಕಾಲದ ಮಾನವನು ದಕ್ಷಿಣ ಭಾರತದಲ್ಲಿ ಬಹು ಹಿಂದೆಯೇ ಅಂದರೆ ಸು. ಕ್ರಿ. ಪೂ. ೧೨೦೦ ರ ಸುಮಾರಿಗೆ ಕಬ್ಬಿಣದ ಬಳಕೆಯನ್ನು ಅರಿತಿದ್ದನೆಂಬುದಕ್ಕೆ ಸಾಕ್ಷಿ ಹೇಳುತ್ತವೆ. ಇಲ್ಲಿ ದೊರೆತ ಗಡಿಗೆಗಳಲ್ಲಿ ತುಂಬಿಟ್ಟ ರಾಗಿಯು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಈ ಭಾಗದ ಜನರು ಕೃಷಿ ವ್ಯವಸಾಯವನ್ನು ಕೈಗೊಂಡಿದ್ದಲ್ಲದೆ ರಾಗಿ ಬೆಳೆಯುತ್ತಿದ್ದುದಕ್ಕೆ ಸಾಕ್ಷಿ ಹೇಳುತ್ತದೆ.

ಮೋಟೆಬೆನ್ನೂರ (ಬ್ಯಾಡಗಿ ತಾಲೂಕು) ಬಳಿಯ ಬಾಚಿಗುಡ್ಡದಲ್ಲಿ ಕಲ್ಲಿನ ಆಯುಧಗಳು ಮತ್ತು ಹಿಂದಿನ ಕಾಲದ ಸಂಸ್ಕೃತಿಗಳ ಮಡಿಕೆ, ಕುಡಿಕೆಗಳೂ, ದೊರೆತಿವೆ. ಸವಣೂರು ತಾಲೂಕಿನ ಜಲ್ಲಾಪುರವನ್ನು ಶಿಲಾಯುಗದ ನೆಲೆ ಎಂದು ಗುರುತಿಸಲಾಗಿದೆ. ಹಾನಗಲ್ಲು ತಾಲೂಕು ವರ್ದಿಯಲ್ಲಿ ಹಳೇಶಿಲಾಯುಗದ ಸಲಕರಣೆಗಳು ದೊರೆತಿವೆ. ರಾಣೇಬೆನ್ನೂರು ತಾಲೂಕಿನ ನದಿಹರಳಹಳ್ಳಿಯಲ್ಲಿ ಸೂಕ್ಷ್ಮಶಿಲಾಯುಧ (ಮೈಕ್ರೋಲಿಥ್ಸ್) ದೊರೆತಿವೆ. ಕಬ್ಬಿಣಯುಗದ ಬೃಹತ್ ಶಿಲಾ (ಮಗಾಲಿಥಿಕ್) ಸಂಸ್ಕೃತಿಯ ಮಡಿಕೆ ಕುಡಿಕೆಗಳು ಹಳ್ಳೂರು, ಪುರದಕೇರಿ, ಹಾದರಗೇರಿಯಲ್ಲಿ ಲಭ್ಯವಾಗಿವೆ. ಈ ಮಡಿಕೆಗಳ ಮೇಲೆ ತಿಳಿ ಬಿಳಿ ಬಣ್ಣದ ಚಿತ್ರಗಳಿವೆ. ಇಲ್ಲಿಯ ಜನರಿಗೆ ಕುದುರೆ ಪರಿಚಿತವಾಗಿರಲಿಲ್ಲ.

ಬೃಹತ್ ಶಿಲಾಯುಗದ ಜನರ ಕಲ್ಪನೆಗಳು, ಶಿಲಾವೃತ್ತಗಳು ಈ ಜಿಲ್ಲೆಯಲ್ಲಿ ಕಂಡುಬಂದಿವೆ. ರಾಣೇಬೆನ್ನೂರು ತಾಲೂಕು ಅಸುಂಡಿ, ಕೋಟಿಹಾಳ, ಕೂಸನೂರು, ಹಾಗೂ ಮಲಕನಹಳ್ಳಿಗಳಲ್ಲಿಯೂ, ಹಾವೇರಿ ತಾಲೂಕು ಬೆನಕನಹಳ್ಳಿ, ಅಗಡಿಗಳಲ್ಲಿಯೂ, ಬ್ಯಾಡಗಿ ತಾಲೂಕು ಮೋಟೆಬೆನ್ನೂರು, ಕದರಮಂಡಲಗಿಗಳಲ್ಲಿ ಇಂಥ ಗೋರಿಗಳಿವೆ. ಇವುಗಳನ್ನು ಸ್ಥಳೀಯರು ಪಾಂಡವರ ಕಟ್ಟೆ, ಸಿದ್ಧರಕಟ್ಟೆ ಎಂದೆಲ್ಲಾ ಕರೆಯುತ್ತಾರೆ. ಇವುಗಳ ಕಾಲಮಾನ ಕ್ರಿಪೂ. ೧೧೦೦ ರಿಂದ ೩೦೦ ಎಂದು ಗುರುತಿಸಲಾಗಿದೆ.

ಚಾರಿತ್ರಿಕ ಹಿನ್ನೆಲೆ

ಈ ತಾಲೂಕಿನಲ್ಲಿ (ಹಾವೇರಿ ಜಿಲ್ಲೆಯಲ್ಲಿ) ಕಂಡುಬಂದಿರುವ ಸುಮಾರು ೨೧ ರಾಜಕೀಯ ವಿಭಾಗಗಳು, ಚಕ್ರವರ್ತಿ ಮನೆತನಗಳ ಅಧೀನರಾದ ಮಹಾಮಂಡಳೇಶ್ವರರಿಂದಲೊ, ಮಂಡಳೇಶ‌ವರರಿಂದಲೊ, ಇವರುಗಳ ರಾಣಿಯರು, ಪತ್ನಿಯರಿಂದಲೊ ಅಥವಾ ಚಕ್ರವರ್ತಿ ನಿಯಮಿಸಿದ ಅಧಿಕಾರಿಗಳಿಂದ ಆಳಲ್ಪಡುತ್ತಿದ್ದವು.

ಈ ಭಾಗವನ್ನು ಆಳಿದ ಚಕ್ರವರ್ತಿ ಮನೆತನಗಳು

೧. ಗುಪ್ತರು (ಗುತ್ತರು)

ಇತಿಹಾಸ ಪ್ರಾರಂಭಕಾಲದಿಂದ ಕುಂತಳ ನಾಡನ್ನು ನಂದರು, ಮೌರ್ಯರು, ಗುಪ್ತರು ಉತ್ತರ ಭಾರತದಿಂದ ಆಳಿದರೆಂದು ಇತಿಹಾಸ ಹೇಳುತ್ತದೆ. ನಂದರು, ಮೌರ್ಯರು ಆಡಳಿತ ನಡೆಸಿದರೆಂಬುದಕ್ಕೆ ಆಧಾರಗಳನ್ನು ಕೊಡುವಲ್ಲಿ ಜಿಲ್ಲೆಯನ್ನೊಳಗೊಂಡಂತೆ ತಾಲೂಕು ಸಹ ಅಗ್ರಸ್ಥಾನ ಪಡೆದಿದೆ.

ಗುತ್ತಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ ಗುತ್ತವೊಳಲಿನ ಗುತ್ತರು ತಾವು ಉತ್ತರದ ಗುಪ್ತರ ವಂಶಸ್ಥರೇ ಎಂದು ಹೇಳಿಕೊಂಡಿದ್ದಾರೆ. ಅದೇ ರೀತಿ ಸುಮಾರು ೭ ನೆಯ ಶತಮಾನದ ಹಿರೇಬಿದರಿ ಶಾಸನ 'ಗುಪ್ತರ ವಂಶೋತ್ತಮನ್' ಎಂಬ ವ್ಯಕ್ತಿಯೋರ್ವನ ಹೆಸರನ್ನು ಸ್ಪಷ್ಟವಾಗಿ ಹೇಳುತ್ತದೆ. ಇವು ಗುಪ್ತರು ಈ ಭಾಗವನ್ನು ಆಳಿದರೆಂಬುದಕ್ಕೆ ಸ್ಪಷ್ಟ ನಿದರ್ಶನಗಳಾಗಿವೆ.

೨. ಶಾತವಾಹನರು

ಕುಂತಳನಾಡು ಗುಪ್ತರ ಅನಂತರ ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದಿತು. 'ಕುಂತಳ ಸಾತಕರ್ಣಿಗಳು' ಎಂಬ ಅವರದೊಂದು ಉಪವಂಶ ಇದನ್ನು ಆಳಿದ ಬಗೆಗೆ ಆಧಾರಗಳಿವೆ. ಇಂಥ ಆಧಾರ ಒದಗಿಸುವಲ್ಲಿ ಹಿರೇಕೆರೂರು ತಾಲೂಕು ಪ್ರಮುಖ ಪಾತ್ರವಹಿಸಿದೆ.

ಶಾತವಾಹನರ ಕಾಲದಲ್ಲಿ ದೊಡ್ಡಗಾತ್ರದ ಇಟ್ಟಿಗೆಗಳ ಬಳಕೆ ಆರಂಭವಾಗಿತ್ತು. ಇಂಥ ಇಟ್ಟಿಗೆಗಳು '೮ ೧೨ ೬' ಗಾತ್ರದವು. ಇಂಥ ಇಟ್ಟಿಗೆಗಳಿಂದ ಕಟ್ಟಿದ ದೇವಾಲಯಗಳು ಹಿರೇಕೆರೂರು ತಾಲೂಕಿನ ಚಿಕ್ಕೇರೂರು, ಸಾತೇನಹಳ್ಳಿಗಳಲ್ಲಿ ಕಂಡುಬಂದಿವೆ. ಶಿಗ್ಗಾವಿಯ ಪಶ್ಚಿಮದಲ್ಲಿ ಇಂಥ ಇಟ್ಟಿಗೆ ಕಟ್ಟಡದ ಗೋಡೆ ಹಾಗೂ ಅವಶೇಷಗಳು, ಹಾನಗಲ್ಲಿನಲ್ಲಿ ಇಟ್ಟಿಗೆ ಕೋಟೆ ಗೋಡೆಗಳ ಅವಶೇಷಗಳು ಕಂಡುಬಂದಿವೆ. ಶಿಗ್ಗಾವಿಯಲ್ಲಿ ಬ್ರಾಹ್ಮೀಲಿಪಿಯುಳ್ಳ ಕೆಲವು ನಾಣ್ಯಗಳು ದೊರೆತಿವೆ. ಇವು ಶಾತವಾಹನರ ಕಾಲದವೆಂದು ವಿದ್ವಾಂಸರು ಅಭಿಪ್ರಾಪಟ್ಟಿದ್ದಾರೆ. ಹಿರೇಕೆರೂರು ತಾಲೂಕಿನ ಕುಡುಪಲಿ ಗ್ರಾಮದಲ್ಲಿ ಶಾತವಾಹನರ ಕಾಲದ ಅವಶೇಷಗಳು ಹಾಗೂ ಆಧಾರಗಳು ದೊರೆತಿವೆ.

೩. ಕದಂಬರು

ಕ್ರಿ.ಶ. ೪ ನೆಯ ಶತಮಾನದಿಂದ ೬ ನೆಯ ಶರಮಾನದವರೆಗೆ ಬನವಾಸಿಯನ್ನು ರಾಜಧಾನಿ ಮಾಡಿಕೊಂಡು ಕುಂತಳನಾಡನ್ನು ಆಳಿದ ಬನವಾಸಿ ಕದಂಬರು ಆದಿಕದಂಬರೆಂದು

ಹೆಸರಾದವರು. ಇವರಿಗೆ ಸಂಬಂಧಿಸಿದಂತೆ ಮೂರು ತಾಮ್ರ ಪಟಗಳು ದೇವಗಿರಿ (ಹಾವೇರಿ ತಾಲೂಕು)ಯಲ್ಲಿಯೂ, ಒಂದು ತಾಮ್ರಪಟ ಬ್ಯಾಡಗಿ ತಾಲೂಕು ಮತ್ತೂರಿನಲ್ಲಿಯೂ ದೊರೆತಿದೆ.

ಮಯೂರವರ್ಮನಿಂದ ಐದನೆಯವನಾದ ಅರಸ ಕಾಕುತ್ಸವರ್ಮ. ಇವನ ಮೂವರು ಮಕ್ಕಳಲ್ಲಿ ಹಿರಿಯವನು ಬನವಾಸಿಯಿಂದ ರಾಜ್ಯಭಾರ ಮಾಡಿದರೆ, ಮೂರನೆಯವನಾದ ೧ ನೇ ಕೃಷ್ಣವರ್ಮನು ಅಣ್ಣನಿಂದ ದೂರ ಉಳಿದು ತನ್ನ ಪ್ರತ್ಯೇಕ ರಾಜ್ಯಾಡಳಿತ ಪ್ರಾರಂಭಿಸಿದನು. ಇದಕ್ಕಾಗಿ ಅವನು ಆರಿಸಿಕೊಂಡು ರಾಜಧಾನಿ ಸ್ಥಾಪಿಸಿದ ಊರು ಹಾವೇರಿ ತಾಲೂಕಿನ ದೇವಗಿರಿ. ಈ ಊರಿಗೆ ತ್ರಿಪರ್ವತವೆಂದೂ ಕರೆಯಲಾಯಿತು. ೧ ನೇ ಕೃಷ್ಣವರ್ಮನಿಂದ ಪ್ರಾರಂಭವಾದ ಈ ಶಾಖೆ ಮುಂದೆ ಆರು ತಲೆಮಾರುಗಳವರೆಗೆ ಇಲ್ಲಿಂದಲೇ ಆಡಳಿತ ನಡೆಸಿತು. ಕ್ರಿ.ಶ. ೫೧೬ ರಿಂದ ೫೪೦ ರವರೆಗೆ ಆಳಿದ ೨ ನೇ ಕೃಷ್ಣವರ್ಮನು ಮೂಲವಂಶದ ಹರಿವರ್ಮನನ್ನು ಸೋಲಿಸಿ ತನ್ನ ರಾಜಧಾನಿ ಬನವಾಸಿಗೇ ಸ್ಥಳಾಂತರಿಸಿದನು. ಆದರೆ ಅವನ ಮೊಮ್ಮಕ್ಕಳು ಇಲ್ಲಿಯೇ ಉಳಿದರು.

೪. ಬಾದಾಮಿ ಚಾಲುಕ್ಯರು

ಕ್ರಿ.ಶ. ೫೭೮ ರಿಂದ ೭೫೭ ರವರೆಗೆ ಕನ್ನಡ ನಾಡನ್ನು ಆಳಿದ ಬಹುಪ್ರತಿಷ್ಠಿತ, ಪ್ರಾಚೀನ ಅರಸು ಮನೆತನವಿದು. ಇಂಥ ಪ್ರಾಚೀನತಮ ರಾಜಮನೆತನದ ಬಗೆಗೆ ದಾಖಲೆಗಳು ದೊರೆಯುವುದು ಬಹು ಅಪರೂಪದ ಸಂಗತಿ. ಆದರೆ ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾವಿ, ಅಕ್ಕಿಆಲೂರುಗಳಲ್ಲಿ ತಾಮ್ರಪಟಗಳು ದೊರೆತಿವೆ. ಉಳಿದೆಡೆಗಳಲ್ಲಿ ಸುಮಾರು ೧೭ ಶಾಸನಗಳು ಲಭಿಸಿದ್ದು, ಇವರ ಇತಿಹಾಸದ ಮೇಲೆ ಬೆಳಕು ಚೆಲ್ಲಿವೆ. ಹಾವೇರಿ ತಾಲೂಕಿನ ಗಣಜೂರು ಎಂಬ ಚಿಕ್ಕ ಗ್ರಾಮದಲ್ಲಿ ಬಾದಾಮಿ ಚಾಲುಕ್ಯರ ವಿಕ್ರಮಾದಿತ್ಯನ ಒಂದು, ವಿಜಯಾದಿತ್ಯನ ಒಂದು ಶಾಸನ ದೊರೆತಿವೆ. ವಿಜಯಾದಿತ್ಯನ ಇನ್ನೊಂದು ಶಾಸನ ಶಿಗ್ಗಾವಿ ತಾಲೂಕಿನ ಬನ್ನಿಕೊಪ್ಪದಲ್ಲಿದೆ.

ಹರಿಹರದ ಒಂದು ತಾಮ್ರ ಶಾಸನವು ಕ್ರಿ.ಶ. ೬೯೫ ರಲ್ಲಿ ಬಾದಾಮಿ ಚಾಲುಕ್ಯರ ಚಕ್ರವರ್ತಿ ವಿನಯಾದಿತ್ಯನು ಹಾವೇರಿ ತಾಲೂಕು ಕರಜಗಿಯಲ್ಲಿ ಬೀಡು ಬಿಟ್ಟಿದ್ದನೆಂದು ಹೇಳುತ್ತದೆ.

೫. ರಾಷ್ಟ್ರಕೂಟರು

ರಾಷ್ಟ್ರಕೂಟರನ್ನು ಕುರಿತ ಶಾಸನಗಳು ಕರ್ನಾಟಕದಲ್ಲಿ ಸುಮಾರು ೭೦೦ ಇರಬಹುದಾದರೆ ಹಾವೇರಿ ಜಿಲ್ಲೆಯೊಂದೇ ೧೦೦ ರಷ್ಟು ಶಾಸನಗಳನ್ನು ಹೊಂದಿದ್ದು ಈ ಮನೆತನದ ಇತಿಹಾಸಕ್ಕೆ ಆಧಾರ ಒದಗಿಸುವ ಮೂಲಕ ದಾಖಲೆ ನಿರ್ಮಿಸಿದೆ. ರಾಷ್ಟ್ರಕೂಟರ ಆರಂಭಿಕ ಅರಸ ಅಕಾಲವರ್ಷ ೧ ನೇಯ ಕೃಷ್ಣನನ್ನು ಕುರಿತ ದಾಖಲೆಗಳು ವಿರಳ. ಅದರಲ್ಲಿ ಕನ್ನಡ ಶಾಸನಗಳು ತೀರ

ವಿರಳ. ಹೀಗಿರುವಾಗ ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಹತ್ತಿಮತ್ತೂರು ಗ್ರಾಮ ಒಂದು ಕನ್ನಡ ಶಾಸನವನ್ನು ಕಾಣಿಕೆಯಾಗಿತ್ತಿರುವುದು ಅಭಿಮಾನದ ಸಂಗತಿ.

೬. ಕಲ್ಯಾಣ ಚಾಲುಕ್ಯರು

ಈ ಅರಸು ಮನೆತನದ ಬಗೆಗೆ ಹಾವೇರಿ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಾಸನಗಳಿವೆ. ಇವುಗಳಲ್ಲಿ ಅತ್ಯಂತ ಮಹತ್ವದ ಒಂದು ಶಾಸನ ಹಿರೇಕೆರೂರು ತಾಲೂಕಿನ ಚಿಕ್ಕೇರೂರಿನ ಬಳರಿ ದೇವಾಲಯದ ಮುಂದಿನದು. ಇದರ ಕಾಲ ಕ್ರಿ.ಶ. ೯೯೫. ಇದರಲ್ಲಿ ನೂರ್ಮಡಿ ತೈಲಪನು ಉತ್ತರದ ಮಾಳವರ ಪರಮಾರ ದೊರೆ ಮುಂಜರಾಜನ ಮೇಲೆ ಏರಿಹೋಗಿ ಜಯಿಸಿದ ವಿಷಯವಿದೆ. ಕರ್ನಾಟಕದಲ್ಲಿ ಈ ವಿಷಯ ಹೇಳುವ ಶಾಸನ ಇದೊಂದೇ ಆಗಿದೆ.

೭. ಮಾಂಡಲಿಕರು

ಹಾನಗಲ್ಲು ಕದಂಬರು, ರಟ್ಟೀಹಳ್ಳಿ ಕದಂಬರು, ನಾಗರಖಂಡ ಕದಂಬರು ಎಂಬ ಮೂರು ಮಾಂಡಲಿಕ ಕದಂಬರ ಶಾಸನಗಳು ಹಾವೇರಿ ಜಿಲ್ಲೆಯಲ್ಲಿವೆ. ಬಾಸವೂರು-೧೪೦, ಸತ್ತಳಿಗೆ-೭೦, ಗುತ್ತಲದ ಗುತ್ತರು, ಬಂಕಾಪುರದ ಚೆಲ್ಲಕೇತನ ವಂಶದವರು, ಸಾಮಂತದೊರೆ ಹಾವನೂರು ಹನುಮಂತರಾಯ, ಸವಣೂರು ನವಾಬರು ಇವರೆಲ್ಲರಿಗೂ ಸಂಬಂಧಿಸಿದಂತೆ ಇಲ್ಲಿ ಶಾಸನಗಳು ಲಭ್ಯವಿವೆ. ವಿಜಯನಗರ ಅರಸರ ಅನಂತರ ಸುಮಾರು ೧೫೭೫ ರಿಂದ ಈ ಪ್ರದೇಶ ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೬೮೬ ರಿಂದ ೧೮೨೦ ರ ಕಾಲದಲ್ಲಿ ಮೊಘಲರ ಆಡಳಿತ ನಡೆದಿತ್ತು. ಹೈದರಾಬಾದ್ ನಿಜಾಮರ ಆಡಳಿತಕ್ಕೆ ಮತ್ತು ಸ್ವಲ್ಪ ಕಾಲ ಟಿಪ್ಪುಸುಲ್ತಾನನ ಆಡಳಿತಕ್ಕೆ ಸವಣೂರು ಮತ್ತು ಸುತ್ತಲ ಪ್ರದೇಶಗಳು ಸೇರಿದ್ದವು. ಮುಂದೆ ಮರಾಠರ ಆಡಳಿತ ಬಂದಿತು. ಕ್ರಿ.ಶ. ೧೮೧೮ ರಿಂದ ೧೮೩೦ ರವರೆಗೆ ಬ್ರಿಟಿಷರ ಆಡಳಿತಕ್ಕೆ ಸೇರಿತ್ತು.

ಹಾವೇರಿ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಹಿರೇಕೆರೂರು ಒಂದು. ಇದು ಹಾವೇರಿಯಿಂದ ಆಗ್ನೇಯಕ್ಕೆ ೫೪ ಕಿಲೋಮೀಟರ್ ದೂರದಲ್ಲಿದೆ. ಪ್ರಾಚೀನ ಕಾಲದ ಶಾಸನಗಳಲ್ಲಿ 'ಪಿರಿಯ ಕೆರೆಯೂರು' 'ಮಹಾತಟಾಕ ಗ್ರಾಮ' ಎಂದೆಲ್ಲ ಉಲ್ಲೇಖವಾಗಿದ್ದು, ಕಾಲಾಂತರದಲ್ಲಿ ಹಿರೇಕೆರೂರು ಎಂಬ ಹೆಸರಿನಿಂದ ಕರೆಯುವ ರೂಢಿಯಾಗಿದೆ. ಪ್ರಾಚೀನ ಕಾಲದಲ್ಲಿ ಬನವಾಸಿ ೧೨೦೦೦ ನಾಡಿಗೆ ಸೇರಿದ್ದ ಪಿರಿಯ ಕೆರೆಯೂರು ೧೨ ಹಳ್ಳಿಗಳ ಆಡಳಿತ ಕೇಂದ್ರವಾಗಿ ಸಾವಿರ ಮಹಾಜನರನ್ನು ಒಳಗೊಂಡು ಮಹಾ ಅಗ್ರಹಾರ ಗ್ರಾಮವಾಗಿತ್ತೆಂದು ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಶಾಸನಗಳಲ್ಲಿ ಬರುವ 'ತೆಂಕ ಅಯ್ಯಾವೊಳೆ' ಪಿರಿಯ ಕೆರೆಯೂರು ಎಂಬ ಉಲ್ಲೇಖವು ಇದೊಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತೆಂಬ ಅಂಶವನ್ನು ಸೂಚಿಸುತ್ತದೆ.

ಹಿರೇಕೆರೂರು ಪಟ್ಟಣವು ತಾಲೂಕಿನ ಪಶ್ಚಿಮ ದಿಕ್ಕಿನಲ್ಲಿದೆ. ಈ ಪಟ್ಟಣದಲ್ಲಿ ೧೭ ಶಾಸನಗಳಿದ್ದು, ಅದರಲ್ಲಿ ೯ ಶಾಸನಗಳು ಪ್ರಕಟಗೊಂಡಿವೆ.[೫] ಇವಲ್ಲದೆ ಹೊಸದಾಗಿ ಮತ್ತೆರಡು ಶಾಸನಗಳು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು, ಒಟ್ಟು ೧೯ ಶಾಸನಗಳು ಈ ಪಟ್ಟಣದಲ್ಲಿ ದೊರಕಿವೆ. ಅವುಗಳು ಈ ಪಟ್ಟಣದ ಐತಿಹಾಸಿಕ ಮಹತ್ವವನ್ನು ಅರಿಯಲು ಸಹಾಯಕವಾಗಿವೆ. ಈ ಶಾಸನಗಳು ಕ್ರಿ.ಶ. ೯೬೦ ಕ್ಕೆ ಸೇರಿದ ಎರಡು ಶಾಸನಗಳಾಗಿದ್ದು, ಇವೇ ಇಲ್ಲಿಯ ಅತೀ ಪ್ರಾಚೀನ ಶಾಸನಗಳು. ಕ್ರಿ.ಶ. ೧೦೮೪ ಹಾಗೂ ಇನ್ನೊಂದು ಶಾಸನ ಇವು ಇಲ್ಲಿಯ ಅಗ್ರಹಾರವನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೦೫೪, ೧೦೬೦ ಹಾಗೂ ೧೧೨೧ ರ ಶಾಸನಗಳು ಪಿರಿಯಕೆರೆಗೆ ದಾನ ಮಾಡಿದ ಸಂಗತಿ ಒಳಗೊಂಡಿವೆ. ಇತರ ಶಾಸನಗಳು ಭೂದಾನ, ವೀರಮರಣ, ಮಹಾಸತಿಯಂತಹ ವಿಷಯಗಳನ್ನು ಒಳಗೊಂಡಿವೆ.[೬]

ಹಿರಿದಾದ ಕೆರೆಯನ್ನು ಹೊಂದಿರುವ ಈ ಊರಿಂದ ಇದುವರೆಗೆ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಹಾಗೂ ವಿಜಯನಗರ ಅರಸರ ೧೭ ಶಾಸನಗಳು ವರದಿಯಾಗಿವೆ. ತೋಟದ ವೀರಣ್ಣನ ಗುಡಿ ಹಿಂದಿರುವ ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಕಾಲದ ಕ್ರಿ.ಶ. ೯೬೦ ರ ಗೋಸಾಸ ಶಾಸನಗಳು ಮಾರಸಿಂಗ ಹಾಗೂ ಇತರರು ಗೋಸಾಸ ದಾನ ಮಾಡಿದ ಅಂಶವನ್ನು ತಿಳಿಸುತ್ತವೆ. ಊರ ಹೆಗ್ಗೆರೆಗೆ ಬೇರೆ ಬೇರೆ ಅರಸರ ಆಳ್ವಿಕೆಯಲ್ಲಿ ವಿವಿಧ ಅಧಿಕಾರಿಗಳು ಮತ್ತು ಗಣ್ಯರು ನೀಡಿದ ದಾನಗಳ ವಿವರವನ್ನು ಕ್ರಿ.ಶ. ೧೦೫೪, ಕ್ರಿ.ಶ. ೧೦೬೦ ಹಾಗೂ ಕ್ರಿ.ಶ. ೧೧೩೧ ರ ಶಾಸನಗಳು ತಿಳಿಸುತ್ತವೆ. ಕಲ್ಯಾಣ ಚಾಲುಕ್ಯರ ಅರಸ ಇಮ್ಮಡಿ ಸೋಮೇಶ್ವರನ ಕಾಲಕ್ಕೆ ಸೇರಿದ ಕ್ರಿ.ಶ. ೧೦೭೪ ರ ಶಾಸನ ದೇವತೆಗೆ ದತ್ತಿ ಬಿಟ್ಟ ವಿಷಯ ತಿಳಿಸಿದರೆ, ಕ್ರಿ.ಶ. ೧೧೨೪ ರ ಶಾಸನ ನಿಡಗುಂದಿ ಅಗ್ರಹಾರದ ಗುಂಡವರಸನು ಜಕ್ಕೇಶ್ವರ ದೇವರಿಗೆ ದಾನಕೊಟ್ಟ ವಿಷಯವನ್ನು ತಿಳಿಸುತ್ತದೆ. ಕೆರೆದಂಡೆ ಬಳಿಯಿರುವ ಕ್ರಿ.ಶ. ೧೧೨೫ ರ ಶಾಸನ ಭುಜಂಗೇಶ್ವರ ದೇವರ ಪಾದಾರಾಧಕ, ಬೊಜಂಗರ ನಾರಣ್ಯನ ಮಗ ಹರಣ್ಣ ಮತ್ತು ಸಾತಿಗಳು ಗೋಗ್ರಹಣದಲ್ಲಿ ಹೋರಾಡುತ್ತ ಮಡಿದ ವಿಷಯವನ್ನು ತಿಳಿಸಿದರೆ, ಅಲ್ಲೇ ಇರುವ ಸುಮಾರು ಕ್ರಿ.ಶ. ೧೩ ನೇ ಶತಮಾನದ ಶಾಸನ ಉಲ್ಲೇಖಿತ ವೀರಗಲ್ಲು ಹುಲಿಯೊಂದಿಗೆ ಹೋರಾಡುತ್ತ ಮಡಿದ ನಾಯಕನ ಕಾಲಕ್ಕೆ ಸೇರಿದ ಕ್ರಿ.ಶ. ೧೫೪೫ ರ ಶಾಸನದಿಂದ ರಟ್ಟೀಹಳ್ಳಿ ಸೀಮೆಗೆ ಹಿರೇಕೆರೂರು ಸೇರಿತ್ತೆಂಬ ಅಂಶ ಗೊತ್ತಾಗುತ್ತದೆ. ನೆರೆಯ ನೂಲಗೇರಿ ಗ್ರಾಮದ ಕ್ರಿ.ಶ. ೧೧೯೯ ರ ಶಾಸನ ಹಿರೇಕೆರೂರಿನ ಸಾವಿರ ಮಹಾಜನರ ಮನೋಸ್ಥಿತಿಯನ್ನು ಹೊಗಳುತ್ತಾ ಅವರ ಸಮ್ಮುಖದಲ್ಲಿ ಬಮ್ಮಿಶೆಟ್ಟಿ ನಿರ್ಮಿಸಿದ ಗವರೇಶ್ವರ ದೇವರಿಗೆ ನೂಲಗೇರಿಯ ಬಣಜಿಗರು ದಾನಕೊಟ್ಟ (ಬಿಟ್ಟ) ವಿಷಯವನ್ನು ತಿಳಿಸುತ್ತದೆ.[೭]

ಹಿರೇಕೆರೂರು ಪ್ರಸಿದ್ಧಿಗೆ ಬಂದಿರುವುದು ಹೆಗ್ಗೇರಿ (ಹಿರೇಕೆರೆ) ಕೆರೆ ದಂಡೆಯ ಮೇಲೆ ಶತಮಾನಗಳಿಂದಲೂ ನೆಲೆಸಿರುವ ದುರ್ಗಾದೇವಿ ದೇವತೆಯಿಂದಾಗಿ. ದೇವರು ಪುರಾತನ

ದೇವಾಲಯವಿದ್ದ ಜಾಗದಲ್ಲಿ ಕೆಲವು ದಶಕಗಳ ಹಿಂದೆ ನೂತನ ಭವ್ಯ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಗರ್ಭಗೃಹದಲ್ಲಿ ದುರ್ಗಾಮಾತೆ ಭಾರೀ ವಿಗ್ರಹ ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಸುತ್ತಲೂ ಹಲವು ಶಾಸನಗಳಿವೆ. ಕೋಣನತಲೆ ಶಿಲ್ಪಗಳಿವೆ. ದುರ್ಗಾದೇವಿ ಅಪಾರ ಭಕ್ತರನ್ನು ಹೊಂದಿದ್ದಾಳೆ. ಮೂರು ವರ್ಷಗಳಿಗೊಮ್ಮೆ ಭಾರತ ಹುಣ್ಣಿಮೆಗೆ ಜಾತ್ರೆ ಒಂದು ತಿಂಗಳುಗಟ್ಟಲೇ ನಡೆಯುತ್ತದೆ.[೮]

ಗ್ರಾಮನಾಮ

ಹಿರೇಕೆರೂರಿಗೆ ಹತ್ತಿಕೊಂಡೇ ಕ್ರಿ.ಶ.ಸು. ೨೯೪ ರಲ್ಲಿ ೫೬೩ ಎಕರೆ ೩೭ ಗುಂಟೆ ವಿಸ್ತಾರವಾದ ಪ್ರಾಚೀನ ಬಹುದೊಡ್ಡ ನೀರಾವರಿ ಕೆರೆ (ದುರ್ಗಾದೇವಿ ಕೆರೆ) ಇದೆ. ಇದು 'ಪಿರಿಯಕೆರೆ' ಆಯಿತು. ಇದರ ಪಶ್ಚಿಮದಲ್ಲಿಯೇ ಊರು ಇದ್ದಿದ್ದರಿಂದ 'ಪಿರಿಯಕೆರೆ ಊರು' ಎಂದು ಹೆಸರಾಯಿತು. 'ಪಿರಿಯ' ಮುಂದಿನ ಅವಧಿಯಲ್ಲಿ 'ಹಿರಿಯ' ಎಂದಾಗಿದೆ. ಹಿರಿಯ ಕೆರೆಯೂರು ಮತ್ತೆ ಸಂಕ್ಷಿಪ್ತವಾಗಿ 'ಹಿರೇಕೆರೂರು' ಆಗಿರುತ್ತದೆ.[೯]

'ಹಿರೇಕೆರೂರು' ಗ್ರಾಮನಾಮ ಉಲ್ಲೇಖಿಸುವ ಪ್ರಥಮ ಶಾಸನ ರಾಣೇಬೆನ್ನೂರ ತಾಲೂಕಿನ ಹಿರೇಮಾಗನೂರಿನಲ್ಲಿದೆ. ಇದರ ಕಾಲ ಕ್ರಿ.ಶ. ೯೧೬. ಇದರಲ್ಲಿ 'ಕೆರೆಯೂರು' ಎಂದು ಇದೆ. ಹಿರೇಮಾಗನೂರಿನದೇ ಆದ ಕ್ರಿ.ಶ. ೧೦೫೪ ರ ಶಾಸನ 'ಪಿರಿಯ ಕೆರೆಯೂರು' ಎಂದಿದೆ. ಇದೇ ಪಟ್ಟಣದ ಕ್ರಿ.ಶ. ೧೧೨೫ ರ ಶಾಸನದಲ್ಲಿ 'ಹಿರಿಯ ಕೆರೆಯೂರು' ಎಂದಿದೆ. ಒಟ್ಟು ಇಲ್ಲಿನ ಶಾಸನಗಳಲ್ಲಿ ಹಿರೇಕೆರೂರು ಗ್ರಾಮನಾಮವು ಮೂರು ರೀತಿಯಲ್ಲಿ ಕಂಡುಬರುತ್ತದೆ.[೧೦]

ಕೊನೆ ಟಿಪ್ಪಣಿಗಳು

೧. ಹಿರಿಯಣ್ಣ ಅಂಬಳಿಕೆ, ೨೦೧೫; **ಕರ್ನಾಟಕ ಗ್ರಾಮ ಚರಿತ್ರೆ ಕೋಶ, ಹಾವೇರಿ ಜಿಲ್ಲೆ ಭಾಗ–೨,** ಪು.೨೧೩.

೨. ಪಾಟೀಲ ಭೋಜರಾಜ, ೨೦೧೨; **ಹಿರೇಕೆರೂರು ಗ್ರಾಮನಾಮ ಅಧ್ಯಯನ,** ಪು. ೧೩

೩. ಹಿರಿಯಣ್ಣ ಅಂಬಳಿಕೆ, ೨೦೧೫; **ಪೂರ್ವೋಕ್ತ,** ಪು. ೨೧೩

೪. ಅದೇ ಪು. ೨೧೫

೫. ಪಾಟೀಲ ಭೋಜರಾಜ, ೨೦೧೨; **ಹಿರೇಕೆರೂರು ಗ್ರಾಮನಾಮ ಅಧ್ಯಯನ,** ಪು. ೨೦೯

೬. ಹಿರಿಯಣ್ಣ ಅಂಬಳಿಕೆ, ೨೦೧೫; **ಪೂರ್ವೋಕ್ತ,** ಪು.೨೧೫

೭. ಅದೇ ಪು. ೨೧೫

೮. ಅದೇ ಪು.೨೧೫

೯. ಪಾಟೀಲ ಭೋಜರಾಜ, ೨೦೧೨; **ಹಿರೇಕೆರೂರು ಗ್ರಾಮನಾಮ ಅಧ್ಯಯನ,** ಪು. ೨೦೯

೧೦. ಅದೇ ಪು. ೨೦೯

* * *

ಅಧ್ಯಾಯ – ಮೂರು

ಕೆರೆಗಳ ನೀರಾವರಿ ಚಟುವಟಿಕೆಗಳು

ಅಧ್ಯಾಯ – ಮೂರು

ಕೆರೆಗಳ ನೀರಾವರಿ ಚಟುವಟಿಕೆಗಳು

ಕ್ರಿ.ಶ. ಆರಂಭದ ಶತಮಾನಗಳಲ್ಲಿ ಕರ್ನಾಟಕವು ಅತೀ ಪ್ರಾಚೀನ ನೀರಾವರಿ ಯೋಜನೆಯನ್ನು ಅಳವಡಿಸಿಕೊಂಡಿತ್ತೆಂಬುದು ಶಿಲಾಶಾಸನಗಳಿಂದ ತಿಳಿಯುತ್ತದೆ. ಚಂದ್ರವಳ್ಳಿ, ತಾಳಗುಂದ ಮತ್ತು ಗುಡ್ನಾಪುರ ಕೆರೆಗಳು ಕದಂಬರ ಕಾಲದ ಕೆರೆಗಳಾಗಿವೆ. ಪ್ರಾಚೀನ ಕಾಲದಲ್ಲಿ ಬಾವಿಗಳನ್ನು ತೋಡಿಸುವುದು, ಕೆರೆಗಳನ್ನು ಕಟ್ಟಿಸುವುದು ಒಂದು ಪುಣ್ಯದ ಕಾರ್ಯವೆಂದು ಪರಿಗಣಿಸಲಾಗಿತ್ತು. ರಾಜರು, ರಾಣಿಯರು, ಮಂತ್ರಿಸಹೋದರರು, ದಂಡನಾಯಕರು, ಅಧಿಕಾರಿಗಳು, ಗಣ್ಯರು, ವರ್ತಕರು ದೇವಸ್ಥಾನ ಕಟ್ಟಲು ತೋರಿಸಿದ ಭಕ್ತಿ ಭಾವದಿಂದಲೇ ಕೆರೆ ಮತ್ತು ಜಲಾಶಯಗಳನ್ನು ಕಟ್ಟುತ್ತಿದ್ದರು. ಹಂಪಿಯ ಶಿಲಾಧರನ ಶಿಲಾಶಾಸನ[೧] ಒಂದರಲ್ಲಿ ತಾಯಿ ತನ್ನ ಮಗುವಿಗೆ ಹಾಲೆರೆಯುವಾಗ "ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಗಾರಂಗಳಂ ಮಾಡಿಸು" ಎಂದು ಹಾಡುತ್ತಿದ್ದಳೆಂದು ಹೇಳಿದೆ. ಕ್ರಿ.ಶ. ೧೧೪೮ ರ ಶಾಸನದ ಪ್ರಕಾರ ಶಿರಸಂಗಿಯ ಸಾಮಾನ್ಯ ಸ್ತ್ರೀಯಾದ 'ಸೋರಿಗಾವುಂಡಿ'ಯು ತನಗೆ ಪುಣ್ಯವನ್ನು ತರುವಂತಹ ಯಾವುದಾದರೂ ಕೆಲಸವನ್ನು ಮಾಡಬೇಕೆಂದು ತನ್ನ ಮೂರೂ ಮಕ್ಕಳನ್ನು ಕೋರಿಕೊಂಡಳೆಂದು, ಅದರಂತೆ ಒಂದು ಕೆರೆಯನ್ನು ದುರಸ್ತಿ ಮಾಡಿದರೆಂದು ಹೇಳಲಾಗಿದೆ.

ಮಾನವನ ಉಗಮ ಮತ್ತು ವಿಕಾಸದ ಸುದೀರ್ಘ ಇತಿಹಾಸವನ್ನು ಗಮನಿಸಿದಾಗ ಮಾನವ ಪೂರ್ವ ಕಾಲದಿಂದಲೂ ಭೌತಿಕ ಮತ್ತು ಮಾನಸಿಕವಾಗಿ ವಿಕಾಸ ಹೊಂದುವುದರೊಂದಿಗೆ ಪರಿಸರದಲ್ಲಿ ಆಗುತ್ತಿರುವ ಕಠಿಣ ಸಮಸ್ಯೆಗಳನ್ನು ಸಹ ಎದುರಿಸುತ್ತಾ ಬಂದಿದ್ದಾನೆ. ಮಾನವ

ಎಲ್ಲಾ ಬಗೆಯ ಚಟುವಟಿಕೆಗಳ ಕಾರ್ಯಕ್ಷೇತ್ರವು ಸರೋವರ, ಕೆರೆ, ನದಿ, ತೊರೆಗಳ ಸಮೀಪದಲ್ಲಿಯೇ ಕೇಂದ್ರೀಕೃತವಾಗಿತ್ತು. ಸರಿಸುಮಾರು ಇಂದಿನಿಂದ ಏಳುಸಾವಿರ ವರ್ಷಗಳ ಪೂರ್ವದಲ್ಲಿ ಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದೆಡೆ ಸ್ಥಿರವಾಗಿ ನೆಲೆ ನಿಲ್ಲುವ ಪ್ರಯತ್ನ ಅವನ ಜೀವನದಲ್ಲಿ ಬಂದಿದ್ದು ವ್ಯವಸಾಯದಿಂದಲೇ. ಈ ವ್ಯವಸಾಯ ಪದ್ಧತಿಯು ಅವರ ಜೀವನದಲ್ಲಿ ಒಂದು ಕ್ರಮಬದ್ಧತೆಯನ್ನು ತಂದಿತು. ಮಾನವನ ಸರ್ವತೋಮುಖ ಅಭಿವೃದ್ಧಿಯು ವ್ಯವಸಾಯ ಆವಿಷ್ಕಾರದಿಂದಲೇ ಪ್ರಾರಂಭವಾಯಿತು. ಒಂದು ಸಂಸ್ಕೃತಿಯ ಉಗಮ ಮತ್ತು ವಿಕಾಸಕ್ಕೆ ಈ ವ್ಯವಸಾಯ ತಳಹದಿಯಾಯಿತು.

ಮಾನವನು ಮೊದಲಿಗೆ ವ್ಯವಸಾಯವನ್ನು ಪ್ರಾರಂಭಿಸಿದಾಗ ಮಳೆಯನ್ನೇ ನಂಬಿದ್ದ. ವಿಫುಲವಾಗಿ ನೀರು ಸಿಗುವ ಭಾಗವಾಗಿದ್ದ ನದಿಯನ್ನು ಆಶ್ರಯಿಸಿದ್ದನು. ಪರಿಸರದಲ್ಲಾಗುತ್ತಿದ್ದ ಬದಲಾವಣೆ ಮತ್ತು ಸಕಾಲದ (ಪ್ರಸ್ತುತ ಕಾಲ) ವೈಫಲ್ಯತೆಯು ಅವನನ್ನು ಆಗಾಗ ಕಷ್ಟಕ್ಕೆ ಒಳಪಡಿಸುತ್ತಿದ್ದುದರಿಂದ ಅವನು ನೀರನ್ನು ಸಂಗ್ರಹ ಮಾಡಿ ಉಪಯೋಗ ಮಾಡತೊಡಗಿದ. ಮುಂದೆ ವ್ಯವಸಾಯಕ್ಕೆ ಉಪಯೋಗಿಸಲು ನೀರಿಗೆ ಒಡ್ಡು ನಿರ್ಮಿಸಿ ಸಂಗ್ರಹ ಮಾಡಲು ಪ್ರಾರಂಭಿಸಿ ಈ ಚಟುವಟಿಕೆಯು ಕೆರೆ-ಕುಂಟೆಗಳ ಉಗಮಕ್ಕೆ ನಾಂದಿಯಾಯಿತು.

೩.೧ ಕೆರೆಗಳ ಉಗಮ ಮತ್ತು ಪ್ರಾಚೀನತೆ

ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ನೀರಿಲ್ಲದೆ ಮನುಷ್ಯ ಅಷ್ಟೇ ಏಕೆ ಇಡೀ ಜೀವಸಂಕುಲ ಬದುಕಲಾರದು. ಹಾಗಾಗಿ ನೀರು ಭೂಮಿಯ ಮೇಲಿನ ಅತ್ಯಮೂಲ್ಯ ಸಂಪನ್ಮೂಲ. ನೀರು ಕೇವಲ ಮನುಷ್ಯ ಹಾಗೂ ಪಕ್ಷಿ ಸಂಕುಲಕ್ಕೆ ಮಾತ್ರವಲ್ಲ ಸಸ್ಯ ಸಂಕುಲಕ್ಕೂ ಜೀವ ಸಂಜೀವಿನಿ. ಪ್ರಪಂಚದಲ್ಲಿರುವ ಕೋಟ್ಯಂತರ ಜೀವರಾಶಿಗಳು, ಪ್ರಾಣಿಗಳು ನೀರಿನಿಂದಲೇ ಉಗಮ ಮತ್ತು ವಿಕಾಸವನ್ನು ಹೊಂದಿವೆ. ಈ ಕಾರ್ಯಚಟುವಟಿಕೆಗಳಲ್ಲಿ ನೀರು ಅತ್ಯಂತ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಪ್ರಾಗಿತಿಹಾಸ ಕಾಲದಲ್ಲಿ ಅಲೆಮಾರಿಯಾಗಿದ್ದ ಆತನ ಎಲ್ಲಾ ಬಗೆಯ ಕಾರ್ಯಚಟುವಟಿಕೆಗಳ ಕಾರ್ಯಕ್ಷೇತ್ರವು, ಸರೋವರ, ನದಿ, ಕೆರೆ, ಸಮೀಪದಲ್ಲಿಯೇ ಕೇಂದ್ರೀಕೃತವಾಗಿತ್ತು. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವ ಕ್ರಮೇಣ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದನು. ಕೇವಲ ತನ್ನ ಹೊಟ್ಟೆ ಹೊರೆಯಲು ಮಾತ್ರ ಅಲೆಮಾರಿಯಾಗಿದ್ದ ಈತ ತನ್ನ ಆಯುಧಗಳಲ್ಲಿ ಬಹಳಷ್ಟು ಸುಧಾರಣೆ ಮಾಡಿಕೊಂಡು ಕೃಷಿಕ ಜೀವನವನ್ನು ಕ್ರಮೇಣ ಅಳವಡಿಸಿಕೊಂಡನು. ವ್ಯವಸಾಯ ಚಟುವಟಿಕೆಗಳಿಗೆ ಮೊದಲು ಮಾಡಿ ವಿಫುಲವಾಗಿ ನೀರು ಲಭ್ಯವಿರುವ ನದಿಗಳನ್ನು ಆಶ್ರಯಿಸಿದ್ದನು. ದಿನದಿಂದ ದಿನಕ್ಕೆ ಪರಿಸರದಲ್ಲಿ ಆಗುತ್ತಿದ್ದ ಬದಲಾವಣೆಗಳು ಸಕಾಲದ ಮಳೆಯ ವೈಫಲ್ಯವೂ ಆತನನ್ನು ಆಗಿಂದಾಗ್ಗೆ ಕಷ್ಟಗಳಿಗೆ ಗುರಿ ಮಾಡುತ್ತಿದ್ದವು. ಇದರಿಂದ ಅವನು ನೀರನ್ನು ಸಂಗ್ರಹ ಮಾಡಿ ಇಟ್ಟುಕೊಳ್ಳುವ ಪ್ರಯತ್ನದಲ್ಲಿ ತೊಡಗಿದ. ಮಳೆಗಾಲವು ವರ್ಷದಲ್ಲಿ ಕೆಲಕಾಲ ಮಾತ್ರ ಇರುತ್ತಿತ್ತು. ಅಂದರೆ

ಮಳೆಯನ್ನು ಕೃಷಿಕನ ಜೊತೆಯಾಡುವ ಜೂಜಾಟವೆಂದು ಹೇಳಬಹುದು. ಅದರಂತೆಯೇ ನದಿಯಿಂದ ಕೆಲವು ಸಾವಿರಾರು ಎಕರೆಗಳಷ್ಟು ಭೂಪ್ರದೇಶವು ವ್ಯವಸಾಯಕ್ಕೊಳಪಟ್ಟಿತ್ತು. ಆದುದರಿಂದ ಎಲ್ಲ ಮೂಲಗಳಿಂದ ನೀರನ್ನು ಸಂಗ್ರಹಿಸಿಟ್ಟುಕೊಂಡು ಅಗತ್ಯವಿದ್ದಾಗ ಅತ್ಯಂತ ಸಮರ್ಪಕವಾಗಿ ಬಳಸಿಕೊಳ್ಳತೊಡಗಿದನು. ಇಂತಹ ಕೃತಕ ಸಂಗ್ರಾಹಕಗಳೇ ಕೆರೆ, ಕಟ್ಟೆ ಕುಂಟೆಗಳಾಗಿವೆ. ಇವು ಮಾನವನ ಅಗತ್ಯಗಳನ್ನು ಪೂರೈಸುವ ಪ್ರಾಥಮಿಕ ಆಕರಗಳಾಗಿವೆ. ಆದ್ದರಿಂದ ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದ ಸದಾ ನೀರಿನ ಮೂಲದ ನೆಲೆಗಳಲ್ಲಿ ವಾಸಿಸಲಾರಂಭಿಸಿದ. ಕ್ರಮೇಣ ನಾಗರೀಕತೆ ವಿಕಸಿಸಿದಂತೆ ಆದಿಮಾನವ ಬೇರೆ ಸಂಸ್ಕೃತಿಗೆ ಕಾಲಿರಿಸಿದಾಗ ಅವನಿಗೆ ನೀರಿನ ಅವಶ್ಯಕತೆ ಮತ್ತು ಮಹತ್ವ ಮತ್ತಷ್ಟು ಹೆಚ್ಚಾಯಿತು. ಮಳೆಗಾಲದಲ್ಲಿ ತನ್ನ ಸುತ್ತಮುತ್ತಲ ಪ್ರಕೃತಿ ಹಚ್ಚಹಸಿರಿನಿಂದ ನಳನಳಿಸುವುದನ್ನು ಕಂಡುಕೊಂಡ.[೨] ತಾನು ಉತ್ತಿ ಬೆಳೆದ ಬೆಳೆ ಹುಲುಸಾಗಿ ಬೆಳೆದು ಫಲವ ನೀಡಲು ನೀರು ಅವಶ್ಯವೆಂಬುದನ್ನು ಮನಗಾಣುತ್ತಾನೆ. ಬೆಳೆ ಬೆಳೆಯಲು ಈಗ ಅವನು ಬೆಟ್ಟದಿಂದ ಇಳಿದು ಬಯಲು ಪ್ರದೇಶಕ್ಕೆ ಬರುವುದು ಅನಿವಾರ್ಯವಾಯಿತು. ಅಲ್ಲಿ ಸುರಿಯುತ್ತಿದ್ದ ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಯೋಚಿಸಿದ. ಹರಿವ ಹಳ್ಳಗಳಿಗೆ ಒಡ್ಡುಗಳನ್ನು ನಿರ್ಮಿಸಿ, ಇಲ್ಲವೇ ಗುಂಡಿಗಳನ್ನು ತೋಡಿ ನೀರನ್ನು ನಿಲ್ಲಿಸಿದ. ಹೀಗೆ ಸಂಗ್ರಹಿಸಿದ ನೀರು ಅವನ ದಿನಬಳಕೆಯ ಜೊತೆಗೆ ಕೃಷಿಗೂ ಉಪಯೋಗವಾಗಿ ನೀರಾವರಿ ಪದ್ಧತಿ ಮೊದಲಾಯಿತು. ರಾಜಸತ್ತೆ ಪ್ರಾರಂಭಗೊಂಡ ಮೇಲೆ ಜನರಿಗೆ, ಪ್ರಾಣಿಗಳಿಗೆ ಮತ್ತು ಕೃಷಿಗೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಅರಸರ ಒಂದು ಸಾಮಾಜಿಕ ಜವಾಬ್ದಾರಿಯಾಯಿತು. ಕೆರೆ, ಬಾವಿ, ಕೊಳ, ಕಟ್ಟೆ, ಕಾಲುವೆ ಮುಂತಾದ ರೂಪಗಳಲ್ಲಿ ಜಲಸಂಗ್ರಹಣೆ ವಿಧಾನಗಳು ರೂಢಿಗೊಂಡವು. ಹೀಗೆ ಹಿರೇಕೆರೂರು ತಾಲೂಕಿನಲ್ಲಿ (ಹಾವೇರಿ ಜಿಲ್ಲೆಯಲ್ಲಿಯೂ)ಇಂಥ ಪ್ರಯತ್ನಗಳು ನಡೆದಿರುವುದಕ್ಕೆ ಸಾಕಷ್ಟು ಸಾಕ್ಷಿಗಳಿವೆ. ಊರನ್ನು ಕಟ್ಟುವ ಮೊದಲು ಕೆರೆಗಳನ್ನು ಕಟ್ಟು, ಊರು ತನ್ನಿಂದ ತಾನೇ ಬೆಳೆಯುತ್ತದೆ ಎಂಬುದು ವಾಸ್ತವ. ಕೆರೆಗಳನ್ನು ಕಟ್ಟಿದರೆ ಊರು ಬೆಳೆಯುತ್ತದೆ. ಊರು ಬೆಳೆಯಲು ಕೆರೆಗಳು ಬೇಕೆಬೇಕು. ಹಾಗೆ ನೋಡಿದರೆ ನಮ್ಮ ನಾಗರೀಕತೆ ಬೆಳೆದಿರುವುದೇ ನದಿಪಾತ್ರಗಳಲ್ಲಿ ಹಾಗೂ ಕೆರೆ–ಕಟ್ಟೆಗಳಲ್ಲಿ. ಯಾವ ಊರಿನಲ್ಲಿ ಹೆಚ್ಚು ಕೆರೆಗಳಿವೆಯೋ ಆ ಊರು ಸ್ವಾಭಾವಿಕವಾಗಿ ಸಮೃದ್ಧವಾಗಿದೆ ಎಂಬ ನಂಬಿಕೆ ಇದೆ. ಕೆರೆಗಳು ನಮ್ಮ ಅವಿಭಾಜ್ಯ ಅಂಗ. ನಮ್ಮ ಜನಪದರಲ್ಲಂತೂ ಕೆರೆಗಳ ಪಾತ್ರಗಳು ಕೆರೆಗಳ ಸುತ್ತಲೇ ಸುತ್ತುತ್ತಿರುತ್ತವೆ. ಯಾವುದೇ ಊರಿರಬಹುದು ಆ ಊರಿನಲ್ಲಿ ಒಂದು ಕೆರೆಯಿರಲೇಬೇಕು. ನೀರನ್ನು ಸೇದಲು, ಬಟ್ಟೆ ತೊಳೆಯಲು, ಸ್ನಾನ ಮಾಡಲು, ಜಾನುವಾರಗಳಿಗೆ ಮೈ ತೊಳೆಯಲು ಎಲ್ಲರೂ ಕೆರೆಗೆ ಬರಲೇಬೇಕು. ಕಳ್ಳದೃಷ್ಟಿ ಬೀರಲು, ನಿಂತು ಮಾತಾಡಲು ಕೆರೆಯೇ ಒಂದು ಕುಂಟುನೆಪ. ಊರಿಗೆ ಬಂದವಳು ನೀರಿಗೆ ಬಾರದಿರುತ್ತಾಳಾ.. ಎಂದು ಹೇಳಿರುವುದು ಕೆರೆಯನ್ನುದ್ದೇಶಿಸಿಯೇ.

ಕೆರೆ–ಕಟ್ಟೆಗಳು ಭಾರತೀಯ ಪರಂಪರೆಯಲ್ಲಿ ಮಾನವನ ಅವಿಭಾಜ್ಯ ಅಂಗಗಳಾಗಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿವೆ. ಆದಿಮಾನವನು ತನ್ನ ನೀರಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಮಳೆಯ ನೀರನ್ನು ಸಂಗ್ರಹಿಸುವ, ನದಿಯ ಪ್ರವಾಹವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನಗಳನ್ನು ಮಾಡಿ ಅದರಿಂದ ಬೇಸಾಯವನ್ನು ಮಾಡುವುದಲ್ಲದೆ, ತನ್ನ ವಸತಿಯ ಬೆಳವಣಿಗೆಗೂ ಕಾರಣನಾಗಿದ್ದಾನೆ.[೩]

ಕೆರೆಯ ಕಲ್ಪನೆಯು ಇಂದು ನೆನ್ನೆಯದ್ದಲ್ಲ. ಇದರ ಇತಿಹಾಸ ಬಹು ಪ್ರಾಚೀನವಾದುದು. ಅಂದಿನ ಸಮಕಾಲೀನ ಸಾಹಿತ್ಯಗಳೂ ಸಹ ನೀರಾವರಿ ವ್ಯವಸ್ಥೆಯನ್ನು ಕುರಿತು ಮಾಹಿತಿ ನೀಡುತ್ತವೆ. ಅದೇ ರೀತಿ ಋಗ್ವೇದ, ಯಜುರ್ವೇದ ಮತ್ತು ಅಥರ್ವಣ ವೇದದಲ್ಲಿಯೂ ಕೂಡ ಕೆರೆಗಳ ಕುರಿತ ಉಲ್ಲೇಖಗಳು ದೊರೆಯುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರ, ವಿಜ್ಞಾನೇಶ್ವರನ ಮಿತಾಕ್ಷರ ಸಂಹಿತೆ, ಕಲ್ಹಣನ ರಾಜತರಂಗಿಣಿ, ರಾಮಾಯಣ, ಮಹಾಭಾರತ, ಪದ್ಮಪುರಾಣ, ಜಾತಕ ಕಥೆಗಳು, ಶುಕ್ರನ ನೀತಿಸಾರ, ಅಮರಕೋಶ ಹಾಗೂ ತಮಿಳಿನ ಸಂಗಂ ಸಾಹಿತ್ಯ ಕೃತಿಗಳೂ ಸಹ ಕೆರೆ ನೀರಾವರಿಯ ಅನೇಕ ವಿಚಾರಗಳ ಕುರಿತು ಪ್ರಸ್ತಾಪಿಸುತ್ತವೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ನೂತನ ಶಿಲಾಯುಗದ ಕಾಲದಲ್ಲಿ ಹಾಗೂ ನಂತರದ ಬೃಹತ್ ಶಿಲಾಯುಗದ ಕಾಲದಲ್ಲಿ ಕೃತಕ ಅಥವಾ ಮಾನವ ನಿರ್ಮಿತ ಕೆರೆಗಳು ಪ್ರಾರಂಭವಾದವೆಂದು ಹೇಳಬಹುದು. ಇದನ್ನು ಬೇರೆ ರೀತಿಯಾಗಿ ಹೇಳುವುದಾದರೆ, ಕೆರೆ–ಕಟ್ಟೆಗಳ ನಿರ್ಮಾಣಕಾರ್ಯ ಕರ್ನಾಟಕದಲ್ಲಿ ಪ್ರಾರಂಭವಾದದ್ದು ನೂತನ ಶಿಲಾಯುಗದ ಕಾಲದಲ್ಲಿ. ಅದು ಹೆಚ್ಚು ಬೆಳಕಿಗೆ ಬಂದಿರುವುದು ಬೃಹತ್ ಶಿಲಾಯುಗದ ಕಾಲದಲ್ಲಿ. ಶಾತವಾಹನ ರಾಜನಾದ ಪುಳುಮಾವಿಯ ಮ್ಯಾಕೆಡೋಣಿ ಶಾಸನವು ಕೆರೆ ಬಗ್ಗೆ ಪ್ರಸ್ತಾಪಿಸುವ ಅತೀ ಪ್ರಾಚೀನವಾದ ಶಾಸನ. ಇದಾದ ನಂತರ ಕದಂಬ ಅರಸ ಮಯೂರವರ್ಮನ ಚಂದ್ರವಳ್ಳಿ ಶಾಸನ.[೪] ಆತನು ಚಂದ್ರವಳ್ಳಿಯಲ್ಲಿ ಕೆರೆಯೊಂದನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ. ಕರ್ನಾಟಕ ಪ್ರದೇಶವನ್ನು ಆಳಿದ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರ ಅರಸರು, ಆದಿಲ್‌ಷಾಹಿಗಳು ಮತ್ತು ಬ್ರಿಟಿಷರು ಹತ್ತು ಹಲವು ಕಾರಣಗಳಿಗೆ ನಿರ್ಮಿಸಿದರೂ ವ್ಯವಸಾಯ ಮತ್ತು ವಸತಿ ಪ್ರದೇಶಕ್ಕೆ ನೀರನ್ನೊದಗಿಸುವ ಮುಖ್ಯ ಉದ್ದೇಶವನ್ನು ಹೊಂದಿದ್ದರು. ಕೆರೆಗಳ ನಿರ್ಮಾಣ ಪುಣ್ಯಪ್ರದವೆಂದೇ ಭಾವಿಸಿದ್ದ ಅಂದಿನ ಜನ ಅದನ್ನು ನಿರ್ಮಿಸುವ ಮತ್ತು ಸುಸ್ಥಿತಿಯಲ್ಲಿ ಕಾಪಾಡುವ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ನಿರ್ಮಿಸುತ್ತಿದ್ದರು.[೫] ಆದ್ದರಿಂದ ಅಂದಿನ ಕೆರೆಗಳು ಇಂದಿನವರೆಗೂ ಉಳಿದುಕೊಂಡು ಬಂದಿವೆ. ಮುಖ್ಯವಾಗಿ ಅಗ್ರಹಾರ, ದೇವಾಲಯ, ಛತ್ರ, ಮಠ ಮತ್ತು ಕೆರೆಗಳು ಹಾಗೂ ನೂತನವಾಗಿ ಸ್ಥಾಪಿತವಾದ ವಸತಿ ಪ್ರದೇಶಗಳು ಒಂದನ್ನೊಂದು

ಅವಲಂಬಿಸಿದ್ದವು. ಈ ಹಿನ್ನೆಲೆಯಲ್ಲಿ ನೋಡಿದಾಗ ಹಿರೇಕೆರೂರು ತಾಲೂಕಿನ ಕೆರೆಗಳು ಹಲವು ಕಾರಣಗಳಿಂದಾಗಿ ನಿರ್ಮಾಣ ಮಾಡಿದ್ದರೂ ವ್ಯವಸಾಯಕ್ಕೆ ನೀರು ಒದಗಿಸಲು, ಅಲ್ಲಿನ ಜನವಸತಿಯ ದೈನಂದಿನ ಅವಶ್ಯಕೆತಗಳನ್ನು ಪೂರೈಸಲು ಅಥವಾ ದೇವಾಲಯದ ಅವಶ್ಯಕತೆಗಳನ್ನು ಪೂರೈಸುವ ಉದ್ದೇಶಗಳಿಗೆ ನಿರ್ಮಿತವಾಗಿವೆ.

ಕೆರೆಗಳು ಹೇಗೆ? ಯಾವಾಗ? ಏಕೆ? ಕಟ್ಟಲ್ಪಟ್ಟವು ಎಂಬ ಪ್ರಶ್ನೆಗೆ ಇತಿಹಾಸದಲ್ಲಿ ಸ್ಪಷ್ಟ ಉತ್ತರವಿಲ್ಲ. ಆದರೆ ಪ್ರಾಚೀನ ಕಾಲದಲ್ಲಿ ನವಶಿಲಾಯುಗದ ಮಾನವನು ಸ್ವಾಭಾವಿಕವಾಗಿ ಮಳೆ ತಗ್ಗು ಪ್ರದೇಶಗಳಲ್ಲಿ ಸಂಗ್ರಹಗೊಳ್ಳುವುದನ್ನು ಅವಲೋಕಿಸಿದ ನಂತರ ಕೃತಕ ನೀರಿನ ಸೆಲೆಯನ್ನು ಸೃಷ್ಟಿಸಿಕೊಳ್ಳುವುದು ಅನಿವಾರ್ಯವಾಗಿತ್ತು.[೬] ಹೀಗೆ ನಿಂತ ನೀರಿನ ಉಪಯೋಗ ಮಾಡಿಕೊಳ್ಳಲು ಪ್ರಾಚೀನ ಕಾಲದ ಮಾನವನಿಗೆ ಕೆರೆಗಳನ್ನು ಕಟ್ಟಲು ಪ್ರೇರಣೆ ಆಗಿರಬೇಕು. ಮನುಷ್ಯನು ನೆಲೆ ನಿಂತು ಪಶುಪಾಲನೆ ಮತ್ತು ಕೃಷಿಯಲ್ಲಿ ಪಾಲ್ಗೊಂಡ ಮೇಲೆ ಕೆರೆಗಳು ಸೃಷ್ಟಿಯಾಗಿರಬಹುದು. ರಾಜಪ್ರಭುತ್ವ ಬೆಳೆದು ಬಂದ ಮೇಲೆ ಇಂಥ ಕೆರೆಗಳನ್ನು ಕಟ್ಟಿಸುವುದು ರಾಜಧರ್ಮವಾಗಿ ಪರಿಣಮಿಸಿತು. "ಕೆರೆಯಂ ಕಟ್ಟಿಸು ಬಾವಿಯಮ ಸವೆಸು" ಎಂಬ ಇತ್ಯಾದಿ ಮಾತುಗಳು ಹುಟ್ಟಿ ಜನಪ್ರಿಯವಾದವು. ದಕ್ಷಿಣ ಭಾರತದ ಚರಿತ್ರೆಯಲ್ಲಿ ಚೋಳರು ಕೆರೆ ಕಟ್ಟಿಸುವ ಕಾಯಕವನ್ನು ತಾವು ರಾಜ್ಯ ಸ್ಥಾಪಿಸಿದ ಕಡೆಗಳಲ್ಲೆಲ್ಲಾ ವಿಸ್ತರಿಸಿದರು. ಇದೇ ಕೆರೆಯ ಪರಂಪರೆಯನ್ನು ಮಿಕ್ಕೆಲ್ಲಾ ರಾಜರು ಮುಂದುವರೆಸಿದರು. ಚೋಳರು ತಮ್ಮ ರಾಜ್ಯಾಡಳಿತದಲ್ಲಿ ಕೆರೆ–ಕಟ್ಟೆ ವಾರಿಯಂ (ಕೆರೆ–ಕಟ್ಟೆ ಸಮಿತಿ) ಎಂಬ ಆಡಳಿತ ವಿಭಾಗವನ್ನೇ ಆರಂಭಿಸಿದ್ದರು. ಸ್ಥಳೀಯ ಆಡಳಿತದ ಅತಿಮುಖ್ಯ ಕೆಲಸ ಇದೇ ಆಗಿತ್ತು. ಚೋಳರ ಆಡಳಿತಕ್ಕೊಳಪಟ್ಟ ಕರ್ನಾಟಕದ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ನೂರಾರು ಕೆರೆಗಳ ಒಂದು ದೊಡ್ಡ ಜಾಲವೇ ಜೀವ ತಳೆದದ್ದು ಈ ಕಾರಣದಿಂದಲೇ. ಕೆರೆ ಕಟ್ಟಿಸುವ ಕಾರ್ಯ ಕೇವಲ ರಾಜಕಾರ್ಯವಾಗಿರಲಿಲ್ಲ. ಅದು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯವಾಗಿತ್ತು.[೭] ಆದ್ದರಿಂದಲೇ ರಾಜರಿಗೆ ಕೆರೆ ಕಟ್ಟಿಸುವ ಕೆಲಸ ಕಷ್ಟವಾಗಿರಲಿಲ್ಲ. ಉಳ್ಳವರು ಹಣಸಹಾಯ, ದವಸ ಧಾನ್ಯದ ಸಹಾಯ ಮಾಡಿದರೆ ದುಡಿಯುವ ಜನರು ಕೆರೆ ನಿರ್ಮಾಣ ಕಾರ್ಯದ ರೂವಾರಿಯಾಗಿದ್ದರು. ಹತ್ತಾರು ವರ್ಷ ಹಿಡಿಯುತ್ತಿದ್ದ ಕೆರೆ ನಿರ್ಮಾಣದ ಕೆಲಸ ದೇವಾಲಯ ನಿರ್ಮಾಣದ ಕೆಲಸಕ್ಕಿಂತ ಶ್ರದ್ಧೆಯಿಂದ ನಡೆಯುತ್ತಿತ್ತು.

೩.೨ ಕೆರೆಯ ನಿರ್ಮಾಣ ಉದ್ದೇಶ

"ಕೆರೆಯಂ ಕಟ್ಟಿಸು ಬಾವಿ ಯಂ ಸವೆಸು ದೇವಗಾರಂ ಮಾಡಿಸು
ಜ್ಜೆರೆಯಾಳ್ ಸಿಲ್ಕಿದನಾಥಂ ಬಿಡಿಸು ಮಿತ್ರರ್ಗಿಬುಕೆಯ್ ನಂಬದ
ರ್ಗೆರೆ ವಟ್ಟಾಗಿರು ಶಿಷ್ಟರಂ ಪೊರೆಯನ್ನತ್ತಿಂತೆಲ್ಲವಂ ಪಿಂದೆ

ತಾ ಯೆಂದಳ್ವಾಲೆರೆವಂದು ತೊಟ್ಟು ಕಿವಿಯಾಳ್ ಲಕ್ಷ್ಮೀಧರಾ ಮಾತ್ಯನಾ"

ತಾಯಿ ಹಾಲುಣಿಸುವಾಗ ಕಂದನಿಗೆ ಕಿವಿಯಲ್ಲಿ ಹೇಳುವ ಈ ಪಿಸುಮಾತು ಹಿಂದಿನವರು ತಮ್ಮ ನಿಜ ಜೀವನದಲ್ಲಿ ಪಾಲಿಸಬೇಕಾದ ನಿಯಮಗಳಾಗಿವೆ. ಇವುಗಳಲ್ಲಿ ಕೆರೆ ಬಾವಿಗಳ ನಿರ್ಮಾಣವು ಪ್ರಥಮ ಪ್ರಾಶಸ್ತ್ಯದಲ್ಲಿ ಸೇರಿರುವುದು ವಿಶೇಷವಾದುದು. ಇದರಿಂದ ಅಂದಿನ ಪರಿಸ್ಥಿತಿಯಲ್ಲಿ ಕೆರೆಬಾವಿಗಳ ನಿರ್ಮಾಣವು ಹೆಚ್ಚಿನ ಮಹತ್ವ ಹೊಂದಿದ್ದು ಸ್ಪಷ್ಟವಾಗಿದೆ.

ಪ್ರಾಚೀನ ಕಾಲದಲ್ಲಿ ನಿರ್ಮಿತವಾದಂತಹ ಕೆರೆಗಳು ಕೇವಲ ತಮ್ಮ ಸಂಬಂಧಿಕರ ನೆನಪಿಗಾಗಿ, ಆರ್ಥಿಕತೆಯನ್ನು ಹೆಚ್ಚಿಸುವ ಉದ್ದೇಶದಿಂದ, ರಾಜ್ಯದ ಹಿತದೃಷ್ಟಿಯಿಂದ, ವ್ಯವಸಾಯದ ಉಪಯೋಗಕ್ಕಾಗಿ ಕೆರೆಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಕೆರೆಗಳನ್ನು ನಿರ್ಮಿಸಿರುವುದರಿಂದ ಜನರೂ ಸಹ ಒಂದೆಡೆ ನೆಲೆ ನಿಂತು ಜೀವನ ಸಾಗಿಸಲು ಹಾಗೂ ಕೃಷಿಯನ್ನು ಅಭಿವೃದ್ಧಿಪಡಿಸಲು ಅನುಕೂಲವಾಗುತ್ತಿತ್ತು. ರೈತರು ಕೇವಲ ಮಳೆಯನ್ನು ಆಶ್ರಯಿಸಿದ್ದರು. ಆದರೆ ಕೆರೆಗಳ ನಿರ್ಮಾಣದಿಂದ ಬೇಸಿಗೆಯಲ್ಲಿ ಬೆಳೆಯನ್ನು ಬೆಳೆಯಲು ಅತ್ಯಂತ ಉಪಯುಕ್ತವಾಗುತ್ತಿತ್ತು ಎಂಬುದು ಸ್ಪಷ್ಟವಾಗುತ್ತದೆ.

೩.೩ ಕೆರೆಗಳ ಸಂರಕ್ಷಣೆ

ಯಾವುದೇ ಕಾಮಗಾರಿಯು ನಿರ್ಧಿಷ್ಟ ಅವಧಿಗೆ ಮಾತ್ರ ಉಪಯುಕ್ತವಾಗಿದೆ. ಹಾಗಾಗಿ ಅದರ ಸೂಕ್ತ ಕ್ರಮವನ್ನು ಹಂತ ಹಂತವಾಗಿ ದುರಸ್ತಿ ಕಾರ್ಯ ಮಾಡುತ್ತ ಬಂದಾಗ ಅದರ ಸಫಲತೆಯನ್ನು ಇನ್ನೂ ವಿಸ್ತರಿಸಬಹುದಾಗಿದೆ. ಕೆರೆಗಳನ್ನು ಗಮನಿಸಿದಾಗ ಕೆರೆ ಹೂಳಿನಿಂದ ತುಂಬಿ ಹೋಗುವುದು, ಏರಿಯು ಒಡೆದು ಹೋಗುವುದು ಇಲ್ಲವೇ ನೀರು ನಿಲ್ಲದೇ ಇರುವುದು, ತೂಬುಗಳಲ್ಲಿ ಸೋರಿ ಹೋಗುವುದು ಹೀಗೆ ಹಲವು ಸಮಸ್ಯೆಗಳು ಸಂಭವಿಸುತ್ತವೆ. ಇದರಿಂದ ನೀರಾವರಿ ಕಾರ್ಯದ ಸೂಕ್ತ ರಕ್ಷಣೆ ಮಾಡುವುದು ಅತ್ಯಗತ್ಯ.[೮]

ಕೆರೆ ಸಂರಕ್ಷಣಾ ಕ್ರಮಗಳು

೧. ಕೆರೆಗಳ ಅಂಗಳ ಹಾಗೂ ನಾಲೆಯ ತಳದಿಂದ ಕಾಲಕಾಲಕ್ಕೆ ಹೂಳು ತೆಗೆಯುವುದು.

೨. ಮಳೆಯಿಂದಾಗಲಿ ಇತರೆ ಕಾರಣಗಳಿಂದಾಗಲಿ ಮಣ್ಣು ಕಟ್ಟೆಗೆ ಎಲ್ಲಿಯಾದರೂ ಹಾನಿಯಾದಲ್ಲಿ ಸರಿಪಡಿಸುವುದು.

೩. ತೂಬು ಮತ್ತು ಕೋಡಿಗಳಿಗೆ ಏನಾದರೂ ಹಾನಿಯಾಗಿದ್ದರೆ ಕಾಲಕಾಲಕ್ಕೆ ಅದನ್ನು ದುರಸ್ತಿ ಮಾಡುವುದು.

೪. ಜಲಾನಯನ ಪ್ರದೇಶ ಒತ್ತುವರಿಯಾಗದಂತೆ ತಡೆಗಟ್ಟುವುದು.

೫. ಕೆರೆಯ ಆಳಕ್ಕೆ ಹರಿದುಬರುವ ಹೂಳನ್ನು ತಡೆಯುವ ವ್ಯವಸ್ಥೆ ಮಾಡುವುದು.

ಪ್ರಾರಂಭದಲ್ಲಿ ಕೆರೆಯ ಸಂರಕ್ಷಣೆಯ ಕೆಲಸ ಗ್ರಾಮಗಳ ಸಮುದಾಯದ್ದಾಗಿತ್ತು. ಇದರಲ್ಲಿ ಹಳ್ಳಿಯ ಒಬ್ಬ ವ್ಯಕ್ತಿ ಸಂರಕ್ಷಣಾ ಕಾರ್ಯವನ್ನು ನಡೆಸುತ್ತಿದ್ದ. ಅವನಿಗೆ 'ಬಿತ್ತುವಟ್ಟು' ಅಥವಾ 'ದಶವಂದವಾಗಿ' (ಕೆರೆಯ ನಿರ್ಮಾಣ ಹಾಗೂ ಸಂರಕ್ಷಣೆಯ ಸಲುವಾಗಿ ನೀಡಿದ ಭೂಮಿ) ನೀಡುತ್ತಿದ್ದರು. ಇದನ್ನು ದುರಸ್ತಿ ಕಾರ್ಯಗಳನ್ನು ನಡೆಸುತ್ತಿದ್ದ ಕೆಲವು ಸಂದರ್ಭಗಳಲ್ಲಿ ಕೆರೆ ಸಂರಕ್ಷಣೆಗಾಗಿ ಬಂಡೆಗಳನ್ನು ಕೊರೆಯುತ್ತಿದ್ದರಿಂದ ಕೆರೆಗಳ ಮಣ್ಣನ್ನು (ಹೂಳನ್ನು) ಸಾಗಿಸಲು ಅನುವಾಗುತ್ತಿತ್ತು.[೧೦] ಸಂರಕ್ಷಣೆ ಹಾಗೂ ದುರಸ್ತಿ ಕಾರ್ಯಗಳಿಗೆ ನೀಡಲಾಗಿದ್ದ ಮಹತ್ವವನ್ನು ಸೂಚಿಸುವ ಹಲವು ಶಾಸನಗಳಿವೆ.

ಒಟ್ಟಾರೆಯಾಗಿ ಕೆರೆಗಳ ಸಂರಕ್ಷಣೆ ಮತ್ತು ರಚನಾ ವಿನ್ಯಾಸವನ್ನು ಚಾರಿತ್ರಿಕವಾಗಿ ನೋಡಿದಾಗ ಸಿಂಧೂ ನಾಗರಿಕತೆ ಕಾಲದಿಂದ ಗುರುತಿಸಬಹುದು. ಹಾಗೆಯೇ ಜಾತಕ, ಶಾಸನಗಳಲ್ಲಿ ಕೆರೆ ನಿರ್ಮಾಣದ ಬಗ್ಗೆ ಉಲ್ಲೇಖಗಳಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೇ ಈ ಕೆರೆಗಳ ರಚನೆಗೆ ಯಾವ ಯಾವ ವಿಧಾನಗಳನ್ನು ಅನುಸರಿಸಿದರೆ ಸೂಕ್ತವಾದ ಭದ್ರತೆಯನ್ನು ಒದಗಿಸಲು ಸಾಧ್ಯ ಎಂಬುದನ್ನು ಕುರಿತು ಈ ಕೆರೆಗಳ ನಿರ್ಮಾಣದಿಂದ ಮುಂದೆ ಆಗುವ ಅನುಕೂಲತೆಗಳನ್ನು ಹಾಗೂ ರಕ್ಷಿಸುವ ಹೊಣೆಗಾರಿಕೆಯನ್ನು ಒಬ್ಬ ರಾಜನಿಂದ ಹಿಡಿದು ಜನಸಾಮಾನ್ಯರವರೆಗೂ ಸಹ ಜವಾಬ್ದಾರರಾಗಿದ್ದು, ಎಲ್ಲರ ಪಾತ್ರವೂ ಸಹ ತುಂಬ ಮಹತ್ವದ್ದಾಗಿರುತ್ತಿತ್ತು ಎಂದು ತಿಳಿಯಬಹುದು.

ಕೆರೆಯ ಅಂಗಳ

ಕೆರೆಗೆ ಅಡ್ಡಲಾಗಿ ಏರಿ ಕಟ್ಟಿದಾಗ, ಅದರ ಹಿಂದೆ ನೀರು ಸಂಗ್ರಹವಾಗುತ್ತದೆ. ಆ ಪ್ರದೇಶವೇ 'ಕೆರೆ ಅಂಗಳ'. ಈ ಭಾಗವು ಸಾಮಾನ್ಯ ಭೂಪ್ರದೇಶವಾಗಿದ್ದು, ಇಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ಕೆರೆಯ ಈ ಭಾಗದಲ್ಲಿ ಚಿಕ್ಕ ಹಳ್ಳಗಳಿಂದ ನೀರು ಹರಿದು ಬಂದು ಶೇಖರಗೊಳ್ಳುತ್ತದೆ. ಹೆಚ್ಚು ಮಳೆಯಾಗಿ ಅಧಿಕ ನೀರು ಬಂದಂತೆ, ನೀರಿನ ಹರವು ವಿಸ್ತಾರಗೊಳ್ಳುವುದರೊಂದಿಗೆ ಕೆರೆಯು ತುಂಬುತ್ತಾ ಹೋಗುತ್ತದೆ. ಭೂಮಟ್ಟದಿಂದ ಕಟ್ಟೆಗಳು ಗರಿಷ್ಠ ಮಟ್ಟ ಮುಟ್ಟಿದೆ ಎನ್ನುತ್ತಾರೆ. ಕನಿಷ್ಠ ಮಟ್ಟದ ನೀರು ನಿಲ್ಲುವ ಕೆರೆಯ ಭೂಭಾಗಕ್ಕೆ ಅಂಗಳ ಎಂದು ಕರೆಯುವರು.

ಕೆರೆಯ ತಳಭಾಗದ ಮಣ್ಣು ಜಿಗುಟಾಗಿದ್ದು, ಜೇಡಿಮಣ್ಣಿನಿಂದ ಕೂಡಿದ್ದರೆ ಒಳಿತು. ಅಂಗಳದಲ್ಲಿ ನೀರು ಸೋರಿ ಹೋಗಬಾರದು ಮತ್ತು ನೀರು ಇಂಗಬಾರದು. ಅಂಗಳದಲ್ಲಿ ಅಲ್ಲಲ್ಲಿ ದಿಣ್ಣೆಗಳಿಂದ ಕೂಡಿರಬಾರದು. ಕೆರೆ ಅಂಗಳದಲ್ಲಿ ಎಷ್ಟು ನೀರು ನಿಲ್ಲುವುದೋ ಅದು ಆ ಪ್ರದೇಶದ ನೀರಿನ ಹರವು. ಅದನ್ನೇ ಸಾಮಾನ್ಯವಾಗಿ 'ಕೆರೆಯ ಅಂಗಳ' ಎಂದು ಕರೆಯುತ್ತಾರೆ.

ಅಚ್ಚುಕಟ್ಟು ಪ್ರದೇಶ

ಕೆರೆಯ ಅಚ್ಚುಕಟ್ಟು ಪ್ರದೇಶವೆಂದರೆ ನೀರು ಸಂಗ್ರಹವಾಗುವ ವಿರುದ್ಧ ದಿಕ್ಕಿನ ಪ್ರದೇಶ. ಏರಿಯ ಹೊರಮುಖವೆಂತಲೂ ಹೇಳಬಹುದು. ಸಾಮಾನ್ಯವಾಗಿ ಈ ಪ್ರದೇಶದಲ್ಲಿಯೇ ವ್ಯವಸಾಯವನ್ನು ಮಾಡುತ್ತಾರೆ. ಕೆರೆಯ ನೀರಾವರಿಗೊಳಪಟ್ಟ, ಅಂದರೆ ಕೃಷಿ ಮಾಡಲ್ಪಡುವ ಪ್ರದೇಶಕ್ಕೆ ಆಯಕಟ್ಟು ಅಥವಾ ಅಚ್ಚುಕಟ್ಟು ಪ್ರದೇಶವೆಂದು ಕರೆಯುವರು. ಇದು ಕೆರೆ ನೀರಾವರಿಗೆ ಒಳಪಟ್ಟ ಪ್ರದೇಶ. ಅಚ್ಚುಕಟ್ಟು, ಆಯಕಟ್ಟು ಪದಪ್ರಯೋಗವನ್ನು ಶಿಲಾಶಾಸನಗಳಲ್ಲಿ ಕಾಣಬಹುದು. ಅಚ್ಚುಕಟ್ಟು ಪ್ರದೇಶವನ್ನು ಅದರ ಗುಣಕ್ಕನುಗುಣವಾಗಿ ಉತ್ತಮ, ಮಧ್ಯಮ, ಕನಿಷ್ಠವೆಂದು ವಿಂಗಡಿಸುವ ರೂಢಿ ಇದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

ಏರಿ ನಿರ್ಮಾಣ

ಕೆರೆಯ ಒಂದು ಮುಖ್ಯವಾದ ಭಾಗವೆಂದರೆ ಏರಿ. ಇದನ್ನು ಒಡ್ಡು, ಅಡ್ಡಗಟ್ಟೆ ಎಂತಲೂ ಕರೆಯುವರು. ಏರಿ ನಿರ್ಮಾಣವಾದರೆ ಕೆರೆ ನಿರ್ಮಾಣವಾದಂತೆ. ಏರಿಗೆ ಮಣ್ಣನ್ನು ತುಂಬುವುದಕ್ಕೆ ಅನುಗುಣವಾಗಿ ಏರಿಯನ್ನು ಮೂರು ಪ್ರಕಾರಗಳಾಗಿ ವಿಂಗಡಿಸಬಹುದು.

೧. ಮೊದಲ ಪ್ರಕಾರದ ಏರಿಯ ಒಳ ಮತ್ತು ಹೊರಗೆ ಏಕಪ್ರಕಾರವಾಗಿ ಒಂದೇ ವಿಧದ ಮಣ್ಣನ್ನು ಹಾಕುವುದು. ಈ ರೀತಿಯ ಏರಿಗಳು ದಕ್ಷಿಣ ಭಾರತದಾದ್ಯಾಂತ ಬಳಕೆಯಲ್ಲಿವೆ.

೨. ಎರಡನೇ ಪ್ರಕಾರದ ಏರಿಯ ಒಳಭಾಗಕ್ಕೆ ಜಿಗುಟಾದ ಮಣ್ಣನ್ನು ತುಂಬಿ ಹೊರಭಾಗಕ್ಕೆ ಮರಳು ಮಿಶ್ರಿತ ಮಣ್ಣನ್ನು ತುಂಬಲಾಗಿರುತ್ತದೆ. ಈ ಪ್ರಕಾರದ ಏರಿಯ ನಿರ್ಮಾಣ ಮಹಾರಾಷ್ಟ್ರ, ಕರ್ನಾಟಕ, ಧಾರವಾಡ, ಬೆಳಗಾಂ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬಂದಿದೆ.

೩. ಮೂರನೇ ಪ್ರಕಾರದ ಏರಿಯಲ್ಲಿ ಏರಿಯ ಒಳಗೆ ಜೇಡಿ ಮಣ್ಣನ್ನು ಅಥವಾ ಕಲ್ಲುಗಾರೆಯಿಂದ ನಡುಗೋಡೆಯ ಕಟ್ಟೆ ಸುತ್ತಲೂ ಒಂದೇ ಗುಣಮಟ್ಟದ ಮಣ್ಣನ್ನು ಹಾಕುವುದು. ಈ ವಿಧದ ಏರಿಯನ್ನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಪರಿಸರದಲ್ಲಿ ಇಂದಿಗೂ ಕಾಣಬಹುದು.[೧೧]

ಕರ್ನಾಟಕದಲ್ಲಿ ಕೆರೆಯ ಏರಿಯ ನಿರ್ಮಾಣಕ್ಕೆ ಉತ್ತರ ಕರ್ನಾಟಕವನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಒಂದೇ ತೆರನಾದ ಮಣ್ಣನ್ನು ಬಳಸಿರುವುದು ರೂಢಿಯಲ್ಲಿದೆ.

ಹಿರೇಕೆರೂರು ಪರಿಸರದ ಎಲ್ಲಾ ಕೆರೆಗಳ ಏರಿಗಳು ಮಣ್ಣಿನಿಂದ ನಿರ್ಮಿಸಲಾಗಿದೆ. ಆದುದರಿಂದ ಈ ಭಾಗವನ್ನು ಅತ್ಯಂತ ಗಟ್ಟಿಯಾಗಿ ಕಟ್ಟಬೇಕಾಗುತ್ತದೆ. ಹೀಗೆ ಏರಿಯನ್ನು

ನಿರ್ಮಿಸಲು ಮಣ್ಣನ್ನು ಹಾಕಿ ನೀರಿನಿಂದ ನೆನೆಸಿ ಗಟ್ಟಿ ಮಾಡಿ ಅದರ ಮೇಲೆ ಮತ್ತಷ್ಟು ಮಣ್ಣನ್ನು ಹಾಕುತ್ತಾ ಹೋಗುತ್ತಾರೆ. ಈ ರೀತಿ ಪದೇ ಪದೇ ಮಾಡುವುದರಿಂದ ಮಣ್ಣು ಚೆನ್ನಾಗಿ ಕೂಡಿಕೊಂಡು ಗಟ್ಟಿಯಾಗುತ್ತದೆ. ಏರಿಯನ್ನು ಕಟ್ಟಲು ಕೆರೆಯ ಕೆಳಭಾಗದ ಮಣ್ಣನ್ನು ಬಳಸಿಕೊಂಡು ಕೆರೆಯ ಆಳ ಮತ್ತು ಕೆರೆಯ ಅಗಲವನ್ನು ವಿಸ್ತರಿಸಲಾಗಿದೆ. ಇದರಿಂದ ಕೆರೆಯಲ್ಲಿ ಹೆಚ್ಚಿನ ನೀರು ಸಂಗ್ರಹವಾಗುತ್ತದೆ.

ತೂಬುಗಳ ರಚನೆ

ತೂಬುಗಳು ಕೆರೆಯ ಅವಿಭಾಜ್ಯ ಅಂಗ. ತೂಬುಗಳೇ ಕೆರೆಯ ನೀರನ್ನು ಹೊರಗೆ ಹೋಗದಂತೆ ತಡೆದಿರುವ ಸಾಧನಗಳಾಗಿವೆ. ಒಂದೊಂದು ಕೆರೆಗೂ ಒಂದು ಅಥವಾ ಎರಡು ತೂಬುಗಳು ಇರುತ್ತವೆ. ಕೆಲವೊಮ್ಮೆ ಮೂರು ಅಥವಾ ನಾಲ್ಕು ಇದ್ದುದೂ ಉಂಟು. ಕೆರೆಯ ಗಾತ್ರ, ಸಾಮರ್ಥ್ಯದ ಆಧಾರದ ಮೇಲೆ ತೂಬುಗಳನ್ನು ಅಳವಡಿಸಿಕೊಳ್ಳಲಾಗಿದೆ. ಕೆರೆಯನ್ನು ಕಟ್ಟಲು ವೆಚ್ಚ ಭರಿಸಲಾಗದವರು ಕೇವಲ ತೂಬುಗಳನ್ನಿಟ್ಟು ಕೆರೆ ಸಂರಕ್ಷಣೆಗೆ ಮುಂದಾಗಿದ್ದಾರೆ. ತೂಬುಗಳನ್ನು ಸೂಚಿಸುವ ಪದ್ಧತಿ ಈಗಲೂ ಇದೆ. ಅದನ್ನು ಕೆರೆಲಕ್ಷ್ಮಮ್ಮ ಎಂದೂ ಸಹ ಕರೆಯುವರು. ಕೆರೆ ಕಣ್ಮರೆಯಾದರೂ ತೂಬುಗಳನ್ನು ಯಾರೂ ಕೀಳುತ್ತಿರಲಿಲ್ಲ. ಹೀಗಾಗಿ ತೂಬುಗಳ ರಚನೆಯ ಕಾರ್ಯಕ್ಕೆ ಮಹತ್ವ ನೀಡಲಾಗಿತ್ತು.

ಪ್ರಾಚೀನ ತೂಬುಗಳು ಸಾಮಾನ್ಯವಾಗಿ ಸ್ಥಳೀಯವಾಗಿ ದೊರೆಯುವ ಕಲ್ಲಿನಿಂದ ನಿರ್ಮಿಸಿದ್ದು, ಎರಡು ಕಂಬಗಳಿಂದ ಕೂಡಿರುತ್ತವೆ. ಈ ಕಂಬಗಳಿಗೆ ತಲೆಯಲ್ಲಿ ಒಂದು, ನಡುವಿನಲ್ಲಿ ಒಂದು ಅಡ್ಡಗಲ್ಲನ್ನು ಇರಿಸಲಾಗುತ್ತದೆ. ಈ ಎರಡೂ ಅಡ್ಡಕಲ್ಲುಗಳ ಮಧ್ಯಭಾಗದಲ್ಲಿ ಸುಮಾರು ೨೫ ಸೆಂ.ಮೀ. ವ್ಯಾಸದ ಒಂದು ರಂಧ್ರವಿರುತ್ತದೆ. ಇದರ ಮೂಲಕವಾಗಿ ರಂಧ್ರದ ಅಳತೆಗೆ ತಕ್ಕ ವ್ಯಾಸವುಳ್ಳ ಮರದ ದಿಮ್ಮಿಯನ್ನು ಇಟ್ಟು ರಂಧ್ರವನ್ನು ಮುಚ್ಚಲಾಗುತ್ತದೆ. ಈ ಮರದ ದಿಮ್ಮಿಯನ್ನು ಮೇಲಕ್ಕೆತ್ತಿದಾಗ ನೀರು ಕಾಲುವೆಯ ಮುಖಾಂತರ ಹರಿದು ಅಚ್ಚುಕಟ್ಟು ಪ್ರದೇಶಕ್ಕೆ ಹರಿದು ಹೋಗುತ್ತದೆ. ಮರದ ವಿಶೇಷತೆ ಏನೆಂದರೆ ಅದು ನೀರಿನಲ್ಲಿ ನೆನೆದು ಹಿಗ್ಗುತ್ತದೆ. ಈ ರೀತಿಯಾಗಿ ಹಿಗ್ಗಿದ ಮರದ ತುಂಡು ರಂಧ್ರದಲ್ಲಿ ಬಿಗಿಯಾಗಿ ಕುಳಿತು ನೀರು ಹರಿಯುವುದನ್ನು ಆದಷ್ಟು ತಡೆಯುತ್ತದೆ. ತೂಬಿಗೆ ಹಾಗೂ ಏರಿಯ ಮುಖಾಂತರ ರಚಿಸಲಾದ ಒಂದು ಸುರಂಗದ ಸಂಪರ್ಕ ಇರುತ್ತದೆ. ಹಳೆಯ ಕೆರೆಗಳಲ್ಲಿ ಸುರಂಗ ಕಲ್ಲು ಕಟ್ಟಿದ್ದಾಗಿರುತ್ತದೆ. ಈಗ ಜೀರ್ಣೋದ್ಧಾರ ಮಾಡುವ ಕೆರೆಗಳಲ್ಲಿ ಕಾಂಕ್ರೀಟು ಕೊಳಾಯಿಗಳ ಜೋಡಣೆ ಇರುತ್ತದೆ.

ತೂಬುಗಳ ನಿರ್ಮಾಣದಲ್ಲಿ ಕಲ್ಲಿನ ಜೊತೆಗೆ ಇಟ್ಟಿಗೆಯ ಬಳಕೆಯೂ ಕಂಡುಬಂದಿದೆ. ಉದಾ : ಚನ್ನರಾಯಪಟ್ಟಣ ತಾಲೂಕಿನ ದಿಡಗ ಕೆರೆಯ ಹಳೆಯ ತೂಬು ಇಂದು ನಾಶವಾಗಿದ್ದು, ಅಲ್ಲಿ ತೂಬಿಗೆ ಬಳಸಿರುವ ಇಟ್ಟಿಗೆಯ ಅವಶೇಷಗಳು ದೊರೆತಿವೆ. ಇತ್ತೀಚೆಗೆ ಕಾಂಕ್ರೀಟು ಇಲ್ಲವೆ ಸೈಜುಗಲ್ಲುಗಳ ತೂಬುಗಳನ್ನು ಕಟ್ಟಿದ್ದಾರೆ. ಪ್ರಾಚೀನ ಕಾಲದ ಕೆರೆಗಳನ್ನು

ಪುನರುಜ್ಜೀವನಗೊಳಿಸುವ ಸಂದರ್ಭದಲ್ಲಿ ಸರ್ಕಾರದ ನೀರಾವರಿ ಇಲಾಖೆಯವರು ಮೂಲ ತೂಬಿಗೆ ಯಾವುದೇ ರೀತಿಯ ಧಕ್ಕೆ ಉಂಟಾಗದಂತೆ ಮರದ ತುಂಡನ್ನೇ ಬಳಸಿದ್ದಾರೆ. ಅಂದರೆ ಇಲಾಖೆಯವರು ತೂಬಿನ ರಂಧ್ರಕ್ಕೆ ಮರದ ತುಂಡು ಇಟ್ಟು ಅದರ ಮೇಲ್ಭಾಗಕ್ಕೆ ಕಬ್ಬಿಣದ ಸಲಾಕೆಯನ್ನು ಅಳವಡಿಸಿ ತಿರುಚುವ ಮೂಲಕ ಯಾಂತ್ರೀಕರಿಸಿದ್ದಾರೆ. ಕೆರೆಯ ಏರಿಯಿಂದ ತೂಬಿರುವ ಭಾಗವನ್ನು ತಲುಪಲು ಸಿಮೆಂಟ್ ಮತ್ತು ಕಬ್ಬಿಣದ ಚಿಕ್ಕ ಸೇತುವೆಯನ್ನು ಕೆಲವು ಕೆರೆಗಳಲ್ಲಿ ಅಳವಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕೆರೆಗಳನ್ನು ಜೀರ್ಣೋದ್ಧಾರ ಮಾಡುವಾಗ ಹಳೆಯ ತೂಬುಗಳನ್ನು ನವೀಕರಿಸುವ ಬದಲು ಏರಿಗೆ ತೂಬುಗಳನ್ನು ಅಳವಡಿಸಿರುವುದು ಸಾಮಾನ್ಯವಾಗಿದೆ. ಕೆಲವು ತೂಬುಗಳಿಗೆ ಮರದ ದಿಣ್ಣೆಗಳ ಬದಲು ಕಬ್ಬಿಣದ ಬಾಗಿಲನ್ನು ಬಳಸಿದ್ದಾರೆ.

ನೀರ್ಗಂಟಿ(ನೀರುಗಂಟಿ)ಗಳು

ನೀರ್ಗಂಟಿಗಳನ್ನು ಗಂಗಮತಸ್ಥರೆಂದು ಕೆರೆಯುತ್ತಾರೆ. ಕೆರೆಯನ್ನು ಕಾಯುವುದು, ನೀರು ಪೋಲಾಗದಂತೆ ಕಾಪಾಡುವುದು, ಅಗತ್ಯವಿದ್ದಾಗ ಗದ್ದೆಗಳಿಗೆ ನೀರು ಬಿಡುವುದು ಇವರ ಕರ್ತವ್ಯವಾಗಿರುತ್ತದೆ. ತಳವಾರನು ಊರಿನ ರಕ್ಷಣೆಯ ಕಾರ್ಯದಲ್ಲಿದ್ದರೆ, ನೀರ್ಗಂಟಿಯಾದವರು ಕೆರೆ ನೀರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಬೇಸಿಗೆ ಕಾಲದಲ್ಲಿ ನೀರನ್ನು ಉಳಿಸಲು ಎಚ್ಚರ ವಹಿಸುತ್ತಿದ್ದರು. ಹಳ್ಳಿಯ ರೈತರಿಗೆ, ಅವರ ಬೆಳೆಗಳಿಗೆ ಅಗತ್ಯವಾದ ನೀರನ್ನು ಹಂಚಿಕೆ ಮಾಡುವುದು ಅವನ ಕಾಯಕ. ನೀರು ಕಡಿಮೆಯಾದಾಗ, ನೀರನ್ನು ಕಳ್ಳತನದಲ್ಲಿ ವಿಲೇ ಮಾಡುತ್ತಿದ್ದ ಎಂಬ ಶಂಕೆ ಬಾರದಿರಲಿ ಎಂದು ಆತ ವ್ಯವಸ್ಥಾಪಕರಿಗೆ ಲೆಕ್ಕ ಒಪ್ಪಿಸುತ್ತಿದ್ದನು.[೧೨]

ಗದ್ದೆಗಳಿಗೆ ನೀರನ್ನು ಹಂಚುವಾಗ ಕ್ರಮವಾಗಿ ಹಂಚುತ್ತಿದ್ದನು. ಒಂದು ಗದ್ದೆಗೆ ನೀರು ಪೂರೈಕೆಯಾಗುವ ತನಕ ಮತ್ತೊಂದು ಗದ್ದೆಯವರು ಆ ನೀರನ್ನು ಕದಿಯಬಾರದೆಂದು ಗದ್ದೆಯ ಒಡ್ಡಿಗೆ ಮುದ್ರೆ ಹಾಕುವ ಪದ್ಧತಿಯಿತ್ತು. ಇವರ ಕೆಲಸ ಕೆರೆಯನ್ನು ನೋಡಿಕೊಳ್ಳವುದು ಹಾಗೂ ತೂಬುಗಳನ್ನು ಎತ್ತುವುದರ ಮೂಲಕ ಕಾಲುವೆಗಳಿಗೆ ನೀರು ಬಿಡುವುದು. ಈ ಸೇವೆಗಾಗಿ ಅವರಿಗೆ ಉತ್ತಮ ಭೂಮಿ ಉಂಬಳಿ ಇರುತ್ತಿತ್ತು.

ನೀರ್ಗಂಟಿಗಳನ್ನು ಕುರಿತ ಗೀಜಿಹಳ್ಳಿಯ ಕ್ರಿ.ಶ. ೧೨ ಮತ್ತು ೧೩ನೇ ಶತಮಾನದ ಶಾಸನವು ೧೩ ನೀರ್ಗಂಟಿಯರನ್ನು 'ನೀರಯ್ಯ'ನೆಂದು ಉಲ್ಲೇಖಿಸಿದ್ದು, ಅವನಿಗೆ ಕೆರೆ ಕೆಳಗಿನ ಐದು ಕೊಳಗ ಭೂಮಿ ನೀಡಿರುವುದನ್ನು ತಿಳಿಸಿದೆ. ಪಾರಂಪರಿಕವಾಗಿ ಗ್ರಾಮಾಧಿಕಾರಿಗಳಿಂದ ರದ್ದುಪಡಿಸಿ ಕೆರೆ ನೀರಿನ ನಿರ್ವಹಣೆಯನ್ನು ನೀರಾವರಿ ಇಲಾಖೆಗೆ ನೇಮಿಸಿದರು. ಇತ್ತೀಚಿನ ದಿನಗಳಲ್ಲಿ ಹಿರೇಕೆರೂರ ಪರಿಸರದ ಹೆಚ್ಚಿನ ಗ್ರಾಮಗಳಲ್ಲಿ ನೀರ್ಗಂಟಿಗಳಿಲ್ಲ. ಬದಲಾಗಿ ಕೆರೆಗೆ

ನೀರು ಬಂದರೆ ಗ್ರಾಮದ ಜನರೇ ತೂಬುಗಳನ್ನು ಎತ್ತಿ ಜಮೀನುಗಳಿಗೆ ನೀರನ್ನು ಹಾಯಿಸಿಕೊಳ್ಳುತ್ತಾರೆ. ನೀರ್ಗಂಟಿಗಳು ಉತ್ತಮ ಈಜುಗಾರರಾಗಿರಬೇಕಿತ್ತು. ಊರಿನ ಜಮೀನುಗಳಿಗೆ ಕೆರೆಯ ನೀರನ್ನು ಹಾಯಿಸಿಕೊಳ್ಳುವುದರಲ್ಲಿ ಅನ್ಯಾಯವಾಗದಂತೆ ಮಾಡುವುದು ಅವನ ಕರ್ತವ್ಯವಾಗಿತ್ತು.

ಹಿಂದೆ ನೀರ್ಗಂಟಿಗಳು ಪಾರಂಪರ್ಯವಾಗಿ ನೇಮಕವಾಗುತ್ತಿದ್ದರು. ಅವರು ಹೆಚ್ಚಾಗಿ ತಳವಾರ(ವಾಲ್ಮೀಕಿ)ಜಾತಿಗೆ ಸೇರಿದವರಾಗಿರುತ್ತಿದ್ದರು. ಶಿಕ್ಷಣ ಪಡೆದಂತೆ, ವೃತ್ತಿಗಳು ಬದಲಾಗತೊಡಗಿದವು. ಬೇರೆ ಜನಾಂಗದವರೂ ಕೂಡ ನೀರ್ಗಂಟಿ ವೃತ್ತಿ ಮಾಡತೊಡಗಿದರು.

ತೂಬುಗಳ ಮೇಲಿನ ಉಬ್ಬುಶಿಲ್ಪಗಳು

ತಾಲೂಕಿನ ಮಡ್ಲೂರು, ಬೆಟಕೇರೂರು ಇನ್ನೂ ಮುಂತಾದ ಗ್ರಾಮಗಳ ಕೆರೆಯ ತೂಬುಗಳ ಮೇಲೆ ಗಜಲಕ್ಷ್ಮೀ ಮತ್ತು ಇತರ ದೇವರುಗಳಿಗೆ ಸಂಬಂಧಿಸಿದ ಉಬ್ಬುಶಿಲ್ಪಗಳನ್ನು ನೋಡಬಹುದು. ಅವುಗಳಲ್ಲಿ ಗಜಲಕ್ಷ್ಮೀ ಉಬ್ಬುಶಿಲ್ಪವು ಹೆಚ್ಚು ತೂಬುಗಳ ಮೇಲೆ ಸಾಮಾನ್ಯವಾಗಿ ಕಂಡುಬಂದಿದೆ. ಈ ಉಬ್ಬುಶಿಲ್ಪಗಳನ್ನು ಗಮನಿಸಿದಾಗ ಬಹುಶಃ ಸಮೃದ್ಧಿಯ ಸಾಂಕೇತಿಕವಾಗಿ ಕೆತ್ತಿರಬಹುದು. ಗಜಲಕ್ಷ್ಮೀ ಉಬ್ಬುಶಿಲ್ಪಗಳ ಪ್ರಾಚೀನತೆಯು ಶುಂಗರ ಕಾಲದಿಂದ ಕಂಡುಬಂದಿರುವುದರಿಂದಾಗಿ ಚೂಡಾಮಣಿ ನಂದಗೋಪಾಲ್ ಅವರು 'ಗಜಲಕ್ಷ್ಮಿಯ ಸಾಂಕೇತಿಕ ವಿನ್ಯಾಸ : ಒಂದು ಅಧ್ಯಯನ' ಎಂಬ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.[೧೪]

ಕೋಡಿಗಳು

ಕೆರೆಯ ವಿವಿಧ ಭಾಗಗಳಲ್ಲಿ ಕೋಡಿಯೂ ಒಂದು. ಪ್ರತಿಯೊಂದು ಕೆರೆಯಲ್ಲಿಯೂ ತೂಬಿನ ಜೊತೆಗೆ ಕಟ್ಟಡದ ಕೋಡಿಯೂ ಇರುತ್ತಿತ್ತು. ಕೆರೆಯ ಗಾತ್ರವನ್ನು ಆಧರಿಸಿ ಒಂದು ಮತ್ತು ಎರಡು ಕೋಡಿಗಳು ಕಂಡುಬರುತ್ತವೆ. ಇವುಗಳ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ಕೆಳಗಿನ ಇತರೆ ಕೆರೆಗಳಿಗೆ ಹರಿದು ಹೋಗುತ್ತದೆ. ಕೋಡಿಗಳ ಅಗಲ ೩೦ ರಿಂದ ೩೦೦ ಅಡಿಗಳವರೆಗೂ ಇರುತ್ತಿತ್ತು. ಕೋಡಿಯ ಕಟ್ಟಡವನ್ನು ಬಲವಾಗಿ ಕಟ್ಟದಿದ್ದರೆ ಕೋಡಿಯ ಮೇಲೆ ಹರಿಯುವ ನೀರಿನ ರಭಸಕ್ಕೆ ಎಲ್ಲವೂ ಕೊಚ್ಚಿಕೊಂಡು ಹೋಗುತ್ತಿತ್ತು. ಆದ್ದರಿಂದ ಕೋಡಿಗಳನ್ನು ಸುತ್ತಮುತ್ತ ಸಿಗುವ ದೊಡ್ಡ ದೊಡ್ಡ ಆಕಾರದ ಬಂಡೆಗಲ್ಲುಗಳಿಂದ ಭದ್ರಗೊಳಿಸಿದ್ದಾರೆ. ಸಾಮಾನ್ಯವಾಗಿ ತಾಲೂಕಿನ ಎಲ್ಲಾ ಕೆರೆಗಳ ಕೋಡಿಗಳು ಚಚ್ಚೌಕಾರವಾಗಿ ಕಂಡುಬಂದಿವೆ. ಕೋಡಿಗಳನ್ನು ಕೆರೆಗಳಿಗೆ ಅಳವಡಿಸಿರುವುದರಿಂದ ಕೆರೆಯಲ್ಲಿ ತೇಲಿಬಂದ ಪ್ರಾಣಿಗಳ ಶವ, ಗಿಡಗಂಟಿ, ಕಶ್ಮಲಗಳನ್ನು ಕೆರೆಯಿಂದ ಹೊರಗೆ ತಳ್ಳಿ ಕೆರೆಯನ್ನು ನಿರ್ಮಲಗೊಳಿಸುತ್ತವೆ. ಇಂತಹ ಕೋಡಿಗಳನ್ನು ಕೆರೆಯ ತಗ್ಗಿನ ಬದಿಯಲ್ಲಿ ಒಂದು ಮಟ್ಟದ ಎತ್ತರದಲ್ಲಿ ನಿರ್ಮಿಸಿರುತ್ತಾರೆ. ಕೆಲವು ಕೋಡಿಗಳು ಕಂಬಗಳಿಂದ ಕೂಡಿವೆ. ಇವು ಕೋಡಿಯ ಮೇಲೆ ಹರಿಯುವ ನೀರಿನ

ವೇಗವನ್ನು ತಡೆಗಟ್ಟಿ ಕೋಡಿಗೆ ಆಗಬಹುದಾದ ಅಪಾಯವನ್ನು ತಪ್ಪಿಸುತ್ತವೆ. ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹ ಮಾಡಬೇಕೆಂದಾಗ ಈ ಕಂಬಗಳ ಮಧ್ಯೆ ಉಸುಕಿನ ಚೀಲ, ಮರದ ತೊಪ್ಪಲು ಹಾಗೂ ಕೆಸರುಮಣ್ಣಿನಿಂದ ಮಣ್ಣು ನೀರನ್ನು ಶೇಖರಿಸುತ್ತಾರೆ. ಕರ್ನಾಟಕದ ಅತ್ಯಂತ ದೊಡ್ಡ ಕೋಡಿಯು ಹಾವೇರಿ ಜಿಲ್ಲೆಯ ಮದಗ ಮಾಸೂರಿನ ಕೆರೆಯಲ್ಲಿದೆ.[೧೫]

ವಿಜಯನಗರ ಕಾಲದಲ್ಲಿ ಕೆಲವು ತಜ್ಞರು ಕೋಡಿಯನ್ನು ಕಟ್ಟುವುದರಲ್ಲಿಯೇ ಪರಿಣತಿಯನ್ನು ಹೊಂದಿದ್ದರು ಎಂಬುದಾಗಿ ಒಂದು ಶಾಸನವು ತಿಳಿಸುತ್ತದೆ. ವೆಂಕಟಪತಿರಾಯನ ಕಾಲದ ರುದ್ರಪ್ಪ ನಾಯುಡು ಎಂಬಾತನು ಕೋಡಿಯನ್ನು ಕಟ್ಟುವುದರಲ್ಲಿ ಪರಿಣತಿಯನ್ನು ಹೊಂದಿದ್ದು, ಅವನು ಕೊಲ್ಲೂರು ಕೆರೆಗೆ ಮೂವತ್ಮೂರು ಕಂಬಗಳಿರುವ ಕೋಡಿಯನ್ನು ನಿರ್ಮಿಸಿದ್ದಾನೆಂದು ಶಾಸನವು ಉಲ್ಲೇಖಿಸಿದೆ.[೧೬]

ಕಾಲುವೆಗಳ ವ್ಯವಸ್ಥೆ

ಕೆರೆಯಲ್ಲಿ ಸಂಗ್ರಹವಾದ ನೀರನ್ನು ನಿಯಂತ್ರಿಸಿ ಅಚ್ಚುಕಟ್ಟು ಪ್ರದೇಶಕ್ಕೆ ಹಾಯಿಸುವ ಮಾರ್ಗಕ್ಕೆ 'ಕಾಲುವೆ' ಎಂದು ಹೆಸರು. ಕಾಲುವೆಯು ಕೆರೆಯ ಅವಿಭಾಜ್ಯ ಅಂಗಗಳಲ್ಲಿ ಒಂದು. ಕೆರೆಯ ನೀರನ್ನು ಕಾಲುವೆಗಳ ಮೂಲಕ ಏರಿಯ ಕೆಳಭಾಗದಿಂದ ವ್ಯವಸಾಯ ಭೂಮಿಗೆ ಹಾಯಿಸುತ್ತಿದ್ದರು. ಕೆರೆಗೆ ನೀರು ಬರಲು ಕಾಲುವೆಗಳನ್ನು ಏರಿಯ ಕೆಳಭಾಗದಲ್ಲಿ ನಿರ್ಮಿಸಲಾಗುತ್ತಿತ್ತು. ತಾಲೂಕಿನ ಗ್ರಾಮಗಳ ಹಲವಾರು ಕೆರೆಗಳ ಕಾಲುವೆಗಳು ಗ್ರಾಮಗಳ ಹಲವಾರು ಕೆರೆಗಳ ಕಾಲುವೆಗಳು ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು, ಕೆಲವು ಇತ್ತೀಚಿನ ಸಿಮೆಂಟ್, ಕಾಂಕ್ರೀಟನಿಂದ ಕಟ್ಟಲ್ಪಟ್ಟಿವೆ. ಒಂದು ಕೆರೆಗೆ ಒಂದರಿಂದ ನಾಲ್ಕು ಕಾಲುವೆಗಳು ಇರುತ್ತಿದ್ದವು. ಕೆರೆಯಲ್ಲಿ ಮೇಲ್ಮಟ್ಟದ ಕಾಲುವೆ ಮತ್ತು ಕೆಳಮಟ್ಟದ ಕಾಲುವೆಗಳು ಇದ್ದವು. ಕೆರೆಯು ತುಂಬಿದಾಗ ಮೇಲ್ಮಟ್ಟದ ಕಾಲುವೆಯಿಂದ ನೀರನ್ನು ಹಾಯಿಸಲಾಗುತ್ತಿತ್ತು. ನೀರು ಕೆಳಮಟ್ಟಕ್ಕೆ ಬಂದಾಗ ಕೆಳಮಟ್ಟದ ಕಾಲುವೆಯಿಂದ ನೀರನ್ನು ಹಾಯಿಸುತ್ತಿದ್ದರು. ಈ ರೀತಿಯ ವ್ಯವಸ್ಥೆಯು ಇಂದಿಗೂ ಪ್ರಚಲಿತದಲ್ಲಿದೆ. ನೀರಾವರಿ ಕಾರ್ಯಗಳಿಗಾಗಿ ನಿರ್ಮಿಸಲಾದ ಕೆರೆ ಮತ್ತು ಇತರ ಮೂಲಗಳಿಂದ ನೀರನ್ನು ಹರಿಸಲು ಕಾಲುವೆಗಳನ್ನು ರಕ್ಷಿಸುವುದು ಪ್ರಮುಖ ಕೆಲಸವಾಗಿದೆ. ಏಕೆಂದರೆ ಈ ಕಾಲುವೆಗಳು ಇಲ್ಲದೇ ಹೋದಲ್ಲಿ ನೀರಾವರಿ ವ್ಯವಸ್ಥೆಯೇ ಇಲ್ಲದಂತಾಗುತ್ತದೆ. ನೀರನ್ನು ಸಂಗ್ರಹಿಸುವ ಮತ್ತು ಅದರ ಸದುಪಯೋಗಕ್ಕೆ ಕಾಲುವೆಗಳ ನಿರ್ಮಾಣ ಕಾರ್ಯಗಳನ್ನು ಮಾಡುತ್ತಿದ್ದರು.

೩.೪ ತಾಲೂಕಿನ ಪ್ರಮುಖ ಕೆರೆಗಳು ಮತ್ತು ನೀರಾವರಿ ಚಟುವಟಿಕೆಗಳು

ಹಿರೇಕೆರೂರ ತಾಲೂಕು ಹೆಸರೇ ಸೂಚಿಸುವಂತೆ ಕೆರೆಯಿಂದಲೇ ನಾಮವಾಚಿಯಾಗಿದೆ. ಕೇವಲ ಇದಷ್ಟೇ ಅಲ್ಲದೇ ತಾಲೂಕಿನ ಅಡಿಯಲ್ಲಿ ಬರುವ ಇತರ ಅನೇಕ ಗ್ರಾಮಗಳೂ ಕೂಡ ಬಹುತೇಕ ಕೆರೆಗಳ ಹೆಸರಿನಿಂದಲೇ ಸೂಚ್ಯವಾಗಿವೆ. ಉದಾ : ಹಿರೇಕೆರೂರ, ಚಿಕ್ಕೇರೂರ, ಹಂಸಬಾವಿ ಇನ್ನೂ ಮುಂತಾದವು. ತಾಲೂಕಿನ ಸುತ್ತಮುತ್ತಲಿರುವ ಅನೇಕ ಕೆರೆಗಳು ತಮ್ಮ ಮೂಲ ಉದ್ದೇಶವನ್ನಿಟ್ಟುಕೊಂಡೇ ಕಟ್ಟಲ್ಪಟ್ಟಿವೆ. ಅವುಗಳಲ್ಲಿ ದಿನನಿತ್ಯ ಬಳಕೆಗೆ ಒಂದೆಡೆಯಾದರೆ, ಕೃಷಿ ಮತ್ತಿತರ ಕಾರ್ಯಚಟುವಟಿಕೆಗಳಿಗೆ ಕೆರೆಗಳನ್ನು ಬಹು ಮುಖ್ಯವಾಗಿ ಉಪಯೋಗಿಸುತ್ತಾರೆ. ಆಧುನಿಕರಣದ ಪೂರ್ವದಲ್ಲಿ ಕೆರೆಗಳ ಯಾವ ಭಾಗವೂ ಮುಕ್ಕಾಗದೇ ಮೂಲಸ್ಥಿತಿಯಲ್ಲಿ ಯಥಾವತ್ತಾಗಿ ಇದ್ದವು. ಮಳೆಯ ಅಭಾವದ ಸಂದರ್ಭದಲ್ಲಿ ತುಂಬಿ ಮೂಲಸ್ಥಿತಿಯಲ್ಲಿದ್ದ ಈ ಕೆರೆಗಳನ್ನು ಜನರು ಉಪಯೋಗಿಸುತ್ತಾರೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ತಾಲೂಕಿನ ತುಂಬೆಲ್ಲಾ ಕೆರೆಗಳು ಹೆಸರಿಗೆ ಮಾತ್ರವೆಂಬಂತೆ ಗೋಚರಿಸುತ್ತಿವೆ.

ತಾಲೂಕನ್ನು ಹೊರತುಪಡಿಸಿ ಅದರಡಿ ಬರುವ ಪ್ರತಿಯೊಂದು ಗ್ರಾಮವೂ ಕೆರೆಗಳನ್ನು ಒಳಗೊಂಡಿದೆ. ಸಣ್ಣ ಪ್ರಮಾಣದ ಕೆರೆಗಳು ಮಾತ್ರವಲ್ಲದೇ ದೊಡ್ಡ ಪ್ರಮಾಣದ ಕೆರೆಗಳು ಊರ ಮಧ್ಯೆ, ಅಂಚಿನಲ್ಲಿ, ಊರಿನ ಆರಂಭದಲ್ಲಿ, ಮತ್ತೊಂದು ಊರ ಗಡಿಗೆ ಹೀಗೆ ಎಲ್ಲ ಕಡೆಯೂ ಕೆರೆಗಳು ಕಂಡುಬಂದಿವೆ. ಅವುಗಳಲ್ಲಿ ದೊಡ್ಡ ಪ್ರಮಾಣದ ಕೆರೆಗಳ ಮುಖಾಂತರ ಕೃಷಿಕರು ಮೋಟಾರ್ ಕೊಳವೆಗಳ ಮೂಲಕ ತಮ್ಮ ಹೊಲ, ಗದ್ದೆಗಳಿಗೆ ನೀರು ಹಾಯಿಸಿಕೊಂಡು ನೀರಾವರಿ ಚಟುವಟಿಕೆಗಳನ್ನು ಮಾಡುತ್ತಾರೆ. ಆದರೆ ಸುಮಾರು ನಾಲ್ಕು ವರ್ಷಗಳಿಂದೀಚೆಗೆ ಯಾವ ಕೆರೆಗಳು ಪೂರ್ಣ ಪ್ರಮಾಣದಲ್ಲಿ ತುಂಬಿಲ್ಲವೆಂದು ಕ್ಷೇತ್ರಕಾರ್ಯದ ವರದಿಯಿಂದ ತಿಳಿದು ಬಂದಿದೆ. ಮಳೆಯು ಸಕಾಲಕ್ಕೆ ಬಾರದೇ ಇರುವುದೇ ಈ ರೀತಿಯ ಅವ್ಯವಸ್ಥೆಗೆ ಕಾರಣವಾಗಿದೆ. 'ಮಾನ್ಸೂನ್ ಮಳೆಯು ರೈತನ ಜೊತೆ ಆಡುವ ಜೂಜಾಟ' ಎಂಬ ಮಾತು ಇತ್ತೀಚಿನ ಕೆರೆಗಳ ವಿದ್ಯಮಾನಗಳಿಗೆ ಅಕ್ಷರಶಃ ಸತ್ಯವೆನಿಸುತ್ತದೆ. ಇದರಿಂದ ಕೃಷಿಕ ಸಮುದಾಯದವರು ಹಿಂದಿನಿಂದ ಬಳಸುತ್ತ ಬಂದಿದ್ದ ಕೆರೆಗಳು ವಿನಾಶದ ಅಂಚಿಗೆ ಈಡಾಗಿವೆ. ಒಂದು ಕಾಲಕ್ಕೆ ಮಾನವನ ದೈನಂದಿನ ಚಟುವಟಿಕೆಗಳಿಗೆ ಕಾರಣವಾಗಿದ್ದ ಕೆರೆ-ಬಾವಿಗಳು ಇಂದಿನ ಕಾಲಕ್ಕೆ ಮರೀಚಿಕೆಯಾಗಿ ಕಾಣುತ್ತಿವೆ. ಹಾಗೆಂದ್ರಮಾತ್ರಕ್ಕೆ ಪೂರ್ಣ ಪ್ರಮಾಣದಲ್ಲಿ ಕೆರೆಗಳು ತಮ್ಮ ಅನ್ನದಾತನ ಸ್ಥಾನವನ್ನು ಕಳೆದುಕೊಂಡಿಲ್ಲ. ಆದರೂ ಬೆರಳೆಣಿಕೆಯಷ್ಟು ತುಂಬಿದ ಕೆರೆಗಳು ತಾಲೂಕಿನ ಸುತ್ತಮುತ್ತ ಕಾಣುವುದು ವಿಷದನೀಯವೆನಿಸುತ್ತದೆ.

ಈ ಕಾರಣಗಳಿಂದಾಗಿಯೇ ವ್ಯವಸಾಯ ಆಶ್ರಿತರು ಕೆರೆಗಳನ್ನು ನಂಬದೇ ಅವುಗಳಿಗೆ ಪರ್ಯಾಯವಾಗಿ ಆಧುನಿಕ ಬೋರ್‌ವೆಲ್‌ಗಳ ಮೊರೆಹೋಗುತ್ತಿದ್ದಾರೆ. ಇದ್ದಂತಹ ಶ್ರೀಮಂತರು, ಈ ರೀತಿಯ ಬೋರ್‌ವೆಲ್‌ಗಳನ್ನು ತೆಗೆಸಿ ಕೃಷಿ ಚಟುವಟಿಕೆಗಳನ್ನು ಕೈಗೊಂಡರೆ ಸಾಮಾನ್ಯರು

ಈ ಮಟ್ಟದ ಸ್ಥಿತಿ ತಲುಪಲಾರದೇ ಈಗಲೂ ಆ ಕೆರೆ-ಬಾವಿಗಳನ್ನೇ ನಂಬಿಕೊಂಡು ದಿನಗಳನ್ನು ದೂಡುತ್ತಿದ್ದಾರೆ ಎಂಬುದು ಕಣ್ಣಾರೆ ಕಂಡ ಸತ್ಯ ಮತ್ತು ವಾಸ್ತವ ಸಂಗತಿಯಾಗಿದೆ.

ಈ ರೀತಿಯ ಅನ್ಯಮಾರ್ಗದ ಚಟುವಟಿಕೆಗಳಿಂದ ಕೆರೆಗಳ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಾ ಮುಂದೆ ಹೇಳಲು ಹೆಸರಿಲ್ಲದೆ ತೋರಿಸಲೂ ಗುರುತು ಇಲ್ಲದಂತೆ ಮಾಯವಾಗಿ ಅಂತಸ್ತುಗಳಂತಸ್ತುವಿನ ಮನೆಗಳನ್ನು ಕಾಣಬಹುದಷ್ಟೆ. ಹಾಗಾಗಿ ಈ ಕೆರೆಗಳನ್ನು ಹೂಳೆತ್ತಿ ಪುನರ್ನವೀಕರಣಗೊಳಿಸುವುದು, ಪುನರುಜ್ಜೀವನಗೊಳಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವೆಂದೆನಿಸಿದೆ.

ತಾಲೂಕಿನ ಗ್ರಾಮವಾರು ಕೆರೆಗಳು

೧. ಹಿರೇಕೆರೂರು

ಹಾವೇರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಹಿರೇಕೆರೂರು ಒಂದು. ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕೆ ೫೪ ಕಿ.ಮೀ. ದೂರದಲ್ಲಿದೆ. ಹಾವೇರಿ ಜಿಲ್ಲೆಯ ದಕ್ಷಿಣದ ಮೇರೆಯಲ್ಲಿದೆ. ಮಲೆನಾಡಿನ ಸೆರಗಿನಲ್ಲಿರುವ ಈ ಊರು ಬಯಲು ನಾಡಿನಲ್ಲಿ ಗಣನೆಯಾಗಿದ್ದರೂ ಉಭಯ ಸಂಸ್ಕೃತಿಗಳ ಸಂಗಮವಾಗಿದೆ. ಹಿರೇಕೆರೂರು ಪಟ್ಟಣದ ಇತಿಹಾಸ ತಿಳಿಯಲು ಇಲ್ಲಿನ ಕೆರೆಯೇ ಪ್ರಮುಖ ಆಕರವಾಗಿದೆ. ಭೌಗೋಳಿಕವಾಗಿ ಹೇಳುವುದಾದರೆ, ತಾಲೂಕು ಕೇಂದ್ರವಾಗಿರುವ ಹಿರೇಕೆರೂರು ಪಟ್ಟಣ ೭೫.೩೭' ಪೂರ್ವ ರೇಖಾಂಶ ಹಾಗೂ ೧೪೦.೨೦' ಉತ್ತರ ಅಕ್ಷಾಂಶದ ಮೇಲೆ ನೆಲೆಸಿದೆ. ಈ ತಾಲೂಕು ೮೦೭ ಚ. ಕೀ. ಮೀ. ವಿಸ್ತಾರ ಹೊಂದಿದ್ದು, ಸಮುದ್ರಮಟ್ಟದಿಂದ ೫೯೦ ಮೀ. ಎತ್ತರದಲ್ಲಿದೆ. ವಾರ್ಷಿಕ ಸರಾಸರಿ ೫೭೭.೧೬ ಮಿ.ಮೀ ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕಪ್ಪುಶಿಲೆ ಹೊಂದಿದ್ದು, ಎರೆಮಣ್ಣಿನ ಲಕ್ಷಣ ಹೊಂದಿದೆ. ಈ ತಾಲೂಕಿನ ದಕ್ಷಿಣ ಭಾಗ ಮಲೆನಾಡು ಸೀಮೆಗೆ ಹೊಂದಿಕೊಂಡಿದೆ. ಇದನ್ನು 'ಅರೆಮಲೆನಾಡು' ಎಂದು ಗುರುತಿಸಿದ್ದಾರೆ. ಉತ್ತರ ಭಾಗ ಬಯಲುಸೀಮೆಗೆ ಹೊಂದಿಕೊಂಡಿದೆ. ಈ ತಾಲೂಕು ಅನೇಕ ಗುಡ್ಡಗಳ ಸಾಲುಗಳು ಹಾಗೂ ಸ್ಥಾನಿಕ ಬೆಟ್ಟ-ಮರಡಿ ಗಳಿಂದಲೂ, ಹೊಳೆ-ಹಳ್ಳ, ಅನೇಕ ಕೆರೆಕಟ್ಟೆ, ಕಾಲುವೆಗಳಿಂದಲೂ ಸಂಪದವಾಗಿದೆ. 'ಹಿರೇಕೆರೆ' ೯೦೦ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರೆ, ಜಾಲಿಕಟ್ಟೆ, ಬೊರಗಟ್ಟಿ, ಹೊದೂರ, ಚನ್ನಶೆಟ್ಟಿ, ಅಡ್ಡಗಟ್ಟಿ ಕೆರೆಗಳು ಕಡಿಮೆ ವಿಸ್ತೀರ್ಣ ಹೊಂದಿವೆ.

ಹಿರೇಕೆರೂರ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿದ್ದು, ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುವ ಇದು ಕೊಳವೆಬಾವಿಗಳ ಮೂಲಕ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ ಜನಸಾಮಾನ್ಯರಿಗೆ ಕುಡಿಯುವ ನೀರಿನ ಪೂರೈಕೆ ಮಾಡುತ್ತದೆ.

೨೦೧೧ ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ೧೯೧೯೧. ಇದರಲ್ಲಿ ಪುರುಷರು ೯೭೬೮, ಮಹಿಳೆಯರು ೯೪೨೩ ರಷ್ಟಿದ್ದಾರೆ. ಸಾಕ್ಷರತಾ ಪ್ರಮಾಣ ೧೫೫೧೯. ಇದರಲ್ಲಿ ಪುರುಷರು ೭೯೦೦, ಮಹಿಳೆಯರು ೭೨೧೯.

ಹಿರೇಕೆರೂರಿನಲ್ಲಿ ಒಟ್ಟು ೧೭ ಶಾಸನಗಳು ಕಂಡುಬಂದಿವೆ. ಅವಲ್ಲದೆ ಇನ್ನೂ ಎರಡು ಶಾಸನಗಳು ಲಭ್ಯವಾಗಿದ್ದು, ವರದಿಯಾಗಿರುವುದಿಲ್ಲ. ಈ ಶಾಸನಗಳಲ್ಲಿ ಕ್ರಿ.ಶ. ೯೬೦ ಕ್ಕೆ ಸೇರಿದ ಎರಡು ಶಾಸನಗಳಿದ್ದು, ಇವೇ ಇಲ್ಲಿಯ ಅತಿ ಪ್ರಾಚೀನ ಶಾಸನಗಳು. ಕ್ರಿ.ಶ. ೧೦೪೮ ಹಾಗೂ ಇನ್ನೊಂದು ಶಾಸನ ಇಲ್ಲಿಯ ಅಗ್ರಹಾರವನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೦೫೪, ೧೦೬೦ ಹಾಗೂ ೧೧೨೧ ರ ಶಾಸನಗಳು ಪಿರಿಯಕೆರೆಗೆ ದಾನ ಮಾಡಿದ ಸಂಗತಿ ಒಳಗೊಂಡಿವೆ. ಇತರ ಶಾಸನಗಳು ಭೂದಾನ, ವೀರಮರಣ, ಮಹಾಸತಿಯಂತಹ ವಿಷಯಗಳನ್ನು ಒಳಗೊಂಡಿವೆ.[೧೭]

ದುರ್ಗಾದೇವಿ ಕೆರೆ / ಹಿರೇಕೆರೆ

ಗ್ರಾಮ : ಹಿರೇಕೆರೂರು	ತೂಬುಗಳ ಸಂಖ್ಯೆ : ೦೪
ಸರ್ವೆ ನಂ : ೨೯೪	ಕೆರೆಯ ವಿಸ್ತೀರ್ಣ : ೫೬೩ ಎಕರೆ
ಜಲಾವೃತ ಪ್ರದೇಶ : ೨೨೫.೬೦ (mcft)	ಏರಿಯ ಎತ್ತರ : ೨.೫ ಅಡಿ
ಏರಿಯ ಉದ್ದ : ೪೫.೫ ಅಡಿ	ಅಚ್ಚುಕಟ್ಟು ಪ್ರದೇಶ : ೨೧೪.೬೫ ಹೆ.

ಕೆರೆಯ ಪ್ರಮಾಣ ದೊಡ್ಡದಿದ್ದುದರಿಂದ ತಾಲೂಕಿಗೆ ಹಿರೇಕೆರೂರು ಎಂದು ಹೆಸರು ಬಂದಿದೆ. ಹಿರೇಕೆರೂರು ಪಟ್ಟಣ ಇತಿಹಾಸ ತಿಳಿಯಲು ಊರಲ್ಲಿ ೧೭ ಶಾಸನಗಳು, ಹಿರೇಕೆರೂರು ಹೊರಗೆ ೯ ಶಾಸನಗಳು ಲಭ್ಯವಿವೆ. ಹಿರೇಕೆರೂರಿಗೆ ಹತ್ತಿಕೊಂಡೇ ಕ್ರಿ.ಶ.ಸು. ೨೯೪ ರಲ್ಲಿ ೫೬೩ ಎಕರೆ ೩೭ ಗುಂಟೆ ವಿಸ್ತಾರವಾದ ಪ್ರಾಚೀನ ಬಹುದೊಡ್ಡ ಕೆರೆಯಾಗಿರುವುದರಿಂದ ಇದನ್ನು ಅನ್ವರ್ಥವಾಗಿ ಪಿರಿಯ ಕೆರೆ ಎಂತಲೂ ಕಾಲಕ್ರಮೇಣ ಹ ಕಾರಾವು ರೂಢಿಗೆ ಬಂದು ಹಿರಿಯಕೆರೆ – ಹಿರೇಕೆರೆ ಎಂದಾಗಿದೆ. ಹಿರಿಯ ಕೆರೆಯೂರು ಮತ್ತೆ ಸಂಕ್ಷಿಪ್ತವಾಗಿ 'ಹಿರೇಕೆರೂರ' ಆಗಿರುತ್ತದೆ. ಈ ಗ್ರಾಮದಲ್ಲಿ ದುರ್ಗಾದೇವಿಯನ್ನು ಆರಾಧನೆ ಮಾಡುವುದರಿಂದ 'ದುರ್ಗಾದೇವಿ ಕೆರೆ' ಎಂತಲೂ ಕರೆಯಲಾಗುತ್ತದೆ.

ಕೆರೆಯು ಒಟ್ಟು ೩–೪ ತೂಬುಗಳನ್ನು ಒಳಗೊಂಡಿದೆ. ತೂಬುಗಳು ಇತ್ತೀಚಿನ ರೂಪವನ್ನು ಪಡೆದುಕೊಂಡಿವೆ. ಸಿಮೆಂಟು ಮತ್ತು ಕಬ್ಬಿಣವನ್ನುಪಯೋಗಿಸಿ ತೂಬುಗಳನ್ನು ನಿರ್ಮಾಣ ಮಾಡಲಾಗಿದೆ. ಕೆರೆಯು ಹಾಗೆ ಮುಂದುವರೆದು ಚಿಕ್ಕೇರೂರಿಗೆ ಸೇರುತ್ತದೆ. ಸೇರುವ ಮಾರ್ಗಮಧ್ಯದಲ್ಲಿ ಕಾಲುವೆಗಳು ಕಂಡುಬರುತ್ತವೆ. ಈ ಕೆರೆಗಳಿಂದ ಕೃಷಿಕರು ನೀರಾವರಿ ಚಟುವಟಿಕೆಗಳನ್ನು ಕೈಗೊಳ್ಳಲು ತುಂಬ ಅನುಕೂಲವಾಗಿವೆ. ಅಲ್ಲದೇ ಪಟ್ಟಣಕ್ಕೆ ಹೊಂದಿಕೊಂಡಿರುವ

ಗ್ರಾಮಗಳಿಗೂ ಈ ಕೆರೆಯಿಂದ ನೀರಾವರಿ ಉಪಯೋಗವಿದೆ. ಕಾಲುವೆ, ಕೊಳವೆ ಪೈಪುಗಳು, ಮೋಟಾರುಗಳ ಮೂಲಕ ನೀರು ಹಾಯಿಸಿಕೊಂಡು ನೀರಾವರಿ ಚಟುವಟಿಕೆಗಳನ್ನು ಕೈಗೊಳ್ಳುತ್ತಲಿದ್ದಾರೆ. ಹೂಳಿನ ಪ್ರಮಾಣ ಹೆಚ್ಚಿನ ಪ್ರಮಾಣದಲ್ಲಿದ್ದು, ಇತ್ತೀಚೆಗೆ ಕೆರೆಯ ಹೂಳನ್ನು ತೆಗೆಸುವ ಕಾರ್ಯಕ್ರಮವನ್ನು ಪಟ್ಟಣ ಪಂಚಾಯತಿ ವತಿಯಿಂದ ಹಮ್ಮಿಕೊಂಡಿದ್ದಾರೆ. ಇದು ಕೆರೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅವುಗಳಲ್ಲಿ

೧. ಕೆರೆಯ ಮಧ್ಯದಲ್ಲಿ ಸರ್ವಜ್ಞನ ಮೂರ್ತಿಯನ್ನು ಪ್ರತಿಷ್ಠಾಪಿಸುವುದು

೨. ಕೆರೆಯ ಸುತ್ತ ಉದ್ಯಾನ ನಿರ್ಮಾಣ ಕಾರ್ಯ ಕೈಗೊಂಡಿರುವುದು ಆಶಾದಾಯಕವೆನಿಸಿವೆ.

ಈ ರೀತಿಯ ಯೋಜನೆಗಳು ಕೇವಲ ಒಂದೇ ಒಂದು ಕೆರೆಗೆ ಸೀಮಿತಗೊಳಿಸದೇ ತಾಲೂಕಿನಡಿಯಲ್ಲಿ ಬರುವ ಪ್ರತಿಯೊಂದು ಕೆರೆಗಳನ್ನು ಈ ರೀತಿಯ ಅಭಿವೃದ್ಧಿಪಡಿಸಲು ಮುಂದಾದರೆ ಕೆರೆಗಳು ತನ್ನ ಮಹತ್ವವನ್ನು ಪಡೆದುಕೊಳ್ಳುತ್ತವೆ ಎಂದು ಹೇಳಬಹುದು.

೨. ಅಣಜಿ

ಹಿರೇಕೆರೂರು ತಾಲೂಕು ರಟ್ಟೀಹಳ್ಳಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಅಣಜಿ. ಮದಗದ ಸಾಲುಗುಡ್ಡಗಳ ಪಾದದಲ್ಲಿದೆ. ದೋಣಿಸಾಲಿನ ಪ್ರಮುಖ ಗ್ರಾಮಗಳಲ್ಲಿ ಒಂದು. ತಾಲೂಕು ಕೇಂದ್ರದಿಂದ ಆಗ್ನೇಯಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿರುವ ಶಾಸನದಲ್ಲಿ ಈ ಊರನ್ನು 'ಅಂದ್ದಿ' ಎಂದು ಉಲ್ಲೇಖಿಸಲಾಗಿದೆ. ಇದು 'ಅಣಜಿ'ಯ ಪ್ರಾಚೀನ ರೂಪ. 'ಅಂದಿ' ಶಬ್ಧದಿಂದ ಅಣದಿ>ಅಣದಿಗೆ ಎಂಬುವ ರೂಪಗಳು ಹೊರಡುತ್ತವೆ. 'ಅಣವಿ'ಗೆ ಎಂದರೆ 'ನೀರಿನ ಹರಾಜೆ' ಅಂದರೆ ಈ ಊರಿನ ಭೂಗರ್ಭದಲ್ಲಿ ನೀರಿನ ಹರಾಜೆ ನಿಂತಿದೆ ಎಂದು ಅರ್ಥ. ಊರಿನ ಭೂಗರ್ಭದಲ್ಲಿ ಮೇಲ್ಮಟ್ಟದವರೆಗೂ ನೀರು ತುಂಬಿಕೊಂಡಿದೆ. ಗ್ರಾಮದ ಭೌಗೋಳಿಕ ವಿಸ್ತೀರ್ಣ ೮೭೩.೨೯ ಹೆಕ್ಟೇರ್. ಸ್ಪಟಿಕಾತ್ಮಕ ಪದರು ಶಿಲೆಯಿಂದ ಕೂಡಿದ್ದು, ಮಸಾರಿ, ಎರೆ ಮಣ್ಣಿನ ಲಕ್ಷಣ ಹೊಂದಿದೆ. ದೊಡ್ಡಮಟ್ಟಿ, ಮೂತಿಮಟ್ಟಿ, ಗೌರಿ ಕೆರೆ, ಊರಮುಂದಿನ ಕೆರೆ, ಇಸ್ಲಾಮಪುರ ಹಳ್ಳ, ಕೆಂಚಸಿದ್ಧೇಶ್ವರ ಹಳ್ಳಗಳು ಇವೆ. ರಕ್ಷಿತ ಅರಣ್ಯ ಪ್ರದೇಶವಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೭೧೧.೨ ಹೆಕ್ಟೇರ್. ಜೋಳ, ಮೆಕ್ಕೆಜೋಳ ಪ್ರಮುಖ ಬೆಳೆಗಳು. ಹುರಳಿ, ಸಾವಿ ಉಪಬೆಳೆಗಳು. ಎಲಿಬಳ್ಳಿ, ಅಡಕೆ, ತೆಂಗು ತೋಟಗಾರಿಕೆ ಬೆಳೆಗಳು. ಕೊಳವೆ ಬಾವಿಗಳ

ಮೂಲಕ ನೀರು ಹಾಯಿಸಿ ಮೆಣಸಿನಕಾಯಿ, ಕೋಸು ಮತ್ತು ಇತರೆ ಬೀಜೋತ್ಪಾದನೆಯ ಅಂತರರಾಷ್ಟ್ರೀಯ ಕಂಪನಿಗಳಿಂದ ಬೀಜವನ್ನು ಕ್ರಾಸಿಂಗ್ ಮಾಡಿ ಉತ್ಪಾದನೆ ಮಾಡುತ್ತಾರೆ.

ಅಣಜಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಹಿರೇಕೆರೂರ ತಹಶೀಲ್ದಾರ್ ಕಚೇರಿ, ರಟ್ಟಿಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕೊಳವೆ ಬಾವಿಗಳ ಮೂಲಕ ಮೇಲ್ಮಟ್ಟ ಹಾಗೂ ಕಿರುನೀರು ಜಲಸಂಗ್ರಾಹಗಾರಗಳಿಗೆ ನೀರು ಪೂರೈಸಿ, ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೫೪೩. ಇದರಲ್ಲಿ ಪುರುಷರು, ೧೩೦೮, ಮಹಿಳೆಯರು ೧೨೩೫ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೧೨೮ ಪುರುಷರು, ೧೩೨ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೫೯ ಪುರುಷರು, ೧೫೦ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೧೦೨೧ ಪುರುಷರು, ೯೫೩ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೮೦೬. ಇದರಲ್ಲಿ ಪುರುಷರು ೧೦೧೦, ಮಹಿಳೆಯರು ೭೯೬ ರಷ್ಟು ಇದ್ದಾರೆ.

ಈ ಊರಿನಲ್ಲಿ ೬ ಶಾಸನಗಳು ಕಂಡುಬಂದಿವೆ. ಈ ಊರಿನ ದೇವಾಲಯಗಳಲ್ಲಿ ಆಂಜನೇಯಸ್ವಾಮಿ ದೇವಾಲಯವು ಭಕ್ತರನ್ನು ವಿಶೇಷವಾಗಿ ಆಕರ್ಷಿಸಿದೆ. ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸೇರಿದ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದ ಆವರಣದಲ್ಲಿ ನಂದಿ, ಭೈರವಿ, ನಾಗ, ವೀರಭದ್ರ ಮುಂತಾದ ಬಿಡಿ ಸ್ಮಾರಕಗಳು ಕಂಡುಬಂದಿವೆ.[೧೮]

ಊರಮುಂದಿನ ಕೆರೆ/ಬಸವನ ಹೊಂಡ

ಗ್ರಾಮ : ಅಣಜಿ	ತೂಬುಗಳ ಸಂಖ್ಯೆ : ೦
ಸರ್ವೆ ನಂ : ೦೧	ಕೆರೆಯ ಸಾಮರ್ಥ್ಯ : ೬ಎಕರೆ
ಜಲಾವೃತ ಪ್ರದೇಶ : ೧೫.೨೫ (mcft)	ಏರಿಯ ಎತ್ತರ : ೩.೫ ಅಡಿ
ಏರಿಯ ಉದ್ದ : ೨೦ ಅಡಿ	ಅಚ್ಚುಕಟ್ಟು ಪ್ರದೇಶ : ೩೫.೪ ಹೆಕ್ಟೇರ್

ಈ ಕೆರೆಯ ಹೆಸರೇ ಸೂಚಿಸುವಂತೆ ಅಣಜಿ ಊರಿನ ಮುಂದುಗಡೆ ಕೆರೆ ಇರುವುದರಿಂದ ಊರಮುಂದಿನ ಕೆರೆ ಎಂದು ಕರೆಯಲಾಗುತ್ತದೆ. ನಾಗವಂದ ಗ್ರಾಮದಿಂದ ಅಣಜಿಗೆ ಬರುವಾಗ ಎಡಗಡೆ ಭಾಗದಲ್ಲಿರುವ ಕೆರೆಯೇ ಊರಮುಂದಿನ ಕೆರೆ. ಈ ಕೆರೆಯನ್ನು ಪ್ರಮುಖವಾಗಿ ದನಕರುಗಳ ದಾಹ ನೀಗಿಸಲು ಮತ್ತು ಅವುಗಳ ಮೈ ಸ್ವಚ್ಛಗೊಳಿಸಲು ಬಳಸುವರು. ಕೆರೆಯ ಏರಿಯ ಮೇಲೆ ಓಡಾಡಲು ಯಾವುದೇ ಸ್ಥಳಾವಕಾಶವಿರುವುದಿಲ್ಲ. ಕೆರೆಯ ಮುಂದೆ ಮಾತ್ರ

ಸ್ವಲ್ಪ ಪ್ರಮಾಣದ ಸ್ಥಳಾವಕಾಶವಿದೆ. ಪಕ್ಕದಲ್ಲಿ ಬಸವೇಶ್ವರ ದೇವಸ್ಥಾನ ಕಂಡುಬರುವುದರಿಂದ ಈ ಕೆರೆಗೆ ಬಸವನ ಹೊಂಡವೆಂತಲೂ ಕರೆಯುವುದು ರೂಢಿಯಲ್ಲಿದೆ. ಪ್ರಮಾಣದಲ್ಲಿ ಸಣ್ಣದಿರುವುದರಿಂದ ಯಾವುದೇ ಪ್ರಕಾರದ ನೀರಾವರಿ ಉದ್ದೇಶಕ್ಕೆ ಈ ಕೆರೆ ಬಳಕೆಯಾಗುವುದಿಲ್ಲ.

೩. ಅಬಲೂರು

ಹಿರೇಕೆರೂರ ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದು. ತಾಲೂಕು ಕೇಂದ್ರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿದೆ. ೧೨ ನೇ ಶತಮಾನದಲ್ಲಿ ಆಗಿಹೋದ ದಿಟ್ಟ ಶರಣ ಏಕಾಂತ ರಾಮಯ್ಯನ ಕರ್ಮಭೂಮಿ ಹಾಗೂ ೧೬ ನೇ ಶತಮಾನದಲ್ಲಿ ಆಗಿಹೋದ ತ್ರಿಪದಿ ಬ್ರಹ್ಮ, ಮಹಾಕವಿ ಸರ್ವಜ್ಞನ ಜನ್ಮಭೂಮಿ ಇದಾಗಿದೆ. ಶಾಸನದಲ್ಲಿ 'ಅಬ್ಬಲೂರು' ಎಂದು ಹೆಸರಿಸಲಾಗಿದೆ. ಅಂಬಲದೇವಿ ಎಂಬ ರಾಣಿ ಓರ್ವಳು ಈ ಪ್ರದೇಶ ಆಳುತ್ತಿದ್ದರಿಂದ ಅವಳ ಹೆಸರಿನಲ್ಲಿ ಅಂಬಲೂರು ಎಂದಾಯಿತೆಂದು ಈ ಊರಲ್ಲಿ ಪ್ರತೀತಿ ಇದೆ. ಆದರೆ 'ಅಬ್ಬಲ' ಎಂಬ ಮಹಿಳೆಯ ಹೆಸರಿನಲ್ಲಿ ಈ ಊರು ಕರೆಯಲ್ಪಟ್ಟಿರುವುದೇ ಅಬಲೂರು ಎಂದಾಗಲು ಕಾರಣ. ಗ್ರಾಮದ ಭೌಗೋಳಿಕ ವಿಸ್ತೀರ್ಣ ೭೭೬.೧೬ ಹೆಕ್ಟೇರ್. ಕರಿಕಲ್ಲು, ಕೆಂಪು ಮತ್ತು ಕಪ್ಪು ಮಣ್ಣುಗಳಿಂದ ಕೂಡಿದೆ. ೧೪ ಕೆರೆಗಳಿವೆ. ಅವುಗಳಲ್ಲಿ ದೊಡ್ಡಕೆರೆ, ಕಳ್ಳಿಕಟ್ಟೆ, ತಾರೇಕಟ್ಟೆ, ಗೇರಕಟ್ಟೆ ದೊಡ್ಡ ಕೆರೆಗಳಾಗಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೭೦೬.೨೯ ಹೆಕ್ಟೇರ್. ಮೆಕ್ಕೆಜೋಳ, ಹತ್ತಿ ಪ್ರಮುಖ ಬೆಳೆಗಳು. ಭತ್ತ, ತರಕಾರಿ, ಬೀಜ ಉತ್ಪಾದನೆ ಉಪಬೆಳೆಗಳು. ಬಾಳೆ, ಮಾವು, ಅಡಕೆ, ತೆಂಗು ತೋಟಗಾರಿಕೆ ಬೆಳೆಗಳು. ಹಿಂದೆ ಬ್ಯಾಡಗಿ ಮೆಣಸಿನಕಾಯಿ ಪ್ರಸಿದ್ಧವಾಗಿತ್ತು. ಈಗ ರೋಗ ಹೆಚ್ಚು ಬರುತ್ತಿರುವುದರಿಂದ ರೈತರು ಅದನ್ನು ಬೆಳೆಯುತ್ತಿಲ್ಲ. ಬೇಸಿಗೆಯಲ್ಲಿ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ.

ಅಬಲೂರು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಬಲೂರು ಗ್ರಾಮ ಪಂಚಾಯತಿ ಹೊಂದಿದ್ದು, ಹಿರೇಕೆರೂರ ತಹಶೀಲ್ದಾರ್ ಕಚೇರಿ, ಕೋಡ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಈ ಗ್ರಾಮ ಪಂಚಾಯತಿಗೆ ಜಿಲ್ಲಾ ಮಟ್ಟದ ೨೦೧೦-೧೧ ನೇ ಸಾಲಿನ ಪ್ರಶಸ್ತಿ ಲಭಿಸಿದೆ. ಕಿರುನೀರು ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೫೮೭. ಇದರಲ್ಲಿ ಪುರುಷರು ೮೨೩, ಮಹಿಳೆಯರು ೭೬೪ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೩೪ ಪುರುಷರು, ೩೦ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೫೯ ಪುರುಷರು, ೧೫೦ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ಒಬ್ಬ ಪುರುಷ, ಒಬ್ಬ ಮಹಿಳೆ ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೦೭೩. ಇದರಲ್ಲಿ ಪುರುಷರು ೬೨೦, ಮಹಿಳೆಯರು ೪೫೩ ರಷ್ಟು ಇದ್ದಾರೆ. ಗ್ರಾಮದಲ್ಲಿ ಸುಮಾರು ೧೮ ಶಾಸನಗಳು ಕಂಡುಬಂದಿವೆ. ಇವುಗಳಲ್ಲಿ ಸುಮಾರು ಹತ್ತು ಶಾಸನಗಳ ಪಾಠಗಳು ಪ್ರಕಟವಾಗಿವೆ.[೧೯]

ದೊಡ್ಡ ಕೆರೆ

ಗ್ರಾಮ : ಅಬಲೂರು	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೨೦೫	ಕೆರೆಯ ವಿಸ್ತೀರ್ಣ : ೯೭.೨೦ ಗುಂಟೆ
ಜಲಾವೃತ ಪ್ರದೇಶ : ೩೭.೯೬ (mcft)	ಏರಿಯ ಎತ್ತರ : ೬.೫ಅಡಿ
ಏರಿಯ ಉದ್ದ : ೬೫.೩೫ ಅಡಿ	ಅಚ್ಚುಕಟ್ಟು ಪ್ರದೇಶ : ೧೨೮.೧೪ ಹೆಕ್ಟೇರ್

ಅಬಲೂರಿನಲ್ಲಿ ದೊಡ್ಡ ಪ್ರಮಾಣದ ಒಂದು ಕೆರೆ ಇದ್ದು, ಗ್ರಾಮಸ್ಥರ ಪಾಲಿಗೆ ಎಲ್ಲ ರೀತಿಯಲ್ಲಿಯೂ ದೈವರೂಪವಾಗಿ ಮಾರ್ಪಾಡು ಹೊಂದಿದೆ. ಅಂದರೆ ಗ್ರಾಮಸ್ಥರ ಎಲ್ಲ ಕೆಲಸ ಕಾರ್ಯಗಳಿಗೆ ಇಲ್ಲಿನ ನೀರು ಉಪಯೋಗವಾಗುತ್ತಿದೆ. ಆದರೆ ಪ್ರಸ್ತುತದಲ್ಲಿ ಸುಮಾರು ೪ ವರ್ಷಗಳಿಂದ ಮಳೆಯು ಸಕಾಲಕ್ಕೆ ಬಾರದೇ ಹೋಗಿದ್ದರಿಂದ ಕೆರೆಯು ಬರಿದಾಗಿ ಗ್ರಾಮಸ್ಥರು ಪರ್ಯಾಯ ಮಾರ್ಗ ಕಂಡುಕೊಳ್ಳುವಂತಾಗಿದೆ. ಪ್ರಮಾಣದಲ್ಲಿ ದೊಡ್ಡದಿದ್ದುದರಿಂದ ಇಡೀ ಗ್ರಾಮಕ್ಕೆ ನೀರು ಸಾಲದಾಗದೇ ಸರಬರಾಜಾಗುತ್ತಿತ್ತು. ಕೆರೆಯ ಪಕ್ಕದಲ್ಲಿ ಹೊಲ, ಗದ್ದೆಗಳು ಕಂಡುಬಂದಿದ್ದು, ಕೆರೆಯು ತುಂಬಿದಾಗ ಇದರಿಂದ ರೈತರು ತಮ್ಮ ಹೊಲಗಳಿಗೆ ನೀರು ಹಾಯಿಸಿಕೊಂಡು ಉತ್ತಿ ಬೆಳೆಯಬೇಕಾದ ಬೆಳೆಗಳಿಗೆ ಕಾಲುವೆಗಳ ಮೂಲಕ ಇಲ್ಲವೇ ಮೋಟಾರು ಕೊಳವೆಗಳಿಂದ ನೀರನ್ನು ಸರಬರಾಜು ಮಾಡುವುದರ ಮೂಲಕ ನೀರಾವರಿ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಈಗಲೂ ಒಂದು ವೇಳೆ ಮಳೆಯು ಬಂದು ಕೆರೆ ಎಲ್ಲ ಭರ್ತಿಯಾದರೆ ಮತ್ತೆ ಎಂದಿನಂತೆ ಕೆರೆಗೆ ಬೇಡಿಕೆ ಬಂದು ಗ್ರಾಮಸ್ಥರು ಸುಖ, ಸಂತೋಷ, ನೆಮ್ಮದಿಯಿಂದ ಜೀವನ ಸಾಗಿಸಲು ಸಹಾಯವಾಗುತ್ತದೆ.

ಕೆರೆಯು ಅಷ್ಟೇನೂ ಹೇಳಿಕೊಳ್ಳುವಷ್ಟು ಆಳವಾಗಿಲ್ಲ. ಇದ್ದರೂ ಕೆರೆಯ ತುಂಬೆಲ್ಲ ಇತ್ತೀಚೆಗೆ ಹೂಳು ತುಂಬಿ ನೀರಿನ ಸಾಮರ್ಥ್ಯ ಕಡಿಮೆಯಾಗಿದೆ. ಆಗಾಗ ಹೂಳು ತೆಗೆಯುವ ಕಾರ್ಯಕ್ರಮವನ್ನು ಹಾಕಿಕೊಂಡರೂ ಪಕ್ಕದ ಹೊಲದ ಮಾಲಿಕರು, ರೈತರು ತಮ್ಮ ತಮ್ಮ ಹೊಲಗಳಿಗೆ ಕೆರೆಯ ಒಳಭಾಗದಲ್ಲಿ ಕ್ರಮಾನುಸಾರವಾಗಿಯಲ್ಲದೇ ಅಲ್ಲಲ್ಲೇ ಅಗೆದು ಮಣ್ಣನ್ನು

ತಮ್ಮ ಹೊಲದ ಒಡ್ಡಿಗೋ, ಇಲ್ಲ ಮತ್ತೊಂದಕ್ಕೋ ಟ್ರ್ಯಾಕ್ಟರಿಗಳ ಮೂಲಕ ಲೋಡಿಗೆ ಇಂತಿಷ್ಟು ಎಂದು ಹಣ ಮಾತಾಡಿಕೊಂಡು ಸಂದಾಯ ಮಾಡಿ ಏರಿಸಿಕೊಳ್ಳುತ್ತಾರೆ. ಹಾಗಾಗಿ ಕೆರೆಯು ಏಕರೀತಿಯಲ್ಲಿ ಕಾಣದೇ ಅಲ್ಲಲ್ಲೇ ಉಬ್ಬು-ತಗ್ಗುಗಳ ರೀತಿಯಲ್ಲಿ ಕಾಣುತ್ತದೆ. ಇದು ಹೀಗೆ ಮುಂದುವರಿದರೆ ಕೊನೆಗೆ ಕೆರೆಯು ಸಂಪೂರ್ಣ ನೆಲಕಚ್ಚಿ ಹೋಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಏಕೆಂದರೆ ಹೂಳಿನ ಪ್ರಮಾಣ ಕ್ರಮೇಣ ಹೆಚ್ಚಾಗಿ ಕೆರೆಯು ಪೂರ್ಣವಾಗಿ ಮುಚ್ಚಿಕೊಂಡು ಹೋಗಿಬಿಡುತ್ತದೆ. ಹಾಗಾಗಿ ಆದಷ್ಟು ತುರ್ತಾಗಿ ಆಯಾ ಗ್ರಾಮದ ಪಂಚಾಯತಿಯ ಅಧಿಕಾರಿಗಳು ಅಥವಾ ತಾಲೂಕು ಪಂಚಾಯತಿಯ ವ್ಯಾಪ್ತಿಯಲ್ಲಿ ಅದರ ಗಮನಕ್ಕೆ ತಂದು ಈ ಕೆರೆಯ ಹೂಳು ಎತ್ತುವ ಕಾರ್ಯವನ್ನು ಕಾರ್ಯರೂಪಕ್ಕಿಳಿಸಬೇಕಾಗಿದೆ. ಸರ್ಕಾರದ ಅಧಿಕಾರಿಗಳೂ ಕೂಡ ನಿರ್ಲಕ್ಷ್ಯ ಮಾಡದೇ ಗ್ರಾಮೀಣ ಪ್ರದೇಶಗಳ ಜೀವನಾಡಿಗಳಾದ ಈ ಕೆರೆ-ಬಾವಿಗಳ ಪುನರ್‌ನವೀಕರಣ ಕಾರ್ಯಕ್ಕೆ ಸ್ವಇಚ್ಛೆಯಿಂದ ಸನ್ನದ್ಧರಾಗುವ ಅಗತ್ಯತೆ, ಅನಿವಾರ್ಯತೆ ತುಂಬಾ ಇದೆ.

೪. ಆರಿಕಟ್ಟಿ :

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ತಾಲೂಕು ಕೇಂದ್ರದಿಂದ ವಾಯವ್ಯಕ್ಕೆ ೮ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೧೨೨೯.೨೯ ಹೆಕ್ಟೇರ್. ಇದು ಸ್ಪಟಿಕಾತ್ಮಕ ಪದರುಶಿಲೆಯನ್ನು ಹೊಂದಿದೆ. ಎರೆ ಮತ್ತು ಮಸಾರಿ ಮಣ್ಣುಗಳಿಂದ ಕೂಡಿರುವ ಇಲ್ಲಿ ಚಿಕ್ಕಗುಡ್ಡ ಮತ್ತು ತಿಮ್ಮಪ್ಪನ ಗುಡ್ಡ ಎಂಬ ಎರಡು ಗುಡ್ಡಗಳಿವೆ. ಚೌಡಿಕಟ್ಟಿ, ಹೊಸಕೆರೆ, ದೊಡ್ಡಹೊಂಡ, ಸರಕಾರಿ ಕೆರೆ ಹೀಗೆ ೨೧ ಕೆರೆಗಳಿವೆ. ಆರಿಕಟ್ಟಿ ಎಂದರೆ ಅಂತರ್ಜಲ ಹಾಗೂ ಭೂಭಾಗದ ಜಲಗಳೆರಡೂ ಸಮೃದ್ಧವಾಗಿರುವ ಊರು ಎಂದು ಹೇಳಬಹುದು. ೬೭ ಎಕರೆ ಸಂರಕ್ಷಿತ ಅರಣ್ಯಪ್ರದೇಶ ಇದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೮೭೧.೩೦ ಎಕರೆ ಗುಂಟೆ ಇದೆ. ಮೆಕ್ಕೆಜೋಳ, ಹತ್ತಿ ಪ್ರಮುಖ ಬೆಳೆಗಳು. ಶೇಂಗಾ, ಅಲಸಂದಿ, ತೊಗರಿ, ಔಡಲ ಉಪಬೆಳೆಗಳು. ಹಿರೇಕೆರೂರ ತಾಲೂಕಿನಲ್ಲಿ ಬೀಜೋತ್ಪತ್ತಿಗೆ ಈ ಗ್ರಾಮ ಖ್ಯಾತವಾಗಿದೆ. ಕೊಳವೆಬಾವಿಗಳನ್ನು ಕೊರೆಯಿಸಿ ಪಂಪ್‌ಸೆಟ್‌ಗಳನ್ನು ಅಳವಡಿಸಿಕೊಂಡು ಹನಿ ನೀರಾವರಿ ಮಾಡಿಕೊಂಡಿದ್ದಾರೆ.

ಆರಿಕಟ್ಟಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕ ಪಂಚಾಯತಿಯನ್ನು ಹೊಂದಿದ್ದು, ಬೆಟಕೇರೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಹಿರೇಕೆರೂರ ತಹಶೀಲ್ದಾರ್ ಕಚೇರಿ, ಹಂಸಬಾವಿ

ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೨೭೪. ಇದರಲ್ಲಿ ಪುರುಷರು ೬೬೦, ಮಹಿಳೆಯರು ೬೧೪ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೬೧ ಪುರುಷರು, ೬೮ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೦೮ ಪುರುಷರು, ೮೭ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೪೯೧ ಪುರುಷರು, ೪೫೯ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೯೦೮೬. ಇದರಲ್ಲಿ ಪುರುಷರು ೫೪೯, ಮಹಿಳೆಯರು ೪೩೭ ರಷ್ಟು ಇದ್ದಾರೆ.

ಗ್ರಾಮದಲ್ಲಿ ೫ ಶಾಸನಗಳು ಕಂಡುಬಂದಿದ್ದು, ಅವುಗಳಲ್ಲಿ ೩ ಶಾಸನಗಳು ರಾಷ್ಟ್ರಕೂಟರ ಕಾಲದವು. ಇವುಗಳಲ್ಲಿ ಮೂರು ವೀರಮರಣದ ಬಗ್ಗೆ ಉಲ್ಲೇಖಿಸಿದರೆ ಇನ್ನೆರಡು ಶಾಸನಗಳು ಕರ್ನಾಟಕದ ಅತ್ಯಂತ ಪ್ರಾಚೀನ ಮಾಂಡಲಿಕ ರಾಜವಂಶ (ಮಟೂರು ವಂಶ)ವನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೧–೧೨ ನೇ ಶತಮಾನಕ್ಕೆ ಸೇರಿದ ಪ್ರಾಚೀನ ಕಲ್ಲಪ್ಪ ದೇವಾಲಯವಿದೆ. ಇದರ ಗರ್ಭಗೃಹದ ಬಾಗಿಲುವಾಡದ ಲಲಾಟಬಿಂಬದಲ್ಲಿರುವ ಎರಡು ಸಾಲಿನ ಒಂದು ಶಾಸನವು ಪ್ರಕಟವಾಗಿರುವುದಿಲ್ಲ. ದೇವಾಲಯದ ಎದುರಿಗೆ ಐತಿಹಾಸಿಕ ಸ್ಮಾರಕಗಳನ್ನು ಕಾಣಬಹುದು.[೨೦]

ಪ್ರಮುಖ ಕೆರೆಗಳು

ದೊಡ್ಡ ಹೊಂಡ

ಗ್ರಾಮ : ಆರಿಕಟ್ಟಿ	ತೂಬುಗಳ ಸಂಖ್ಯೆ : ೦೨
ಸರ್ವೆ ನಂ : ೫೪	ಕೆರೆಯ ವಿಸ್ತೀರ್ಣ : ೧೧೦ ಎಕರೆ
ಜಲಾವೃತ ಪ್ರದೇಶ : ೫೦.೨೫ (mcft)	ಏರಿಯ ಎತ್ತರ : ೮ ಅಡಿ
ಏರಿಯ ಉದ್ದ : ೬ ಅಡಿ	ಅಚ್ಚುಕಟ್ಟು ಪ್ರದೇಶ : ೧೫೦.೩೫ ಹೆ.

ದೊಡ್ಡ ಹೊಂಡವು ಗ್ರಾಮದ ಆರಂಭದಲ್ಲಿದ್ದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹತ್ತಿರ ಇದೆ. ಗ್ರಾಮಸ್ಥರು ಮೊದಲಿನಿಂದಲೂ ಈ ಕೆರೆಯನ್ನು ಬಹುವಾಗಿ ಅವಲಂಬಿಸಿದ್ದಾರೆ. ಕೆರೆಯ ಹೆಸರು ಸೂಚಿಸುವ ಹಾಗೆ ದೊಡ್ಡಕೆರೆಯಾದರೂ ನೀರು ಪೂರ್ಣ ಪ್ರಮಾಣದಲ್ಲಿ ಶೇಖರಣೆಯಾಗುವುದಿಲ್ಲ. ಕೆರೆಯ ತುಂಬೆಲ್ಲ ಹೂಳು ಹೆಚ್ಚಾಗಿ ತುಂಬಿಕೊಂಡಿರುವುದರಿಂದ ನೀರಿನ ಶೇಖರಣಾ ಸಾಮರ್ಥ್ಯ ಕ್ರಮೇಣವಾಗಿ ಕಡಿಮೆಯಾಗುತ್ತಾ ಬಂದಿದೆ. ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಮಳೆಯೂ ಕೂಡ ಸಕಾಲಕ್ಕೆ ಬಾರದೇ ಹೋಗಿದ್ದರಿಂದ ಕೆರೆಯು ಪೂರ್ಣ

ಪ್ರಮಾಣದಲ್ಲಿ ಭರ್ತಿಯಾಗುವುದಿಲ್ಲ. ಈ ಕಾರಣಗಳಿಂದಾಗಿಯೇ ಕೆರೆಯ ಬಳಕೆ ಕಡಿಮೆಯಾಗಿದೆ. ಊರಿನ ಗ್ರಾಮ ಪಂಚಾಯತಿ ಅಧಿಕಾರಿಗಳು ಸಕಾರದ ಜೊತೆ ಕೈಜೋಡಿಸಿ ಕೆರೆಯ ಹೂಳೆತ್ತುವ ಕಾರ್ಯವನ್ನು ಕೈಗೊಂಡಿದ್ದೇ ಆದಲ್ಲಿ ನೀರಿನ ಶೇಖರಣಾ ಸಾಮರ್ಥ್ಯವೂ ಹೆಚ್ಚಿ ಜನರ ಬಳಕೆಯೂ ಹೆಚ್ಚಾಗುತ್ತದೆ. ಇಂಥ ಕಾರ್ಯಗಳಲ್ಲಿ ಮಾತ್ರ ಸರ್ಕಾರದ ಯಾವುದೇ ಅಧಿಕಾರಿಗಳು ಅಸಡ್ಡೆ ತೋರಬಾರದು.

ಈ ಕೆರೆಯು ಒಟ್ಟು ಎರಡು ತೂಬುಗಳನ್ನು ಹೊಂದಿದ್ದು, ಎರಡೂ ತೂಬುಗಳು ಅವನತಿಯ ಅವಸ್ಥೆಯನ್ನು ತಲುಪಿವೆ. ಮೊದಲು ಈ ಎರಡೂ ತೂಬುಗಳಿಂದ ಪಕ್ಕದ ಹೊಲ, ಗದ್ದೆಗಳಿಗೆ ತೂಬುಗಳಿಗೆ ಕಾಲುವೆ ವ್ಯವಸ್ಥೆ ಮಾಡಿಕೊಂಡು ನೀರು ಹಾಯಿಸಿಕೊಳ್ಳುತ್ತಿದ್ದರು. ಪ್ರಸ್ತುತ ಇದರ ಬಳಕೆ ಕೇವಲ ದನಕರುಗಳಿಗೆ ನೀರು ಕುಡಿಸಲು, ಮೈ ಸ್ವಚ್ಛಗೊಳಿಸಲು ಮಾತ್ರ ಉಪಯೋಗವಾಗುತ್ತಿದೆ.

ಹೊಸಕೆರೆ

ಗ್ರಾಮ : ಆರಿಕಟ್ಟಿ ತೂಬುಗಳ ಸಂಖ್ಯೆ : ೦೨

ಸರ್ವೆ ನಂ : ೫೩ ಕೆರೆಯ ವಿಸ್ತೀರ್ಣ : ೫೫ ಎಕರೆ

ಜಲಾವೃತ ಪ್ರದೇಶ : ೩೫.೨೦ (mcft) ಏರಿಯ ಎತ್ತರ : ೨.೫ ಅಡಿ

ಏರಿಯ ಉದ್ದ : ೫ ಅಡಿ ಅಚ್ಚುಕಟ್ಟು ಪ್ರದೇಶ : ೮೫.೩೨ ಹೆಕ್ಟೇರ್

ಹೊಸಕೆರೆಯು ಊರಿನ ಆಚೆ ಇದೆ. ವಿಸ್ತೀರ್ಣದಲ್ಲಿ ೫೫ ಎಕರೆ ಇದ್ದು, ೦೨ ತೂಬುಗಳನ್ನೊಳಗೊಂಡಿದೆ. ಈ ಕೆರೆಯು ಇತ್ತೀಚೆಗೆ ನಿರ್ಮಾಣವಾದ ಕಾರಣ 'ಹೊಸಗೆರೆ' ಎಂದು ಹೆಸರು ಬರಲು ಕಾರಣವಿರಬಹುದು. ವಾಸ್ತವ ಸಂಗತಿ ಹೇಳುವುದಾದರೆ ಇದನ್ನು ನೋಡಿದರೆ ಕೆರೆಯ ಆಕಾರ ಕಾಣುವುದೇ ಇಲ್ಲ. ಮಳೆಯು ಬರದೇ ಇದ್ದುದರಿಂದ ಕೆರೆಯಲ್ಲಿ ಸಧ್ಯ ನೀರಿಲ್ಲದೇ ಭಣಗುಡುತ್ತಿದೆ. ಬೀಳು ಬಿದ್ದು ದನಕರುಗಳಿಗೆ ಮೇಯುವ ತಾಣವಾಗಿ ಮಾರ್ಪಟ್ಟಿದೆ. ಇದಕ್ಕೆ ಆ ಗ್ರಾಮದ ಪಂಚಾಯತಿ ಅಧಿಕಾರಿಗಳು ಮತ್ತು ಸರ್ಕಾರದ ನಿರ್ಲಕ್ಷ್ಯವೇ ಕಾರಣವಾಗಿದೆ. ಕೆರೆಯು ಹೂಳಿಲ್ಲದೆ ಕೆರೆಯು ಹೆಸರಿಗೆ ತಕ್ಕಂತೆ ಆಳವಾಗಿರುವುದರ ಬದಲಾಗಿ ಎಲ್ಲ ಕಡೆಯೂ ಹೂಳಿನ ಹಾವಳಿಯೇ ಆಗಿದೆ. ಇದರಿಂದ ಕೆರೆಯು ಸಾದಾ ಭೂಮಿಯ ಹಾಗೆ ನೋಡಲು ಕಾಣುತ್ತದೆ.

ಪಂಚಾಯತಿ ಅಧಿಕಾರಿಗಳು ಮತ್ತು ಸರ್ಕಾರದವರು ಮೈಬಿಚ್ಚಿ ಕೆಲಸ ಮಾಡಿ ಕೆರೆಯ ಹೂಳು ತೆಗೆದು ಆಳ ತೋಡಿದರೆ ಮುಂದಿನ ದಿನಗಳಲ್ಲಿ ಮಳೆ ಬಂದು ಕೆರೆಯು ಸಂಪೂರ್ಣವಾಗಿ ತುಂಬಿ ಗ್ರಾಮಸ್ಥರ ಮೊಗದಲ್ಲಿ ಸಂತಸ ತರುವುದಲ್ಲದೇ ಅವರ ನೆಮ್ಮದಿಯ ಜೀವನಕ್ಕೂ

ಕಾರಣೀಭೂತವಾಗುವುದರಲ್ಲಿ ಸಂಶಯವೇ ಇಲ್ಲ. ಈ ನಿಟ್ಟಿನಲ್ಲಿ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕಿರುವುದು ಅಗತ್ಯವಾಗಿದೆ.

ಚೌಡೀಕಟ್ಟಿ ಕೆರೆ

ಗ್ರಾಮ : ಆರಿಕಟ್ಟಿ	ತೂಬುಗಳ ಸಂಖ್ಯೆ : ೦೨
ಸರ್ವೆ ನಂ : ೫೭	ಕೆರೆಯ ವಿಸ್ತೀರ್ಣ : ೧೧೦ ಎಕರೆ
ಜಲಾವೃತ ಪ್ರದೇಶ : ೪೦.೨೫ (mcft)	ಏರಿಯ ಎತ್ತರ : ೩.೬ ಅಡಿ
ಏರಿಯ ಉದ್ದ : ೧೨ ಅಡಿ	ಅಚ್ಚುಕಟ್ಟು ಪ್ರದೇಶ : ೧೨೦.೨೬ ಹೆಕ್ಟೇರ್

ಚೌಡೀಕಟ್ಟಿ ಕೆರೆಯು ಹೊಸಗೆರೆಗೆ ೨೦೦ ಮೀ. ಅಂತರದಲ್ಲಿ ಹಿಂದೆ ಇದೆ. ಇದು ಹೊಸಗೆರೆಗೆ ಹೋಗುವ ದಾರಿಯಲ್ಲಿ ಎಡಕ್ಕೆ ಬರುತ್ತದೆ. ಈ ಕೆರೆಯ ಪಕ್ಕ ಅಥವಾ ಈ ಕೆರೆಯ ಒಡ್ಡಿನ ಮೇಲೆ ಚೌಡಮ್ಮನ ದೇವಸ್ಥಾನವಿರುವುದರಿಂದ ಇದಕ್ಕೆ ಚೌಡೀಕಟ್ಟಿ ಕೆರೆ ಎಂದು ಹೆಸರು ಬಂದಿದೆ. ಈ ಕೆರೆಯೂ ಕೂಡ ಪಕ್ಕದ ಹೊಲ, ಗದ್ದೆಗಳಿಗೆ ಆಗಾಗ ಹಾದು ಉತ್ತಿದ ಬೆಳೆಗಳಿಗೆ ನೀರುಣಿಸಿ ದಾಹ ತೀರಿಸುತ್ತಿತ್ತು. ಹಾಗೆಯೇ ಹೊಲದಲ್ಲಿ ದುಡಿದು ಬಸವಳಿದ ಎತ್ತು, ಎಮ್ಮೆ ಮತ್ತು ಇನ್ನಿತರ ದನಕರುಗಳು ಮೈ ಜಾಡಿಸಿಕೊಂಡು ನಿರಾಳ ಭಾವ ತೋರಲು ಆಶ್ರಯ ತಾಣವೂ ಆಗಿತ್ತು. ಆದರೆ ಈಗ ಅಂತಹ ಲಕ್ಷಣಗಳು ಕಂಡುಬರುವುದಿಲ್ಲ.

ಈ ಕೆರೆಯು ಒಟ್ಟು ಮೂರು ತೂಬುಗಳನ್ನು ಹೊಂದಿದೆ. ಈ ತೂಬುಗಳು ಮೊದಲು ಕಲ್ಲಿನಿಂದ ನಿರ್ಮಿತವಾಗಿದ್ದವು ಎಂಬುದಕ್ಕೆ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವು ಸಾಕ್ಷಿಗಳು ಸಿಕ್ಕಿವೆ. ಆದರೆ ಇತ್ತೀಚೆಗೆ ಅವುಗಳನ್ನು ಸಿಮೆಂಟ್, ಕಬ್ಬಿಣ ಬಳಸಿ ನವೀಕರಣ ಮಾಡಲಾಗಿದೆ. ಆದರೂ ಆ ತೂಬುಗಳು ಕಳೆಗುಂದಿದ ಸ್ಥಿತಿಯಲ್ಲಿವೆ ಎಂದು ಹೇಳಲು ವಿಷದವೆನಿಸುತ್ತದೆ. ಕೆರೆಯಲ್ಲಿ ಸಧ್ಯ ನೀರಿನ ಪ್ರಮಾಣ ಕಡಿಮೆ ಇರುವುದರಿಂದಲೋ ಏನೋ ತೂಬುಗಳಿಗೂ ಏನು ಕೆಲಸವಿಲ್ಲದಂತಾಗಿದೆ. ಒಂದು ವೇಳೆ ಭವಿಷ್ಯದಲ್ಲಿ ದೊಡ್ಡಮಳೆ ಏನಾದರೂ ಬಂದು ಕೆರೆಯೆಲ್ಲ ತುಂಬಿದರೆ ತೂಬುಗಳ ಕೈಗಳಿಗೆ ಕೆಲಸ ಕೊಟ್ಟಂತಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು, ಇಲಾಖೆಗಳು ಇದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ತೂಬುಗಳು ಮತ್ತು ಕೆರೆಯು ಹಾಳಾಗದಂತೆ ನೋಡಿಕೊಳ್ಳಬೇಕಾಗಿರುವುದು ಆದ್ಯ ಕರ್ತವ್ಯ.

೫. ಆಲದಕಟ್ಟಿ

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ. ಕ್ರಿ.ಶ. ಸುಮಾರು ೧೬೫೦ ರಲ್ಲಿ ಶಾಂತ ನಿರಂಜನ ಕವಿ ರಚಿಸಿದ 'ಅಬಲೂರು ಚರಿತೆ' ಕಾವ್ಯದಲ್ಲಿ ಈ ಊರು 'ಆಲದಕಟ್ಟಿ' ಎಂದೇ ಉಲ್ಲೇಖಗೊಂಡಿದೆ. ಅಲ್ಲದೆ ಗೊಡಚಿಕೊಂಡ ದಾರಿಯಲ್ಲಿರುವ

ಕಲಚೂರಿ ಸೋವಿದೇವನ ಸ್ಥಳೀಯ ಶಾಸನ ಆಲದಕಟ್ಟಿಯನ್ನು ಉಲ್ಲೇಖಿಸುತ್ತದೆ. ಇದರೊಂದಿಗೆ ಈ ಊರಿನ ಪ್ರಾಚೀನತೆ ತಿಳಿದು ಬರುತ್ತದೆ. ಆಲದಕಟ್ಟಿ ಹೆಸರು ಬರಲು ಆಲದ ಮರಗಳಿಂದ ಕೂಡಿದ ಕಟ್ಟೆಯನ್ನು ಹೊಂದಿರುವ ಪ್ರದೇಶ 'ಆಲದಕಟ್ಟೆ' ಎಂದು ಹೇಳಬಹುದು. ಭೌಗೋಳಿಕ ವಿಸ್ತೀರ್ಣ ೩೦೨.೬೪ ಹೆಕ್ಟೇರ್. ಕಪ್ಪುಶಿಲೆ, ಮಸಾರಿ ಮತ್ತು ಎರೆಮಣ್ಣಿನ ಲಕ್ಷಣ ಹೊಂದಿದೆ. ವಡ್ಡಿನಕೆರೆ , ಹೊಸಕಟ್ಟಿಕೆರೆ, ಅಂಕ್ಲಿಕಟ್ಟಿ ಕೆರೆ, ತುಂಬೋಹೊಂಡ, ಕಲ್ಲಕಟ್ಟಿ ಹಾಗೂ ಕರಿಯಪ್ಪನ ಹಳ್ಳಗಳಿವೆ. ಇಲ್ಲಿ ಕೃಷ್ಣಮೃಗ, ಚಿಗರಿ ಮತ್ತು ಕಾಡುಹಂದಿಗಳು ವನ್ಯಜೀವಿಗಳಾಗಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ೨೭೭.೧೫ ಹೆಕ್ಟೇರ್ ಕೃಷಿಭೂಮಿ ಇದೆ. ಮೆಕ್ಕೆಜೋಳ, ಹತ್ತಿ, ಬಿಳಿಜೋಳ, ಅಲಸಂದಿ, ತೊಗರಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

ಆಲದಕಟ್ಟಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕ ಪಂಚಾಯತಿಯನ್ನು ಹೊಂದಿದ್ದು, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಹಾಗೂ ಯತ್ತಿನಹಳ್ಳಿ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಿರೇಕೆರೂರು ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ಊರಿಗೆ ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೫೬೮. ಇದರಲ್ಲಿ ಪುರುಷರು ೨೯೬, ಮಹಿಳೆಯರು ೨೭೯ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೧೯ ಪುರುಷರು, ೧೭ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೪೫ ಪುರುಷರು, ೧೫೦ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೧೩೨ ಪುರುಷರು, ೧೨೨ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೪೭೪. ಇದರಲ್ಲಿ ಪುರುಷರು ೨೬೧, ಮಹಿಳೆಯರು ೨೧೩ ರಷ್ಟು ಇದ್ದಾರೆ.

ಗ್ರಾಮದಲ್ಲಿ ಒಟ್ಟು ೪ ಶಾಸನಗಳು ಕಂಡುಬಂದಿವೆ. ಆದರೆ ಒಂದು ಶಾಸನ ಪ್ರಕಟವಾಗಿಲ್ಲ. ೧೪ ನೇ ಶತಮಾನದ ಶಾಸನವೇ ಪ್ರಾಚೀನವಾದದ್ದು.

೧. ವೀರಪ್ಪ ಅಂಗಡಿಯವರ ಹೊಲದಲ್ಲಿರುವ ಈ ಶಾಸನ ಒಂದು ಮಾಸ್ತಿಗಲ್ಲು ಆಗಿದೆ.

ಮಾಸಮಲ್ಲಾಯಿಯ ಸಹಗಮನವನಗನು ಇದು ಹೇಳುತ್ತದೆ.

೨. ಬಸವಣ್ಣನ ಗುಡಿ ಹತ್ತಿರ ನಿಂತಿರುವ ಶಾಸನವು ಒಂದು ಮಾಸ್ತಿಗಲ್ಲಾಗಿದೆ. ಈ ಶಾಸನವು ಈಚಿನ ಅಕ್ಷರಗಳಲ್ಲಿದೆ. ಆಲದಕಟ್ಟೆಯ ಗೌಡ ಮರಬಸವನ ಮರಣವನ್ನು ಇದು ದಾಖಲಿಸಿದೆ. ಬಹುಶಃ ಇವನ ಪತ್ನಿಯೇ ಸತಿ ಹೋದಂತಿದೆ.

೩. ಹಾಲಪ್ಪ ಕಳ್ಳಿಮನಿಯವರ ಹೊಲದಲ್ಲಿರುವ ಶಾಸನವು ಈಚಿನ ಅಕ್ಷರಗಳಲ್ಲಿದ್ದು, ಆಲೂರಿನ ತಳವಾರ ಕನಕನ ಹೆಂಡತಿಯ ಮರಣದ ವಿಷಯವನ್ನು ಹೇಳುತ್ತದೆ. ಗೊಡಚಿಕೊಂಡದ ಹಾದಿಯಲ್ಲಿರುವ ಶಾಸನವು ಅತೀ ತ್ರುಟಿತವಾಗಿದ್ದ ಆಲದಕಟ್ಟೆಯ ಉಲ್ಲೇಖ ಮಾಡಿದೆ.

ಗ್ರಾಮದಲ್ಲಿ ಒಂದು ದೇವಾಲಯವಿದ್ದು, ಅದು ಊರ ಮಧ್ಯದಲ್ಲಿದ್ದು, ಬಸವಣ್ಣನ ದೇವಾಲಯವಾಗಿದೆ. ಇದು ಕ್ರಿ.ಶ. ಸುಮಾರು ೧೭-೧೮ ನೇ ಶತಮಾನದಲ್ಲಿ ರಚನೆಯಾಗಿರುವ ಇದು ವಿಜಯನಗರೋತ್ತರ ಶೈಲಿಯಲ್ಲಿದೆ. ಪೂರ್ವಕ್ಕೆ ಮುಖಮಾಡಿರುವ ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದೆ. ಹಿಂದೆ ಇದ್ದಿರಬಹುದಾದ ಅಂತರಾಳ ಹಾಗೂ ನವರಂಗಗಳು ಬಿದ್ದು ಹೋಗಿವೆ. ಬಾಗಿಲ ಲಲಾಟಬಿಂಬದಲ್ಲಿನ ನಂದಿಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ಶಾಖೆಗಳಲ್ಲಿ ಲತೆ ಮತ್ತು ಮಿಥುನ ಶಿಲ್ಪಗಳನ್ನು ಕಾಣಬಹುದು.[೨೧]

ಪ್ರಮುಖ ಕೆರೆಗಳು

ವಡ್ಡಿನ ಕೆರೆ

ಗ್ರಾಮ : ಆಲದಕಟ್ಟಿ	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೨೬	ಕೆರೆಯ ವಿಸ್ತೀರ್ಣ : ೮.೫ ಎಕರೆ
ಜಲಾವೃತ ಪ್ರದೇಶ : ೫.೯೧ (mcft)	ಏರಿಯ ಎತ್ತರ : ೮ ಅಡಿ
ಏರಿಯ ಉದ್ದ : ೨೦ ಅಡಿ	ಅಚ್ಚುಕಟ್ಟು ಪ್ರದೇಶ : ೬೧.೬೬ ಹೆಕ್ಟೇರ್

ಆಲದಕಟ್ಟೆಯಲ್ಲಿ ಕಂಡುಬರುವ ಈ ವಡ್ಡಿನಕೆರೆಯು ಗ್ರಾಮದಲ್ಲಿಯೇ ಇರುವ ಅತಿ ದೊಡ್ಡ ಕೆರೆ. ಹೆಸರೇ ಸೂಚಿಸುವಂತೆ ವಡ್ಡು ಪ್ರಧಾನವಾಗಿರುವುದರಿಂದ ಈ ಕೆರೆಗೆ 'ವಡ್ಡಿನಕೆರೆ' ಎಂದು ಹೆಸರು ಬಂದಿದೆಯೆಂದು ಗ್ರಾಮಸ್ಥರು ಅಭಿಪ್ರಾಯ ಪಡುತ್ತಾರೆ. ಈ ಕೆರೆಯಿಂದ ಕೃಷಿಕರು ಮೊದಲಿನಿಂದಲೂ ನೀರಾವರಿ ಚಟುವಟಿಕೆಗಳನ್ನು ಮಾಡುತ್ತಾ ಬಂದಿರುತ್ತಾರೆ. ಅನುಕೂಲತೆಗೆ ಕೆರೆಯಿಂದ ನೀರನ್ನು ಹೊರಗೆ ತೆಗೆದುಕೊಳ್ಳಲು ಕಾಲುವೆ ವ್ಯವಸ್ಥೆಯನ್ನೂ ಕೂಡ ತುಂಬಾ ಅಚ್ಚುಕಟ್ಟಾಗಿ ಮಾಡಿಕೊಂಡಿದ್ದಾರೆ. ಕಾಲುವೆಯನ್ನು ಸ್ಥಳೀಯವಾಗಿಯೇ ನಿರ್ಮಿಸಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯು ಬಾರದೇ ಹೋಗಿದ್ದರಿಂದ ಈ ಕೆರೆಯೂ ನೀರಿನ ಪ್ರಮಾಣವನ್ನು ಹೊಂದಿಲ್ಲ. ಸಂಪೂರ್ಣ ಖಾಲಿಯಾಗಿದ್ದು ಹೂಳು ತುಂಬಿಕೊಂಡಿದೆ. ಇದರಿಂದ ನೀರಿನ ಸಂಗ್ರಹಣಾ ಸಾಮರ್ಥ್ಯವೂ ಕಡಿಮೆಯಾಗಿದೆ. ಎಂದಿನಂತೆ ಸಂಬಂಧಪಟ್ಟ ಅಧಿಕಾರಿಗಳು, ಇಲಾಖೆಗಳು ಕೆರೆಯ ಹೂಳು ತೆಗೆಸುವ ಕೆಲಸ ಮಾಡಿದರೆ ಕೆರೆಯು ನೀರಿನ ಸಂಗ್ರಹಣಾ ಸಾಮರ್ಥ್ಯ ಸಹಜವಾಗಿಯೇ ಹೆಚ್ಚಳವಾಗಿ ಕೃಷಿಕರಿಗೆ ಸಹಾಯವಾಗುತ್ತದೆ.

ಈ ಕೆರೆಯು ಪ್ರಮುಖವಾಗಿ ೩ ತೂಬುಗಳನ್ನು ಹೊಂದಿದೆ. ಆದರೆ ಅವುಗಳು ಸಮರ್ಪಕವಾಗಿಲ್ಲ. ಎಲ್ಲವೂ ಮುಚ್ಚಿ ನಾಶವಾಗಿವೆ. ಬಹುಶಃ ಅವುಗಳನ್ನು ಕಟ್ಟಿಗೆಯಿಂದ ಕಟ್ಟಿರುವ ಕಾರಣ ಕಾಲಕ್ರಮೇಣ ಕೊಳೆತು ಮಣ್ಣಲ್ಲಿ ಹಾಗೆ ಮುಚ್ಚಿ ಹೋಗಿರಬಹುದು. ಕೆರೆಯ ಸ್ಥಿತಿ ಹೀಗಿರುವಾಗ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೇ ಅಭಿವೃದ್ಧಿ ಕಾರ್ಯ ಮಾಡಬೇಕಿದೆ. ಅದರಲ್ಲೂ ಕೆರೆಗಳ ವಿಚಾರಕ್ಕೆ ಬಂದಾಗಲಂತೂ ಅವರು ಅಸಡ್ಡೆ ಮನೋಭಾವವನ್ನು ಹೊಂದಿರಬಾರದು. ಬದಲಾಗಿ ಸ್ವಇಚ್ಛೆಯಿಂದ ಗಮನಕ್ಕೆ ತೆಗೆದುಕೊಂಡು ಕೆರೆಗಳನ್ನು ಪುನರುಜ್ಜೀವನಗೊಳಿಸಿ ಕೆರೆಯನ್ನು ಸಂರಕ್ಷಿಸಬೇಕಾಗಿದೆ.

ಹೊಸಕಟ್ಟಿ ಕೆರೆ

ಗ್ರಾಮ : ಆಲದಕಟ್ಟಿ	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೧೨	ಕೆರೆಯ ವಿಸ್ತೀರ್ಣ : ೮ ಎಕರೆ
ಜಲಾವೃತ ಪ್ರದೇಶ : ೪.೮೮ (mcft)	ಏರಿಯ ಎತ್ತರ : ೪ ಅಡಿ
ಏರಿಯ ಉದ್ದ : ೨೫ ಅಡಿ	ಅಚ್ಚುಕಟ್ಟು ಪ್ರದೇಶ : ೪೦.೬೧ ಹೆಕ್ಟೇರ್

ಹೊಸಕಟ್ಟಿ ಕೆರೆಯು ಊರಿನ ಅಂಚಿನಲ್ಲಿದೆ. ಈ ಕೆರೆಯ ಹೆಸರು ಹೊಸಕಟ್ಟಿ ಕೆರೆ ಎಂದು ಬರಲು ಕಾರಣವೇನೆಂದು ಸರಿಯಾಗಿ ತಿಳಿದು ಬಂದಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲೂ ಗ್ರಾಮಸ್ಥರನ್ನು ಈ ಕುರಿತು ವಿಚಾರಿಸಿದಾಗ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಕೆರೆಯಲ್ಲಿ ಪ್ರಸ್ತುತ ಸ್ವಲ್ಪ ಪ್ರಮಾಣದ ನೀರು ಇದೆ. ಕೆರೆಯ ತುಂಬೆಲ್ಲ ಹೂಳಿನ ಜೊತೆಜೊತೆಗೆ ಕಸ–ಕಡ್ಡಿ ತುಂಬಿ ಕೆರೆಯು ತನ್ನ ಆಕಾರವನ್ನೇ ಬದಲಿಸಿಕೊಂಡಿದೆ. ಕೆರೆಯ ಅಂಚಿನಲ್ಲಿ ಕಂಡುಬರುವ ವಡ್ಡುಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಅಲ್ಲಲ್ಲಿ ವಡ್ಡಿನ ಮಧ್ಯೆ ಕೆರೆಗೆ ಇಳಿದು ಹತ್ತಲು ಸಿಮೆಂಟು ಮತ್ತು ಕಲ್ಲುಗಳಿಂದ ಮೆಟ್ಟಿಲಿನ ವ್ಯವಸ್ಥೆ ಮಾಡಲಾಗಿದೆ. ಎಂದಿನಂತೆ ಸಹಜವಾಗಿ ಕೆರೆಯ ಅಕ್ಕಪಕ್ಕ ಹೊಲ, ಗದ್ದೆಗಳು ಕಂಡುಬಂದಿದ್ದು, ಕೆರೆಯ ಮೂಲಕ ನೀರಾವರಿ ಚಟುವಟಿಕೆಗಳು ಯಥಾಪ್ರಕಾರ ನಡೆಯುತ್ತಿದ್ದವು. ಆದರೆ ಈಗೀಗ ಬರಗಾಲದ ಕಾರಣವೋ ಅಥವಾ ಸರಿಯಾಗಿ ಮಳೆ ಬರದೇ ಇರುವ ಕಾರಣವೋ ಕೆರೆಯಲ್ಲಿ ಹೇಳಿಕೊಳ್ಳುವಷ್ಟು ನೀರಿಲ್ಲ. ಆದ ಕಾರಣ ಗ್ರಾಮಸ್ಥರು, ಕೃಷಿಕರು ತಮ್ಮ ನೀರಾವರಿ ಚಟುವಟಿಕೆಗಳಿಗೆ ಬೇರೆ ಮಾರ್ಗವನ್ನು ಹುಡುಕಿಕೊಳ್ಳುತ್ತಿದ್ದಾರೆ. ಅಂದರೆ ಉಳ್ಳವರು ಬೋರ್‌ವೆಲ್‌ಗಳನ್ನು ಕೊರೆಸುವ ದಾರಿಯನ್ನು ಕಂಡುಕೊಂಡರೆ, ಸಾಮಾನ್ಯರು ಆ ದಾರಿ ಗೊತ್ತಿದ್ದೂ ಆರ್ಥಿಕ ದೃಷ್ಟಿಯಿಂದ ಮಳೆರಾಯನನ್ನೇ ನೆಚ್ಚಿಕೊಂಡು ಕೂತಿರುವುದಂತೂ ಸುಳ್ಳಲ್ಲ.

ಮೇಲಿನಂತೆಯೇ ಈ ಕೆರೆಯೂ ೩ ತೂಬುಗಳನ್ನು ಹೊಂದಿದ್ದು, ಯಾವುದೇ ರೀತಿಯ ಉಪಯೋಗಸಹಿತ ಉದ್ದೇಶವನ್ನಿಟ್ಟುಕೊಂಡಿಲ್ಲ. ಅಂದರೆ ಇವೂ ಕೂಡ ಸಂಪೂರ್ಣ ನಾಶವಾಗಿವೆ.

ತುಂಬಿದ ಕೆರೆಯಿಂದ ನೀರು ಹಾಸಿಯಿಕೊಳ್ಳುವ ಉದ್ದೇಶದಿಂದ ನಿರ್ಮಿಸಿಕೊಂಡಿದ್ದ ತೂಬುಗಳು ಈಗ ಹೇಳಲು, ತೋರಿಸಲು ಹೆಸರು ಇಲ್ಲದಂತೆ ನೆಲಕಚ್ಚಿ ಹೋಗಿವೆ. ಇದರಿಂದ ರೈತರ ನೀರಾವರಿ ಚಟುವಟಿಕೆಗಳಿಗೆ ಅಡ್ಡಗಾಲು ಹಾಕಿದಂತಾಗಿದೆ. ಆದ್ದರಿಂದ ಪಂಚಾಯತಿ ವತಿಯಿಂದ ಅಥವಾ ಸರ್ಕಾರದ ವತಿಯಿಂದಲಾದರೂ ಈ ಕೆರೆಯ ನವೀಕರಣ ಕೆಲಸವಾದರೆ ರೈತರ ಮೊಗದಲ್ಲಿ, ಅವರು ಬೆಳೆಯುವ ಬೆಳೆಯಲ್ಲಿ, ಅಷ್ಟೇ ಯಾಕೆ ಇಡೀ ಗ್ರಾಮದಲ್ಲಿಯೂ ನಾವೀನ್ಯತೆಯನ್ನು ಕಾಣಬಹುದು. ಈ ರೀತಿಯ ಅನುಕೂಲಕ್ಕಾಗಿ ಕಾದುಕುಳಿತಿದ್ದಾರೆ. ಆದಷ್ಟು ಬೇಗ ಅಧಿಕಾರಿವರ್ಗ ಕೆರೆ ಅಭಿವೃದ್ಧಿಗೆ ಗಮನಹರಿಸಬೇಕಾಗಿದೆ.

೬. ಇಂಗಳಗೊಂದಿ

ಹಿರೇಕೆರೂರು ತಾಲೂಕು ಹಿರೇಕೆರೂರು ಹೋಬಳಿಗೆ ಸೇರಿದ ಜನಮವಸತಿ ಗ್ರಾಮ. ತಾಲೂಕು ಕೇಂದ್ರದಿಂದ ಉತ್ತರಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೪೦೮.೪೦ ಹೆಕ್ಟೇರ್. ಕಪ್ಪು ಶಿಲೆಯೊಂದಿದ್ದು, ಎರೆ ಮತ್ತು ಮಸಾರಿ ಮಣ್ಣಿನ ಲಕ್ಷಣ ಇದೆ. ಒಡ್ಡಿನ ಕೆರೆ ಕಂಡುಬರುತ್ತದೆ. ಈ ಕೆರೆಗೆ ಹಿರೇಕೆರೂರು ಹಳ್ಳ ಹರಿದಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ३६೫.೪೨ ಹೆಕ್ಟೇರ್ ಕೃಷಿಭೂಮಿ ಇದೆ. ಮೆಕ್ಕೆಜೋಳ, ಹತ್ತಿ ಪ್ರಮುಖ ಬೆಳೆಗಳಾಗಿದ್ದು, ಬಿಳಿಜೋಳ, ಉಪಬೆಳೆಯಾಗಿದೆ. ಕೊಳವೆ ಬಾವಿಗಳನ್ನು ಕೊರೆಯಿಸಿ ಪಂಪ್‌ಸೆಟ್ ಅಳವಡಿಸಿಕೊಂಡು ಹನಿ ನೀರಾವರಿ ಮಾಡಿಕೊಂಡಿದ್ದಾರೆ.

ಇಂಗಳಗೊಂದಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿದ್ದು, ಇಂಗಳಗೊಂದಿ ಗ್ರಾಮ ಪಂಚಾಯತಿಯನ್ನು ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಿರೇಕೆರೂರು ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕೊಳವೆ ಬಾವಿಗಳ ಮೂಲಕ ಕಿರುನೀರು ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ಗ್ರಾಮಕ್ಕೆ ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೭೧೪. ಇದರಲ್ಲಿ ಪುರುಷರು ೪೮೪, ಮಹಿಳೆಯರು ೮೬೬ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೭೨ ಪುರುಷರು, ೮೨ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೮೫ ಪುರುಷರು, ೭೭ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೬೯೧ ಪುರುಷರು, ೭೦೭ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೨೨೭. ಇದರಲ್ಲಿ ಪುರುಷರು ೬೮೪, ಮಹಿಳೆಯರು ೫೪೩ ರಷ್ಟು ಇದ್ದಾರೆ.

ಗ್ರಾಮದಲ್ಲಿ ೨ ಶಾಸನಗಳು ಕಂಡುಬಂದಿವೆ. ಕ್ರಿ.ಶ. ೧೦೪೯ ರ ಶಾಸನವು ಮಾಳೇಶ್ವರ ದೇವಾಲಯ ಹಾಗೂ ಕೆರೆಗೆ ನೀಡಿದ ಭೂದಾನ ಸಂಗತಿಯನ್ನು ಒಳಗೊಂಡಿದೆ. ಇನ್ನೊಂದು ಶಾಸನ ಇತ್ತೀಚಿನದಾಗಿದೆ. ಈ ಗ್ರಾಮದಲ್ಲಿ ಎರಡು ದೇವಾಲಯಗಳಿದ್ದು, ಇವುಗಳಲ್ಲಿ ಕಲ್ಲೇಶ್ವರ ದೇವಾಲಯವು ೧೧-೧೨ ನೇ ಶತಮಾನದ್ದು. ಇದರ ಜೀರ್ಣೋದ್ಧಾರ ಮಾಡಲಾಗಿದೆ. ಶಾಸನ ಉಲ್ಲೇಖಿತ ಮಾಳೇಶ್ವರ ದೇವಾಲಯವು ಇದೇ ಆಗಿರಬಹುದು.[೨೨]

ಉಡಚಲಮ್ಮನ ಕೆರೆ

ಗ್ರಾಮ : ಇಂಗಳಗೊಂದಿ

ತೂಬುಗಳ ಸಂಖ್ಯೆ : ೦

ಸರ್ವೆ ನಂ : ೪೪

ಕೆರೆಯ ವಿಸ್ತೀರ್ಣ : ೯.೫ ಎಕರೆ

ಜಲಾವೃತ ಪ್ರದೇಶ : ೫.೨೨ (mcft)

ಏರಿಯ ಎತ್ತರ : ೫ ಅಡಿ

ಏರಿಯ ಉದ್ದ : ೩೦ ಅಡಿ

ಅಚ್ಚುಕಟ್ಟು ಪ್ರದೇಶ : ೩೫.೨೫ ಹೆಕ್ಟೇರ್

ಉಡಚಲಮ್ಮನ ಕೆರೆಯು ಶಿರಗಂಬಿ, ಸತ್ತಿಗೇಹಳ್ಳಿಯಿಂದ ಇಂಗಳಗೊಂದಿ ಗ್ರಾಮಕ್ಕೆ ಹೋಗುವಾಗ ಗ್ರಾಮದ ಆರಂಭಕ್ಕೇ ಪಶು ಆಸ್ಪತ್ರೆಯ ಪಕ್ಕದಲ್ಲಿ ಬಲಗಡೆಗೆ ಕಂಡುಬರುತ್ತದೆ. ಈ ಕೆರೆಯ ಏರಿಯಲ್ಲಿ ಒಂದು ದೇವಸ್ಥಾನವು ಕಂಡುಬಂದಿದ್ದು, ಅದನ್ನು ಉಡಚಲಮ್ಮ ಎಂದು ಗ್ರಾಮಸ್ಥರು ಕರೆದುಕೊಂಡು ಪೂಜಿಸುತ್ತಿದ್ದಾರೆ. ಆದ್ದರಿಂದ ಈ ಕೆರೆಗೆ 'ಉಡಚಲಮ್ಮನ ಕೆರೆ'ಯೆಂದೇ ಕರೆಯುತ್ತಾರೆ. ಈ ಕೆರೆಯು ಯಾವ ಅವಧಿಯಲ್ಲಿಯೂ ಬತ್ತುವುದಿಲ್ಲ. ಕಾರಣ ಇಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಿರುವುದರಿಂದಲೋ ಅಥವಾ ಬೇರೆ ರೂಪದಲ್ಲಿ ಈ ಕೆರೆಗೆ ನೀರು ಸರಬರಾಜಾಗುತ್ತಿರಬಹುದು. ಬಹುತೇಕ ಕೆರೆಯ ನೀರು ಹಸಿರುಗಟ್ಟಿರುತ್ತದೆ. ಪ್ರಮುಖವಾಗಿ ಹಸಿರುಗಪ್ಪೆ, ಹಸಿರು ಹಾವುಗಳ ತಾಣವಾಗಿದೆ. ಈ ಕೆರೆಯ ನೀರನ್ನು ಜನ ಯಾವುದೇ ಚಟುವಟಿಕೆಗಳಿಗೆ ಬಳಸಿಕೊಳ್ಳುವುದಿಲ್ಲ ಹೆಚ್ಚಾಗಿ. ಆದರೂ ನೀರಾವರಿ ಚಟುವಟಿಗಳಿಗೆ ಸ್ವಲ್ಪ ಪ್ರಮಾಣದಲ್ಲಿ ಉಪಯೋಗವಾಗುತ್ತಿರುತ್ತದೆ ಆಗಾಗ ಮಳೆ ಕೈಕೊಟ್ಟಾಗ. ಪಕ್ಕದ ಹೊಲದ ಕೃಷಿಕರು ಇದಕ್ಕೆ ಮೋಟಾರು ಹಚ್ಚಿ ನೀರನ್ನು ತಮ್ಮ ಹೊಲಗಳಿಗೆ ಹಾಯಿಸಿಕೊಂಡು ಕೃಷಿ ಚಟುವಟಿಕೆಗಳನ್ನು ಮಾಡುತ್ತಾರೆ.

ಈ ಕೆರೆಯು ಯಾವುದೇ ರೀತಿಯ ತೂಬಿನ ವ್ಯವಸ್ಥೆಯನ್ನು ಹೊಂದಿಲ್ಲ. ಬದಲಾಗಿ ಒಂದೇ ತೆರನಾಗಿ ಹರಿದು ಹಿರೇಕೆರೂರ ಹಳ್ಳವನ್ನು ಸೇರುತ್ತದೆ ಎಂದು ಗ್ರಾಮಸ್ಥರು ಅಭಿಪ್ರಾಯ ಪಟ್ಟಿದ್ದಾರೆ. ಹೂಳಿನ ಪ್ರಮಾಣವೂ ಕೂಡ ಕೆರೆಯಲ್ಲಿನ ನೀರಿನ ಪ್ರಮಾಣಕ್ಕಿಂತಲೂ ಹೆಚ್ಚಾಗಿಯೇ ಇದೆ ಎಂದು ಹೇಳಲು ವಿಷಾದವೆನಿಸುತ್ತದೆ. ಕ್ಷೇತ್ರಕಾರ್ಯ ಕೈಗೊಂಡಾಗ ಗ್ರಾಮಸ್ಥರಿಂದ ಕೇಳಲ್ಪಟ್ಟಿದ್ದೇನೆಂದರೆ ಇದುವರೆಗೂ ಯಾವ ಅಧಿಕಾರಿಗಳೂ ಹೂಳು ತೆಗೆಯುವ ಸಾಹಸಕ್ಕೆ ಕೈ ಹಾಕಿಲ್ಲವೆಂದು. ಊರಿಗೊಂದು ಕೆರೆಯಿದ್ದರೆ ಅಷ್ಟೇ ಸಾಕೆ? ಅದರ ಸರಿಯಾದ ನಿರ್ವಹಣೆ

ಮಾಡಬೇಕಿದೆ. ಆ ಕೆಲಸವನ್ನು ಊರಿನ ಮುಖಂಡರು, ಪಂಚಾಯತಿ ಅಧಿಕಾರಿಗಳು ಕೈಗೊಳ್ಳುವುದು ವಾಡಿಕೆ. ಹಾಗಾಗಿ ಇನ್ನು ಮುಂದೆಯಾದರೂ ಈ ತರಹದ ಕಾರ್ಯಗಳನ್ನು ಕೈಗೊಂಡು ಕೆರೆಯ ನವೀಕರಣ ಮಾಡಿ ಊರು ಉದ್ಧಾರ ಮಾಡುವಲ್ಲಿ ಸಹಭಾಗಿಗಳಾಗಲಿ.

೭. ಎತ್ತಿನಹಳ್ಳಿ ಎಂ.ಕೆ. (ಮಹಲ್ ಕೋಡ)

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ತಮ್ಮದು ಒಕ್ಕಲುತನ ಊರಾಗಿರುವುದರಿಂದ ಹಾಗೂ ಎತ್ತು, ಹೋರಿಗಳು ಇಲ್ಲದೇ ಬೇಸಾಯವು ಸಾಗುವುದಿಲ್ಲವಾದ್ದರಿಂದ ತಮಗೆ ಎತ್ತುಗಳೇ (ಬಸವಣ್ಣಗಳೇ) ಜೀವನಾಧಾರವಾಗಿರುವುದರಿಂದ ಅವುಗಳ ಉಪಕಾರ ಸ್ಮರಿಸಲು ಊರಿಗೆ 'ಎತ್ತಿನಹಳ್ಳಿ' ಎಂದು ಹೆಸರಿಟ್ಟಿರುವುದಾಗಿ ಆ ಗ್ರಾಮದವರು ಹೇಳುತ್ತಾರೆ. ಇದು ಸಹಜವೂ ಆಗಿದೆ. ಭೌಗೋಳಿಕ ವಿಸ್ತೀರ್ಣ ೬೯೮.೮೭ ಹೆಕ್ಟೇರ್. ಕಪ್ಪುಕಲ್ಲು ಎರೆ ಮತ್ತು ಮಸಾರಿ ಮಣ್ಣಿನ ಲಕ್ಷಣ ಹೊಂದಿದೆ. ಬಸವೇಶ್ವರ ಗುಡ್ಡ, ವಡ್ಡಿನಕೆರೆ, ಹಿರೇಕೆರೆ ಇವಲ್ಲದೆ ಮುತ್ತಿಲಕಟ್ಟಿ, ಕಲ್ಲಕಕಟ್ಟಿ, ಹುಲ್ಲುಒಡ್ಡು, ದೇಸಿನಕೆರೆ, ನಾಡರಕಟ್ಟಿ, ಹೊನ್ನಾರಕಟ್ಟಿ, ಪುಟ್‌ಕಟ್ಟಿ, ತಲೆಒಡ್ಡು, ಹಣಸಿನಕಟ್ಟಿಕೆರೆ, ಹಿರೇಗಟ್ಟಿ ಹಾಗೂ ತುಂಬು ಹೊಂಡವಿದೆ. ನೀರಾವರಿ ಕಟ್ಟೆಗಳು ಒಂದಕ್ಕೊಂದು ಪೂರಕವಾಗಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ೫೨೬.೩೬ ಹೆಕ್ಟೇರ್ ಕೃಷಿಭೂಮಿ ಇದೆ. ಮೆಕ್ಕೆಜೋಳ, ಹತ್ತಿ, ಭತ್ತ ಪ್ರಧಾನ ಬೆಳೆಗಳು. ತೊಗರಿ, ರಾಗಿ, ಕಬ್ಬು, ಉದ್ದು, ಔಡಲ ಉಪಬೆಳೆಗಳು. ತೆಂಗು, ಬಾಳೆ, ಮಾವು ತೋಟದ ಬೆಳೆಗಳು. ವಡ್ಡಿನಕೆರೆಯಲ್ಲಿ ನೀರಾವರಿ ಇದೆ.

ಎತ್ತಿನಹಳ್ಳಿ ಎಂ.ಕೆ. ಹಾವೇರಿ ದಕ್ಷಿಣ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿದೆ. ಎತ್ತಿನಹಳ್ಳಿ ಎಂ.ಕೆ. ಗ್ರಾಮ ಪಂಚಾಯತಿಯನ್ನು ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಂಸಬಾವಿ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕೊಳವೆ ಬಾವಿಗಳ ಮೂಲಕ ಕಿರುನೀರು ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರು ಪೂರೈಸಿ, ಊರಿಗೆ ನಳಗಳ ಮೂಲಕ ನೀರು ಒದಗಿಸಲಾಗಿದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೦೦೧. ಇದರಲ್ಲಿ ಪುರುಷರು ೧೦೧೬, ಮಹಿಳೆಯರು ೯೮೫ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೩೮೪ ಪುರುಷರು, ೩೮೭ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೩೮ ಪುರುಷರು, ೩೮ ಮಹಿಳೆಯರು, ಹಿಂದುಳಿದ

ವರ್ಗದಲ್ಲಿ ೫೯೪ ಪುರುಷರು, ೫೬೦ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೪೦೭. ಇದರಲ್ಲಿ ಪುರುಷರು ೭೮೫, ಮಹಿಳೆಯರು ೬೨೨ ರಷ್ಟು ಇದ್ದಾರೆ.

ಎತ್ತಿನಹಳ್ಳಿ ಗ್ರಾಮದಲ್ಲಿ ಎರಡು ದೇವಾಲಯಗಳು ಮಾತ್ರ ವರದಿಯಾಗಿವೆ. ಯಾವುದೇ ಶಾಸನಗಳು ವರದಿಯಾಗಿಲ್ಲ. ಆದರೆ ಇಲ್ಲಿಯ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಬಳಿ ಎರಡು ಗೋಸಾಸನಗಳಿವೆ. ಒಂದು ಲಿಖಿತ ಗೋಸಾಸವಾಗಿದ್ದರೆ ಇನ್ನೊಂದು ಅಲಿಖಿತ. ಲಿಖಿತ ಗೋಸಾಸವು ಬಾಸವೂರು-೧೪೦ ಹಾಗೂ ಆ ಕಾಲದ ಅನೇಕ ಗ್ರಾಮಗಳ ಹೆಸರುಗಳನ್ನು ಹಾಗೂ ಕೆಲವು ಗಾವುಂಡರನ್ನು ಉಲ್ಲೇಖಿಸುತ್ತದೆ. ಈ ದೃಷ್ಟಿಯಿಮದ ಇದು ಮಹತ್ವದ್ದಾಗಿದೆ. ಡಾ॥ ಭೋಜರಾಜ ಪಾಟೀಲ ಈ ಶಾಸನ ಪ್ರಕಟಿಸಿದ್ದಾರೆ.

ಈ ಗ್ರಾಮದಲ್ಲಿ ಎರಡು ದೇವಾಲಯಗಳಿದ್ದು, ಅವುಗಳಲ್ಲಿ ಒಂದು ಊರ ಮಧ್ಯದಲ್ಲಿರುವ ಈಶ್ವರ (ಬ್ರಹ್ಮೇಶ್ವರ) ದೇವಾಲಯ. ಇದು ಕ್ರಿ.ಶ. ೧೧-೧೨ ನೇ ಶತಮಾನಕ್ಕೆ ಸೇರಿದ್ದು, ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದೆ. ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಅದರಲ್ಲಿ ಲಿಂಗ ಮತ್ತು ನಂದಿ ವಿಗ್ರಹಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ.[೨೩]

ಎತ್ತಿನಹಳ್ಳಿಯ ಗ್ರಾಮದಲ್ಲಿ ಹಿರೇಕೆರೆ ಮತ್ತು ವಡ್ಡಿನಕೆರೆಗಳು ಎಂಬ ಎರಡು ಪ್ರಮುಖ ಕೆರೆಗಳಿವೆ.

ಹಿರೇಕೆರೆ

ಗ್ರಾಮ : ಎತ್ತಿನಹಳ್ಳಿ ಎಂ.ಕೆ.	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೧೪೮	ಕೆರೆಯ ವಿಸ್ತೀರ್ಣ : ೪೮ ಎಕರೆ
ಜಲಾವೃತ ಪ್ರದೇಶ : ೭.೯ (mcft)	ಏರಿಯ ಎತ್ತರ : ೬.೫ ಅಡಿ
ಏರಿಯ ಉದ್ದ : ೪೫ ಅಡಿ	ಅಚ್ಚುಕಟ್ಟು ಪ್ರದೇಶ : ೪೭.೩೮ ಹೆಕ್ಟೇರ್

ಹೆಸರೇ ಸೂಚಿಸುವಂತೆ ಎತ್ತಿನಹಳ್ಳಿಯಲ್ಲೇ ಅತ್ಯಂತ ದೊಡ್ಡ ಕೆರೆ ಎಂದರೆ ಹಿರೇಕೆರೆ. ಪ್ರಮಾಣದಲ್ಲಿ ದೊಡ್ಡದಾಗಿರುವುದರಿಂದ ಹಿರೇಕೆರೆ ಎಂದು ಹೆಸರು ಬಂದಿದೆ. ಸಧ್ಯ ಕೆರೆಯಲ್ಲಿ ನೀರಿಲ್ಲದಿರುವುದರಿಂದ ಗ್ರಾಮಸ್ಥರು ಮಳೆಯನ್ನೇ ನೆಚ್ಚಿಕೊಂಡಿದ್ದಾರೆ. ಹಿಂದಿನ ಅವಧಿಗಳಲ್ಲೆಲ್ಲ ಮಳೆಯು ಸಕಾಲಕ್ಕೆ ಬಂದು ಕೆರೆಯೂ ತುಂಬಿ ಒಂದು ವೇಳೆ ಮಳೆಯು ಕೈಕೊಟ್ಟರೂ ಕೆರೆಯ ಮೂಲಕವಾದರೂ ಕೃಷಿಯ ಚಟುವಟಿಕೆಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಮಳೆಯು ಸರಿಯಾಗಿ ಬಾರದೇ ಹೋಗಿದ್ದರಿಂದ ಕೆರೆಯಲ್ಲಿ ಭೂಮಿ ಇಂಗುವಷ್ಟೂ ನೀರಿಲ್ಲ. ಪೂರ್ಣ ಪ್ರಮಾಣದಲ್ಲಿ ಬತ್ತಿ ಹೋಗಿದೆ. ಮುಂದಿನ ವರ್ಷಗಳಲ್ಲಾದರೂ ಮಳೆಯು ಬಂದು ಕೆರೆಯು ತುಂಬಿ ಜನರ ಜೀವನಾಡಿಯಾಗಲಿ. ಕೆರೆಯಿಂದ ನೀರನ್ನು

ಹೊಲಗಳಿಗೆ ಹಾಯಿಸಿಕೊಳ್ಳಲು ಕೆರೆಯ ಏರಿಯ ಪಕ್ಕದಲ್ಲಿ ಕಾಲುವೆ ವ್ಯವಸ್ಥೆ ಇದೆ. ಈ ಕಾಲುವೆಗಳಿಂದಲೇ ಅವರಿಗೆ ಬೇಕಾದ ಅವಧಿಯಲ್ಲಿ ನೀರು ಹಾಯಿಸಿಕೊಳ್ಳುತ್ತಾರೆ. ಕಾಲುವೆಯು ಸಿಮೆಂಟು, ಕಲ್ಲುಗಳಿಂದ ಮಾಡಲ್ಪಟ್ಟಿದೆ. ಕೆರೆಯ ಏರಿಯನ್ನೂ ಕೂಡ ಸಂಪೂರ್ಣ ಕಲ್ಲುಗಳಿಂದ ನಿರ್ಮಿಸಿದ್ದಾರೆ. ಏರಿಯ ಮಧ್ಯೆ ಅಲ್ಲಲ್ಲಿ ಇಳಿದು ಹತ್ತಲು ಮೆಟ್ಟಿಲುಗಳ ವ್ಯವಸ್ಥೆಯೂ ಇದೆ.

ಹಿರೇಕೆರೆಯು ಮೂರು ತೂಬುಗಳನ್ನು ಹೊಂದಿದ್ದು, ಅವುಗಳಲ್ಲಿ ಒಂದನ್ನು ಮಾತ್ರ ನವೀಕರಣ ಮಾಡಲಾಗಿದೆ. ಅಂದರೆ ಸಿಮೆಂಟು, ಕಲ್ಲು, ಕಬ್ಬಿಣದಂತಹ ಆಧುನಿಕ ಸಂಪನ್ಮೂಲಗಳನ್ನು ಬಳಸಿ ನವೀಕರಣಗೊಳಿಸಿದ್ದಾರೆ. ಆದರೆ ಉಳಿದ ಇನ್ನೆರಡು ತೂಬುಗಳು ಇನ್ನೂ ನವೀಕರಣದ ಭಾಗ್ಯವನ್ನು ಪಡೆದಿಲ್ಲ. ಅದರಿಂದ ಅವು ವಂಚಿತವಾಗಿಬಿಟ್ಟಿವೆ ಅಧಿಕಾರಿಗಳ ದೃಷ್ಟಿಯಲ್ಲಿ. ಈ ಎರಡೂ ತೂಬುಗಳು ಸಂಪೂರ್ಣ ಕಳೆಗುಂದಿ ಅಕ್ಕಪಕ್ಕ ಸೆದೆಯೆಲ್ಲ ಬೆಳೆದು ವಿಷಜಂತುಗಳ ತಾಣಗಳಾಗಿವೆ. ಜೊತೆಗೆ ಹೂಳಿನ ಸಮಸ್ಯೆಯೂ ಕೂಡ ಹಾಗೆಯೇ. ಈ ಕೆರೆಯು ಜಲಸಂವರ್ಧನೆ ಯೋಜನೆಗೆ ಒಳಪಟ್ಟಿದ್ದರಿಂದ ನಾಲ್ಕು ವರ್ಷಗಳ ಹಿಂದೆ ತಾಲೂಕು ಪಂಚಾಯತಿ ವತಿಯಿಂದ ಯಾರೋ ಒಬ್ಬ ಕಾಂಟ್ರ್ಯಾಕ್ಟರ್ ಬಂದು ಕೆರೆಯ ಹೂಳು ತೆಗೆಸುವ, ತೂಬುಗಳ ನವೀಕರಣ ಮಾಡುವ ನೆಪದಲ್ಲಿ ಬಂದು ಅದಕ್ಕೆಂದೇ ಅನುದಾನಿಸಿದ ಹಣವನ್ನೆಲ್ಲಾ ನುಂಗಿ ನೀರು ಕುಡಿದು ಯಾರ ಕೈಗೂ ಸಿಗದಂತೆ ನಾಪತ್ತೆಯಾಗಿಬಿಟ್ಟನಂತೆ. ಹೀಗೆ ಎಲ್ಲ ಕಡೆಯಾಗಿಬಿಟ್ಟರೆ ಈ ಕೆರೆಗಳ ಗತಿಯೇನೆಂಬುದೇ ಯಕ್ಷಪ್ರಶ್ನೆಯಾಗಿ ಉಳಿದು ಬಿಡುತ್ತದೆ. ಅಧಿಕಾರಿಗಳು, ಸರ್ಕಾರದವರು ಅದಕ್ಕೆ ಆಸ್ಪದೆ ಕೊಡದೆ ಮಾಡುವ ಕೆಲಸವನ್ನು ಮಾಡಿಬಿಟ್ಟರೆ ಜನಸಾಮಾನ್ಯರು ಅವರನ್ನು ತಮ್ಮ ಬಾಯ್ಗಳಲ್ಲಿ ಶುಭನೆನೆಯುವಿಕೆ ಎಂಬಂತೆ ಆಗಾಗ ಬಂದು ಹೋಗುವ ಭಾಗ್ಯವನ್ನಾದರೂ ಪಡೆದುಕೊಳ್ಳಬಹುದು.

೮. ಕಚವಿ

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮವಾಗಿದೆ. ತಾಲೂಕು ಕೇಂದ್ರದಿಂದ ವಾಯವ್ಯಕ್ಕೆ ೨೩ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಈ ಊರು ನಾಗರಖಂಡ ೭೦ ಕಂಪಣದ ಒಂದು ಪಟ್ಟಣ ಹಾಗೂ ಅಗ್ರಹಾರವಾಗಿತ್ತು. ಶಾಸನಗಳಲ್ಲಿ ಕಚ್ಚವಿ, ಕತ್ಸವಿ ಎಂದು ಎಂದು ಉಲ್ಲೇಖಿತವಾಗಿದೆ. ಈ ಊರ ಹೆಸರಿನ ಬಗೆಗೆ ಎರಡು ಅರ್ಥಗಳಿವೆ. ಕಚ್ಛವಿ ಎಂದರೆ ಲಕ್ಷ್ಮೀದೇವಿ ಹೆಸರಿನಲ್ಲಿ ಈ ಊರು ನಾಮಕರಣ ಹೊಂದಿದೆ ಎಂಬುದಾಗಿಯೂ ಹಾಗೂ 'ಕಚ್ಛ' ಸಂಸ್ಕೃತ ಪದ ಇದರರ್ಥ ನೀರಿನ ದಂಡೆಯ ಮೇಲಿರುವ ಊರು ಎಂಬುದಾಗಿ ವಿದ್ವಾಂಸರು (ಭೋಜರಾಜ ಪಾಟೀಲ) ಅಭಿಪ್ರಾಯಪಟ್ಟಿದ್ದಾರೆ. ಎರಡು ದೊಡ್ಡಕೆರೆಗಳ ದಂಡೆಯ ಮೇಲೆ ಈ ಊರು ನೆಲೆಸಿದೆ. ಈ ಊರು ೯೧೬.೩೬ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದ್ದು, ಕರಿಕಲ್ಲು, ಮಸಾರಿ ಹಾಗೂ ಎರೆಮಣ್ಣಿನಿಂದ ಕೂಡಿದೆ. ಊರ ದಕ್ಷಿಣಕ್ಕೆ ಕಲ್ಲುಗುಡ್ಡ, ಕೊಪ್ಪದಕೆರೆ, ಸೂಳಿಕೆರೆ ಎಂಬ ಎರಡು ದೊಡ್ಡಕೆರೆಗಳು, ದೇವರಕಟ್ಟಿ,

ಅಡವಿ, ಬಡಕಟ್ಟಿ, ಅತ್ತಿಕಟ್ಟಿ, ಜಿಗಳಿಕಟ್ಟಿ, ನಾಡಗೇರಕಟ್ಟಿ ಮುಂತಾದ ಒಟ್ಟು ಒಂಭತ್ತು ಕಟ್ಟೆಗಳಿವೆ. ನಾಗರಹಳ್ಳ ಎಂಬ ಹಳ್ಳ ಹರಿದಿದೆ. ಈ ಕೆರೆಗಳು ಒಂದಕ್ಕೊಂದು ಪೂರಕವಾಗಿ ನೀರಾವರಿ ವ್ಯವಸ್ಥೆ ಹೊಂದಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ೮೯೭.೮೫ ಹೆಕ್ಟೇರ್ ಕೃಷಿಭೂಮಿ ಇದ್ದು, ೨೨೧.೪೧ ಹೆಕ್ಟೇರು ಭೂಮಿ ನೀರಾವರಿ ಹೊಂದಿದೆ. ಮಲೆನಾಡಿನ ಗಡಿಯಲ್ಲಿಯೇ ಇರುವ ಈ ಊರು ಕೆಲವೇ ದಶಕಗಳ ಹಿಂದೆ ಭತ್ತದ ಕಣಜವಾಗಿತ್ತು. ಇತ್ತೀಚಿನ ದಿನಗಳಲ್ಲಿ ಮೆಕ್ಕೆಜೋಳ, ಹತ್ತಿ ಬೆಳೆಯುತ್ತಿದ್ದು, ಇವು ಮುಖ್ಯ ಹಾಗೂ ವ್ಯಾಪಾರೀ ಬೆಳೆಗಳಾಗಿವೆ. ಬಿಳಿಜೋಳ, ಸಣ್ಣಕಾಳುಗಳು ಉಪಬೆಳೆಗಳು. ಬಾಳೆ, ಚಿಕ್ಕು ಮಾವು ತೋಟದ ಬೆಳೆಗಳು. ಕೆರೆಗಳಲ್ಲಿ ಮೀನುಗಾರಿಕೆ ಇದೆ. ಮಳೆಗಾಲದ ಬೆಳೆ, ಚಳಿಗಾಲದ ಬೆಳೆಯೆಂದು ಎರಡು ರೀತಿಯಲ್ಲಿ ಬೆಳೆಯುತ್ತಾರೆ.

ಕಚವಿಯು ಹಾವೇರಿ ದಕ್ಷಿಣ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಗೆ ಸೇರಿದ್ದು, ಇದು ಸ್ವತಂತ್ರ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಂಸಬಾವಿ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೭೪೧. ಇದರಲ್ಲಿ ಪುರುಷರು ೧೩೭೩, ಮಹಿಳೆಯರು ೧೩೬೮ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೩೫೧ ಪುರುಷರು, ೩೮೧ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೬೮ ಪುರುಷರು, ೭೧ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೯೫೪ ಪುರುಷರು, ೯೧೬ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೮೭೯. ಇದರಲ್ಲಿ ಪುರುಷರು ೧೦೨೮, ಮಹಿಳೆಯರು ೮೫೧ ರಷ್ಟು ಇದ್ದಾರೆ.

ಇಲ್ಲಿ ರಾಷ್ಟ್ರಕೂಟರ ಅರಸ ಧೃವನ ಕಾಲಕ್ಕೆ ಸೇರಿದ (೮ ನೇ ಶತಮಾನ) ಎರಡು ಶಾಸನಗಳಿವೆ. ಒಂದು ಅತಿ ತೃಟಿತವಾಗಿದ್ದು, ಓದುವ ಹಾಗಿಲ್ಲ. ಇನ್ನೊಂದು ಶಾಸನ ಮಳೆಆರನಿಂದ ಕಚ್ಚವಿಯ ಮಾರಿಕಟ್ಟೆ ದೇವಿಗೆ ತುಪ್ಪದೆರೆಯ ದಾನದ ವಿಷಯ ಒಳಗೊಂಡಿದೆ. ೧೨ ನೇ ಶತಮಾನದ ಶಾಸನ 'ಪುಲಿಗೆರೆಯ ಸೋಮನಾಥ ದೇವರ ಪುರ' ಎಂದು ಉಲ್ಲೇಖಿಸಿದೆ. ೧೬ನೇ ಶತಮಾನದ ಶಾಸನ ಸಂಕಿಗಾವುಂಡಿ ಮತ್ತು ನಾಗಪುರ ವಿಗ್ರಹ ಮಾಡಿಸಿದ್ದನ್ನು ಹೇಳುತ್ತದೆ. ೧೮ನೇ ಶತಮಾನದ ಶಾಸನ ಹಜರತ್ ಸಾಹೇಬನಿಂದ ಕಚ್ಚ ಎಂಬ ಗೌಡಿಕೆಯನ್ನು ಪಡೆದ ನಾಲ್ಕು ಜನ ಗೌಡರ ಉಲ್ಲೇಖವಿದೆ. ಈಚಿನ ಅಕ್ಷರಗಳಲ್ಲಿರುವ

ಶಾಸನ ಭಕ್ತರಿಂದ ಭಷಾವರ್ತಿ ಬಸವಲಿಂಗದೇವರ ಮಠದ ಸ್ಥಾಪನೆ ದಾಖಲಾಗಿದೆ. ಪ್ರಾಚೀನವಾದ ಕಲ್ಯಾಣ ಚಾಲುಕ್ಯ ಶೈಲಿಯ ಕ್ರಿ.ಶ. ಸುಮಾರು ೧೧-೧೨ ನೇ ಶತಮಾನದ ಕಲ್ಲಪ್ಪ ದೇವಾಲಯ ಅದೇ ಶೈಲಿಯ ಕ್ರಿ.ಶ. ಸುಮಾರು ೧೨-೧೩ ನೇ ಶತಮಾನದ ಈಶ್ವರ ದೇವಾಲಯಗಳಿವೆ.[೨೪]

ಸೂಳಿಕೆರೆ

ಗ್ರಾಮ : ಕಚವಿ	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೧೩೭	ಕೆರೆಯ ವಿಸ್ತೀರ್ಣ : ೪೫೦ ಎಕರೆ
ಜಲಾವೃತ ಪ್ರದೇಶ : ೨೯.೭೬ (mcft)	ಏರಿಯ ಎತ್ತರ : ೮.೨೫ ಅಡಿ
ಏರಿಯ ಉದ್ದ : ೧೫೦ ಅಡಿ	ಅಚ್ಚುಕಟ್ಟು ಪ್ರದೇಶ : ೪೭.೩೮ ಹೆಕ್ಟೇರ್

ಸೂಳಿಕೆರೆಯು ಕಚವಿ ಮತ್ತು ಮಡ್ಲೂರು ಗ್ರಾಮದ ಗಡಿಭಾಗದಲ್ಲಿ ಕಂಡುಬರುತ್ತದೆ. ವಿಸ್ತೀರ್ಣದಲ್ಲಿ ಅತೀ ದೊಡ್ಡ ಕೆರೆಯಾಗಿದೆ. ಕೆರೆಯನ್ನು ಸೂಳೆ ಕಟ್ಟಿಸಿದಳೆಂದು ಗ್ರಾಮದಲ್ಲಿ ಪ್ರತೀತಿ ಇದೆ. ಆದ್ದರಿಂದ ಈ ಕೆರೆಗೆ ಸೂಳಿಕೆರೆ ಎಂದು ಕರೆದಿದ್ದಾರೆ. ಈ ಕೆರೆಯೂ ಕೂಡ ಸಧ್ಯದಲ್ಲಿ ಬತ್ತಿದ ಕೆರೆಯಾಗಿದೆ. ಮೊದಲಿನಿಂದಲೂ ಕೃಷಿಕರು ನೀರಾವರಿಗೆ ಇದನ್ನೇ ನೆಚ್ಚಿಕೊಂಡಿದ್ದರಂತೆ. ಏಕೆಂದರೆ ಪ್ರಮಾಣದಲ್ಲಿ ದೊಡ್ಡದಾಗಿರುವುದರಿಂದ ನೀರು ಎಲ್ಲ ಅವಧಿಯಲ್ಲಿಯೂ ಇರುತ್ತಿತ್ತು. ಆದರೆ ಇತ್ತೀಚಿನ ನಾಲ್ಕು ವರ್ಷಗಳಲ್ಲಿ ಕೆರೆಯು ಪೂರ್ಣ ಬತ್ತಿ ಹೋಗಿ ಕೃಷಿಕರ ನೀರಾವರಿ ಚಟುವಟಿಕೆಗಳಿಗೆ ಅಡ್ಡಗಾಲು ಹಾಕಿದಂತಾಗಿದೆ. ಕೆರೆಯ ಎಲ್ಲ ಭಾಗಗಳಿಂದಲೂ ತೂಬಿನ ಮೂಲಕ ನೀರನ್ನು ಕೃಷಿಕರು ತಮ್ಮ ತಮ್ಮ ಹೊಲಗಳಿಗೆ ಹಾಯಿಸಿಕೊಳ್ಳುತ್ತಿದ್ದರು. ಜೊತೆಗೆ ಕಾಲುವೆ ವ್ಯವಸ್ಥೆಯೂ ಇದೆ.

ಕೆರೆಯು ಮೂರು ತೂಬುಗಳನ್ನು ಹೊಂದಿದ್ದು, ಅವುಗಳು ನಾಶವಾಗಿ ನೆಲಕಚ್ಚಿವೆ. ಇವುಗಳನ್ನು ಕಟ್ಟಿಗೆಯಿಂದ ಮಾಡಿದ್ದರಿಂದಲೋ ಏನೋ ಕಾಲಕ್ರಮೇಣ ಹುಳುಗಳು ಹತ್ತಿ ಕೊಳೆತು ಈಗ ಕಾಣದಂತಾಗಿವೆ. ಜೊತೆಗೆ ಹೂಳೂ ಕೂಡ ಹಾಗೆ ತುಂಬಿಕೊಂಡಿದೆ. ಇದುವರೆಗೂ ಒಂದು ಬಾರಿಯೂ ಹೂಳು ಎತ್ತುವ ಕಾರ್ಯವನ್ನು ಯಾವ ಅಧಿಕಾರಿಗಳೂ ಕೈಗೆತ್ತಿಕೊಂಡಿಲ್ಲವೆಂದು ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಂಡರು. ಇವರ ಅಳಲಿಗೆ ಸ್ಪಂದಿಸುವ ಯಾವ ಅಧಿಕಾರಿಯೂ ಗ್ರಾಮ, ತಾಲೂಕು ಮಟ್ಟದಲ್ಲಿಲ್ಲವೇನೋ ಅಥವಾ ಎಲ್ಲರೂ ಕೊಳವೆ ಬಾವಿ(ಬೋರ್‌ವೆಲ್‌ಗಳು)ಗಳನ್ನು ಅವಲಂಬಿಸಿರುವುದರಿಂದ ಕೆರೆಗಳನ್ನು ಅಭಿವೃದ್ಧಿಪಡಿಸುವಲ್ಲಿ ನಿರ್ಲಕ್ಷ್ಯ ತೋರಲಾಗಿದೆ. ಗ್ರಾಮಗಳ ಜೀವನಾಡಿಗಳಾಗಿರುವ ಕೆರೆಗಳ ಬಗ್ಗೆ ಕುರಿತ ಈ ತರಹದ ಮನೋಭಾವ ಸಮಂಜಸವಾದುದಲ್ಲ. ಬದಲಾಗಿ ಅವುಗಳನ್ನು ನವೀಕರಿಸುವುದರ ಕುರಿತಾಗಿ ಅಗತ್ಯ ಕ್ರಮಗಳನ್ನು ಅನುಸರಿಸುವ ಅವಶ್ಯಕತೆ ಇದೆ.

೯. ಕ್ಯಾತನಕೇರಿ

ಹಿರೇಕೆರೂರು ತಾಲೂಕು ಹಿರೇಕೆರೂರ ಹೋಬಳಿಗೆ ಸೇರಿದ ಜನವಸತಿ ಗ್ರಾಮ. ಹಿರೇಕೆರೂರಿನಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಕ್ಯಾತನಕೇರಿ ಕ್ಯಾತ ಎಂಬ ವ್ಯಕ್ತಿಯು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದ್ದು, ಆತ ವಾಸಿಸುವ ಕೇರಿ ಕ್ಯಾತನಕೇರಿಯೆಂದು ಪ್ರಸಿದ್ಧವಾಯಿತು. ಇದರ ಭೌಗೋಳಿಕ ವಿಸ್ತೀರ್ಣ ೨೨೨.೮೮ ಹೆಕ್ಟೇರ್. ಕಪ್ಪು ಶಿಲೆಯಿಂದ ಕೂಡಿದ್ದು, ಕೆಂಪು ಮತ್ತು ಕಪ್ಪು ಮರಳುಧರಿ ಮಣ್ಣಿನ ಲಕ್ಷಣ ಹೊಂದಿದೆ. ಒಂದು ಮರಡಿ ದುರ್ಗಮ್ಮನ ಗುಡ್ಡ, ಹೊಂಡದ ಕೆರೆ, ದೋಗಾಗಿ ಕಟ್ಟೆ, ಹೊಂಡದ ಹಳ್ಳ ಇವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ೪೫೬.೩೪ ಹೆಕ್ಟೇರ್ ಕೃಷಿಭೂಮಿ ಹೊಂದಿದೆ. ಗೋವಿನಜೋಳ, ಹತ್ತಿ, ಶೇಂಗಾ, ಪ್ರಧಾನ ಬೆಳೆಗಳಾದರೆ, ತೊಗರಿ, ಅಲಸಂದಿ, ಹೆಸರು, ಉದ್ದು ಇಲ್ಲಿಯ ಉಪಬೆಳೆಗಳು.

ಕ್ಯಾತನಕೇರಿಯು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಗೆ ಸೇರಿದ್ದು, ತಾವರಗಿ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೭೩೯. ಇದರಲ್ಲಿ ಪುರುಷರು ೩೮೩, ಮಹಿಳೆಯರು ೩೫೬ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೬೪ ಪುರುಷರು, ೫೦ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೮೧ ಪುರುಷರು, ೯೮ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೨೩೮ ಪುರುಷರು, ೨೦೮ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೫೪೯. ಇದರಲ್ಲಿ ಪುರುಷರು ೩೦೫, ಮಹಿಳೆಯರು ೨೪೪ ರಷ್ಟು ಇದ್ದಾರೆ.[೨೫]

ಪ್ರಮುಖ ಕೆರೆಗಳು

ಉಂಬಳಿ ಕೆರೆ

ಗ್ರಾಮ : ಕ್ಯಾತನಕೇರಿ	ತೂಬುಗಳ ಸಂಖ್ಯೆ : ೦೨
ಸರ್ವೆ ನಂ : ೨೮	ಕೆರೆಯ ವಿಸ್ತೀರ್ಣ : ೨೨ ಎಕರೆ
ಜಲಾವೃತ ಪ್ರದೇಶ : ೧೫.೨೫ (mcft)	ಏರಿಯ ಎತ್ತರ : ೪.೫ ಅಡಿ
ಏರಿಯ ಉದ್ದ : ೪೫.೫೦ ಅಡಿ	ಅಚ್ಚುಕಟ್ಟು ಪ್ರದೇಶ : ೩೫.೫೦ ಹೆಕ್ಟೇರ್

ಉಂಬಳಿ ಕೆರೆಯು ವಿಸ್ತೀರ್ಣದಲ್ಲಿ ಕ್ಯಾತನಕೇರಿಯಲ್ಲಿಯೇ ದೊಡ್ಡ ಕೆರೆಯಾಗಿದೆ. ಇದನ್ನು ಹಿಂದಿನ ಕಾಲದಲ್ಲಿ ಉಂಬಳಿ ಕೊಟ್ಟ ಕಾರಣದಿಂದಾಗಿ ಅದನ್ನು ಕೆರೆಯಾಗಿ ಮಾರ್ಪಾಡು ಮಾಡಿಕೊಂಡು ಗ್ರಾಮದ ಜನತೆ ಇದನ್ನು ತಮ್ಮ ಕೃಷಿ ಮತ್ತು ಇನ್ನಿತರೆ ಚಟುವಟಿಕೆಗಳನ್ನು ಮಾಡತೊಡಗಿದ್ದಾರೆ. ಮೊದಲಿನಿಂದಲೂ ಈ ಕೆರೆಯನ್ನು ನೀರಾವರಿ ಉದ್ದೇಶದಿಂದಲೇ ಬಳಸಿಕೊಳ್ಳುತ್ತಿದ್ದಾರೆ. ಆದರೆ ಸಧ್ಯ ಕೆರೆಯಲ್ಲಿ ಎಳ್ಳಷ್ಟು ನೀರಿಲ್ಲದೇ ಬತ್ತಿ ಹೋಗಿದೆ. ಇದಕ್ಕೆ ಸಕಾಲಕ್ಕೆ ಮಳೆ ಬಾರದೇ ಇರುವುದೇ ಕಾರಣವಾಗಿದೆ. ಪಕ್ಕದ ಹೊಲಗಳಿಗೆ ನೀರನ್ನು ಹಾಯಿಸಿಕೊಳ್ಳಲು ಕಾಲುವೆ ವ್ಯವಸ್ಥೆಯೂ ಕೂಡ ಇದೆ.

ಉಂಬಳಿ ಕೆರೆಯು ತನ್ನಲ್ಲಿ ಎರಡು ತೂಬುಗಳನ್ನು ಹೊಂದಿದೆ. ಆದರೆ ಈ ಎರಡೂ ನಾಶವಾಗಿವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವಲೋಕಿಸಿದಾಗ ಇದು ಬೆಳಕಿಗೆ ಬಂದಿದೆ. ಕಾರಣಾಂತರಗಳಿಂದ ಇವು ಈಗ ಕಾಣಲು ಸಿಗುವುದಿಲ್ಲ. ಹೂಳಿನ ಪ್ರಮಾಣವು ಕೆರೆಯ ತುಂಬ ಜಾಸ್ತೀನೆ ಇದೆ. ಅಲ್ಲಲ್ಲಿ ತಗ್ಗುಗಳು ನೋಡಲು ಸಿಗುತ್ತವೆ. ಕೃಷಿಕರು ತಮ್ಮ ಹೊಲ, ಗದ್ದೆಗಳಿಗೆ ಕೆರೆಯ ಮಧ್ಯ ಭಾಗದಲ್ಲಿಯೋ ಅಥವಾ ಅದರ ಅಂಚಿನಲ್ಲಿಯೋ ತಗ್ಗು ತೆಗೆದು ಟ್ರ್ಯಾಕ್ಟರ್‌ಗಳ ಮೂಲಕ ಹೂಳನ್ನು ಅಲ್ಪ–ಸ್ವಲ್ಪ ಪ್ರಮಾಣದಲ್ಲಿ ಹೇರಿಕೊಂಡು ಅಲ್ಲಲ್ಲಿ ಗುಂಡಿಗಳನ್ನು ತೋಡಿದ್ದಾರೆ. ಇದರಿಂದ ಕೆರೆಯು ಏಕರೀತಿಯನ್ನು ಕಳೆದುಕೊಂಡಿದೆ. ಕೆರೆಗೆ ಒಡ್ಡಿನ ರಚನೆ ಇರುವುದಿಲ್ಲ. ಆದರೆ ಕೆರೆಯ ಒಡ್ಡಿನಲ್ಲಿ ಓಡಾಡಲು ಸ್ಥಳಾವಕಾಶವಿರುವುದರಿಂದ ಅದನ್ನು ಏರಿ ಎಂದು ಪರಿಗಣನೆ ಮಾಡಲಾಗಿದೆ. ಕೆರೆಯ ಸಧ್ಯ ಪರಿಸ್ಥಿತಿಯನ್ನು ನೋಡಿದರೆ ಅದನ್ನು ನವೀಕರಿಸುವ ಅಗತ್ಯತೆ ತುಂಬ ಇದೆಯೆಂದು ಗ್ರಾಮಸ್ಥರೆಲ್ಲರೂ ಒಕ್ಕೊರಲಿನಿಂದ ಅಭಿಪ್ರಾಯ ತಿಳಿಸಿದ್ದಾರೆ. ಆದ್ದರಿಂದ ಕೆರೆಯನ್ನು ಪುನರುಜ್ಜೀವನಗೊಳಿಸಬೇಕಾಗಿದೆ.

ಬೂಡಿ ಹೊಂಡ

ಗ್ರಾಮ : ಕ್ಯಾತನಕೇರಿ	ತೂಬುಗಳ ಸಂಖ್ಯೆ : ೦
ಸರ್ವೆ ನಂ : ೧೨	ಕೆರೆಯ ವಿಸ್ತೀರ್ಣ : ೭ ಎ. ೩ ಗು.
ಜಲಾವೃತ ಪ್ರದೇಶ : ೧೦.೨೫ (mcft)	ಏರಿಯ ಎತ್ತರ : ೩.೫ ಅಡಿ
ಏರಿಯ ಉದ್ದ : ೨೦.೭೫ ಅಡಿ	ಅಚ್ಚುಕಟ್ಟು ಪ್ರದೇಶ : ೩೫.೫೦ ಹೆಕ್ಟೇರ್

ಕ್ಯಾತನಕೇರಿಯಲ್ಲಿ ಕಂಡುಬರುವ ಎರಡನೇ ಪ್ರಮುಖ ಕೆರೆ ಇದಾಗಿದೆ. ಕೆರೆಯ ಹೆಸರು ಬೂಡಿ ಹೊಂಡವೆಂದು ಬರಲು ಸರಿಯಾದ ಕಾರಣ ಲಭ್ಯವಾಗಿಲ್ಲ. ಬಹುಶಃ ಇದು ಮೂಲತಃ ಬೂದಿ ಹೊಂಡವಾಗಿರಬೇಕು. ಬಹಳ ಹಿಂದಿನ ಕಾಲದಲ್ಲಿ ಕೆರೆಯ ಪಕ್ಕ ರುದ್ರಭೂಮಿ ಇದ್ದಿರಬಹುದು. ಆದ್ದರಿಂದ ಇದು ಬೂದಿ ಹೊಂಡ ಹೋಗಿ ಬೂಡಿ ಹೊಂಡ ಆಗಿರುವ ಸಾಧ್ಯತೆಯಿದೆ. ಇದ್ದರೂ ಇರಬಹುದು. ಆದರೆ ಕ್ಷೇತ್ರಕಾರ್ಯ ಕೈಗೊಂಡಾಗ ಈ ಕುರಿತ

ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಕೆರೆಯಲ್ಲಿ ಪ್ರಸ್ತುತವಾಗಿ ನೀರಿಲ್ಲದೇ ಒಣಗಿ ಹೋಗಿದೆ. ಮುಂದಿನ ಅವಧಿಗಳಲ್ಲಿ ಮಳೆಯು ಚೆನ್ನಾಗಿ ಆದರೆ ತುಂಬುವ ಸಾಧ್ಯತೆ ಹೆಚ್ಚಿದೆ. ಇದರಿಂದ ಗ್ರಾಮಸ್ಥರಿಗೂ ಸಮಾಧಾನ, ನೆಮ್ಮದಿಯ ಸೂಚನೆ ಸಿಕ್ಕಂತಾಗುತ್ತದೆ.

ಈ ಕೆರೆಯು ಯಾವುದೇ ರೀತಿಯ ತೂಬುಗಳನ್ನು ಹೊಂದಿಲ್ಲ. ಅಥವಾ ಇದ್ದರೂ ಕಾಲಕ್ರಮೇಣ ಹಾಳಾಗಿರುವ ಸಾಧ್ಯತೆಗಳಿವೆ. ಎಲ್ಲ ಕೆರೆಗಳಂತೆ ಈ ಕೆರೆಯ ಸಮಸ್ಯೆಯೂ ಹೂಳಿನದೆ. ಕೆರೆಯ ತುಂಬೆಲ್ಲ ಹೂಳು ತುಂಬಿಕೊಂಡು ಕೆರೆಯು ಒಂದು ರೀತಿಯಲ್ಲಿ ಸಪಾಟಾಗಿ ಕಾಣುತ್ತದೆ. ಆದ್ದರಿಂದ ಕೆರೆಯ ನವೀಕರಣವು ಎಲ್ಲ ರೀತಿಯಿಂದಲೂ ತುರ್ತಾಗಿ ಆಗಬೇಕಿದೆ.

೧೦. ಚಿಕ್ಕೋಣತಿ

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ಪ್ರಾಚೀನ ಆಡಳಿತದಲ್ಲಿ ನಾಗರಖಂಡ-೭೦ ಎಂಬ ಕಂಪಣದ ಒಂದು ಗ್ರಾಮವಾಗಿದ್ದಿತು. ೧೧-೧೨ನೇ ಶತಮಾನಗಳಲ್ಲಿ ವೆಣ್ಣಲೆ ಸಟ್ಟಿಕವೆ ಮನೆತನದವರು ನಾಳಗಾವುಂಡರಾಗಿ ಈ ಊರನ್ನು ಹಿರೇಕೋಣ್ತಿಯನ್ನು ಮತ್ತು ಸಾತೇನಹಳ್ಳಿಯನ್ನು ಒಂದಾಗಿ ಆಳಿದರು. ಇವರ ಚರಿತ್ರೆ ಅಪೂರ್ವವಾಗಿದೆ. ಶಾಸನಗಳಲ್ಲಿ ಈ ಊರನ್ನು 'ಕೊಣಂಗೇರಿ' 'ಕೋಣವತ್ತಿ' 'ಕೊಣತಿ' ಎಂದು ಮುಂತಾಗಿ ಉಲ್ಲೇಖಿಸಲಾಗಿದೆ. ಪ್ರಾಚೀನ ಹೆಸರು 'ಕೋಣವತಿ' ಎಂಬುದಾಗಿ ಶಾಸನ ಮೂಲಕ ತಿಳಿಯುತ್ತದೆ. ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ ೧೩ ಕಿ.ಮೀ. ದೂರದಲ್ಲಿರುವ ಇದು ಭೌಗೋಳಿಕವಾಗಿ ೭೦೩.೨೦ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದು, ಕೆಂಪು ಮತ್ತು ಕಪ್ಪು ಶಿಲೆಗಳಿಂದ ಹಾಗೂ ಎರೆ ಮತ್ತು ಮಸಾರಿ ಮಣ್ಣಿನ ಲಕ್ಷಣ ಹೊಂದಿದೆ. ಮಾದರಗುಡ್ಡ, ಚಿಕ್ಕಗುಡ್ಡಗಳಿದ್ದು, ಊರಿನ ಉತ್ತರಕ್ಕೆ ದೊಡ್ಡಕೆರೆ (೧೦೪.೩೫ ಎಕರೆ), ಆಗ್ನೇಯಕ್ಕೆ ಹೇರಕಟ್ಟಿ, ದಕ್ಷಿಣಕ್ಕೆ ಜಾಫನಕಟ್ಟೆ, ಹಳ್ಳಿಕಟ್ಟೆ, ವೆಂಕಟಾಪುರ ಕಟ್ಟೆ, ಈಶಾನ್ಯಕ್ಕೆ ಹಸಿರು ಹೊಂಡಗಳು ಇವೆ. ಕೋಣತಿ ಊರುಗಳು ಒಂದರ ಪಕ್ಕದಲ್ಲಿ ಇನ್ನೊಂದು ಇವೆ. ಇವನ್ನು ನಿರ್ಧಿಷ್ಟಪಡಿಸಲು ಜನಸಂಖ್ಯೆ ಹೆಚ್ಚಿರುವ ಊರನ್ನು 'ಹಿರೇಕೊಣತಿ' ಎಂದೂ ಕಡಿಮೆ ಇರುವ ಊರನ್ನು 'ಚಿಕ್ಕೊಣತಿ' ಎಂದೂ ಕರೆಯಲಾಗಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ೪೦೨.೨೫ ಹೆಕ್ಟೇರ್ ಕೃಷಿಭೂಮಿ ಹೊಂದಿದೆ. ಗೋವಿನಜೋಳ, ಹತ್ತಿ, ಕಬ್ಬು, ಭತ್ತ ಪ್ರಧಾನ ಬೆಳೆಗಳಾಗಿವೆ. ಹುಳ್ಳಿ ಹೆಸರು, ಕಡ್ಲಿ ಉಪಬೆಳೆಗಳಾಗಿದ್ದು, ತೆಂಗು ಅಡಿಕೆ ತೋಟಗಾರಿಕೆ ಬೆಳೆಗಳಾಗಿವೆ.

ಚಿಕ್ಕೋಣತಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಗೆ ಸೇರಿದೆ. ಚಿಕ್ಕೋಣತಿ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಿರೇಕೆರೂರ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದೆ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೯೮೪. ಇದರಲ್ಲಿ ಪುರುಷರು ೧೦೦೮, ಮಹಿಳೆಯರು ೯೭೬ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೮೨ ಪುರುಷರು, ೭೫ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೩೯ ಪುರುಷರು, ೭೫೨ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೭೮೭ ಪುರುಷರು, ೭೫೨ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೪೪೪. ಇದರಲ್ಲಿ ಪುರುಷರು ೭೮೫, ಮಹಿಳೆಯರು ೬೩೯ ರಷ್ಟು ಇದ್ದಾರೆ.

ಗ್ರಾಮದಲ್ಲಿ ಎರಡು ಶಾಸನಗಳು ಬೆಳಕಿಗೆ ಬಂದಿದ್ದು, ಇನ್ನೂ ಪ್ರಕಟಣೆಯಾಗದ ಹಲವು ಶಾಸನಗಳಿವೆ. ಕ್ರಿ.ಶ. ೧೧೪೭ ರ ೨ನೇ ಜಗದೇಕಮಲ್ಲ ಶಾಸನದಿಂದ ಚಿಕ್ಕೋಣತಿಯು ಒಂದು ಅಗ್ರಹಾರವಾಗಿದ್ದು ಹಾಗೂ ಐನೂರ್ವರಿಂದ ಒಂದು ವ್ಯಾಪಾರಿ ಕೇಂದ್ರವೂ ಆಗಿದ್ದಿತೆಂಬ ವಿಷಯ ತಿಳಿದುಬರುತ್ತದೆ. ೧೮ ನೇ ಶತಮಾನದ ಶಾಸನವು ಪುರೋಹಿತನೊಬ್ಬನಿಗೆ ನೀಡಿದ ಭೂದಾನವನ್ನು ಉಲ್ಲೇಖಿಸುತ್ತದೆ. ಚಿಕ್ಕೋಣತಿಯು ಗುಡ್ಡದ ಮೇಲೆ ನಿರ್ಮಾಣವಾಗಿದ್ದರೂ ಊರಲ್ಲಿ ಇನ್ನೂ ಎತ್ತರವಾದ ಇನ್ನೊಂದು ಗುಡ್ಡವಿದೆ. ಇಲ್ಲಿ ಕೋಟೆ ಬುರುಜಗಳು ಈಗಲೂ ಇವೆ. ಊರ ಪ್ರವೇಶದಲ್ಲಿರುವ ಬಸವಣ್ಣನ ಗುಡಿಯುಜೀರ್ಣೋದ್ಧಾರಗೊಂಡಿದ್ದು, ಗರ್ಭಗೃಹದ ಬಾಗಿಲುವಾಡದ ಶಿರೋಭಾಗದಲ್ಲಿ ಕ್ರಿ.ಶ. ೧೨ನೇ ಶತಮಾನದ ಶಂಭುಸ್ತುತಿ ಇದೆ. ಊರ ಹೊರಗೆ ಪುರಕೊಂಡಿಕೊಪ್ಪಕ್ಕೆ ಹೋಗುವ ದಾರಿಯಲ್ಲಿ ಏಳುಮುಖದ ಚೌಡವ್ವನ ಚಾಲುಕ್ಯರ ಕಾಲದ ಶಿಲ್ಪವಿದೆ.

ಊರಿನ ಕೆರೆಯ ಕಾಲುವೆ ಬಳಿ ೩ ಗೋಸಾಸ ಮೇಂಟಿಗಳಿವೆ. ಇವು ರಾಷ್ಟ್ರಕೂಟರ ಕಾಲದವು. ಇವು ಚಿಕ್ಕೋಣತಿಯ ಪ್ರಾಚೀನತೆಯನ್ನು ಸಾರುತ್ತವೆ. ೩-೪ ದಶಕಗಳ ಹಿಂದೆ ಗ್ರಾಮದಲ್ಲಿ ಗುಡ್ಡದ ಮಣ್ಣು ಅಗೆಯುವಾಗ ಪ್ರಾಚೀನ ಕಾಲದ ಒಂದು ಗದೆ ಲಭ್ಯವಾಗಿತ್ತು.[೨೬]

ದೊಡ್ಡಕೆರೆ

ಗ್ರಾಮ : ಚಿಕ್ಕೋಣತಿ	ತೂಬುಗಳ ಸಂಖ್ಯೆ : ೦೪
ಸರ್ವೆ ನಂ : ೯೨	ಕೆರೆಯ ವಿಸ್ತೀರ್ಣ : ೨೫೦ ಎಕರೆ

ಜಲಾವೃತ ಪ್ರದೇಶ : ೪೨.೪೨ (mcft) ಏರಿಯ ಎತ್ತರ : ೬.೫

ಏರಿಯ ಉದ್ದ : ೩೫.೨೫ ಅಡಿ ಅಚ್ಚುಕಟ್ಟು ಪ್ರದೇಶ : ೪೨.೯೩ ಹೆಕ್ಟೇರ್

ದೊಡ್ಡಕೆರೆಯು ಚಿಕ್ಕೋಣತಿಯಲ್ಲೇ ಇರುವ ದೊಡ್ಡ ಪ್ರಮಾಣದ ಕೆರೆಯಾಗಿದೆ. ಇದು ಚಿಕ್ಕೇರೂರಿನಿಂದ ಸಾತೇನಹಳ್ಳಿಗೆ ಹೋಗುವ ಮಾರ್ಗದಲ್ಲಿ ಎಡಗಡೆಗೆ ಕಾಣಸಿಗುತ್ತದೆ. ಪ್ರಮಾಣದಲ್ಲಿ ದೊಡ್ಡದಾಗಿರುವುದರಿಂದ ಇದನ್ನು ಸಹಜವಾಗಿ ದೊಡ್ಡಕೆರೆ ಎಂದು ಕರೆಯಲಾಗಿದೆ. ಇದೂ ಕೂಡ ಪ್ರಸ್ತುತ ನೀರನ್ನು ಹೊಂದಿಲ್ಲ. ಅಂದರೆ ಬತ್ತಿ ಒಣಗಿ ಹೋಗಿದೆ. ಕೆರೆಗೆ ಸುತ್ತಲೂ ಒಡ್ಡಿನಾಕಾರದಲ್ಲಿ ಏರಿಯಿದೆ. ಏರಿಯ ಮೇಲೆ ಓಡಾಡಲು ಸ್ಥಳಾವಕಾಶ ಇದೆ. ಈಗ ಕೆರೆಯು ಬೀಳು ಬಿದ್ದ ಭೂಮಿಯಂತಾಗಿದೆ. ಕೆರೆಯ ತುಂಬೆಲ್ಲ ಗಿಡ–ಮರಗಳು ಬೆಳೆದು ತ್ಯಾಜ್ಯವೆಲ್ಲ ತುಂಬಿಕೊಂಡಿದೆ. ಹೇಳಲು ಹೆಸರಿಗೆ ಮಾತ್ರ ಕೆರೆ ಇದು ಎಂದು ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಂಡರು. ಸರ್ಕಾರದ ಯಾವ ಅಧಿಕಾರಿಗಳು ಕೆರೆಯ ನವೀಕರಣಕ್ಕೆ ಮುಂದಾಗಿಲ್ಲವೆಂದೂ ಬೇಸರ ವ್ಯಕ್ತಪಡಿಸುವರು.

ಕೆರೆಯು ನಾಲ್ಕು ತೂಬುಗಳನ್ನು ಹೊಂದಿದ್ದು, ನಾಲ್ಕೂ ಕೂಡ ಸಂಪೂರ್ಣ ನಾಶವಾಗಿವೆ. ಹಾಳಾದ ಅವಧಿಯಿಂದಲೂ ಈ ಕಡೆಗೆ ಯಾವ ಅಧಿಕಾರಿಯೂ ತಲೇನೆ ಹಾಕಿಲ್ಲವೇನೊ. ಹಿಂದೊಂದಿನ ಸದಾ ನೀರಾವರಿ ಚಟುವಟಿಕೆಗಳಿಗೆ ಉಪಯೋಗವಾಗುತ್ತಿದ್ದ ಕೆರೆ ಈಗ ಬತ್ತಿ, ಬಳಲಿ ಬೆಂಡಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ. ಕೃಷಿ ಚಟುವಟಿಕೆಗಳಿಗೆಂದೇ ಕೆರೆಯ ಪಕ್ಕದಲ್ಲಿ ಅದಕ್ಕಂಟಿಕೊಂಡಂತೆ ಕಾಲುವೆ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದು, ಈಗ ಅದೂ ಕೂಡ ಅವನತಿಯ ಹಾದಿಯನ್ನು ತುಳಿದು ವರ್ಷಗಳೇ ಕಳೆದರೂ ಅಧಿಕಾರಿಗಳಿಗೆ ಮಾತ್ರ ಇದರ ಪರಿವೆಯೇ ಇಲ್ಲವೆಂಬುದು ಅಸಮಾಧಾನದ ಸಂಗತಿ. ಸಮರಸ್ತೆ ನೋಡಲು ಹೇಗಿರುತ್ತದೆಂಯೋ ಹೂಳು ತುಂಬಿಕೊಂಡು ಕೆರೆಯೂ ಹಾಗೆಯೇ ಕಾಣುತ್ತಿದೆ. ಮುಂದಿನವಧಿಗಳಲ್ಲಿಯಾದರೂ ಇದರ ಕಾಳಜಿಯನ್ನು ತೆಗೆದುಕೊಂಡು ಆದಷ್ಟು ಬೇಗ ನವೀಕರಣ ಕಾರ್ಯವಾದರೆ ಕೆರೆಗೂ, ಕೆರೆಯನ್ನು ನಂಬಿ ಕೂತಿರುವ ಗ್ರಾಮಜನತೆಗೂ ಅನುಕೂಲ ಕಲ್ಪಿಸಿದಂತಾಗುತ್ತದೆ.

೧೧. ಗುಡ್ಡದ ಮಾದಾಪುರ

ಹಿರೇಕೆರೂರ ತಾಲೂಕು ರಟ್ಟೀಹಳ್ಳಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ಮಹಾದೇವನಪುರ> ಮಾದೇವನಪುರ> ಮಾದನಪುರ> ಮಾದಾಪುರ ಆಗಿದೆ. ತಾಲೂಕು ಕೇಂದ್ರದಿಂದ ಆಗ್ನೇಯ್ಕಕೆ ೩೪ ಕಿ.ಮೀ. ದೂರದಲ್ಲಿರುವ ಇದು ಭೌಗೋಳಿಕವಾಗಿ ೧೮೨೬೦ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. ಸ್ಪಟಿಕಾತ್ಮಕ ಪದರು ಶಿಲೆಯಿಂದ ಕೂಡಿರುವ ಇಲ್ಲಿ ಮಸಾರಿ, ಎರೆ ಮಣ್ಣಿನ ಲಕ್ಷಣವನ್ನು ಹೊಂದಿದೆ. ಹಾಗೂ ದೊಡ್ಡಮಟ್ಟಿಗುಡ್ಡ, ಬೆಂಜರಗಲ್ಲುಗುಡ್ಡ,

ಚುರುಕೊಳ್ಳಗುಡ್ಡ ಇದರ ಸಮೀಪದಲ್ಲಿವೆ. ಹೊಸಕೆರೆ, ತಕ್ಕಲು ಕೆರೆ, ಕಲರಡಿಕೊಳ್ಳ ಕೆರೆ, ವರಣಕೆರೆ, ಹೆಗಡಿ ಕೆರೆ ಇದ್ದು ಊರ ಮುಂದಲಿನ ಹಳ್ಳ, ಕಡ್ಲಿಕಾಳು ಸಿದ್ಧಪ್ಪನ ಹಳ್ಳ, ನಡತಕ್ಕಳ ಹಳ್ಳ, ಕಡೆತಕ್ಕಳ ಹಳ್ಳ, ಕಾರಿಕಟ್ಟಿ ಹಳ್ಳಗಳು ಹರಿದಿವೆ. ಅಭಯಾರಣ್ಯ ಪ್ರದೇಶವನ್ನು ಹೊಂದಿರುವ ಈ ಗ್ರಾಮಕ್ಕೆ ಕರಡಿ ಮಾದಾಪುರ ಎಂಬ ಹೆಸರಿನ ಪ್ರತೀತಿ ಇದೆ. ಗುಡ್ಡ, ಕೊಳ್ಳ, ಕಾಡುಗಳ ಮಧ್ಯದಲ್ಲಿರುವ ಈ ಊರು ಅನೇಕ ಕಾಡುಪ್ರಾಣಿಗಳಿಗೆ ನೆಲೆಯೂ ಆಗಿದೆ. ಇವುಗಳಲ್ಲಿ ಕರಡಿಗಳು ಹೆಚ್ಚಾಗಿ ನೆಲೆಸಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೬೬೬.೦೬ ಹೆಕ್ಟೇರ್. ಗೋವಿನಜೋಳ, ಹತ್ತಿ, ರಾಗಿ ಪ್ರಧಾನ ಬೆಳೆಗಳಾಗಿವೆ. ಶೇಂಗಾ, ತೊಗರಿ, ಅವರೆ, ಜೋಳ, ಔಡಲ ಉಪಬೆಳೆಗಳು. ತೆಂಗು, ಅಡಿಕೆ ತೋಟಗಾರಿಕೆ ಬೆಳೆಗಳು. ಕೆರೆ ನೀರಾವರಿ ಇದೆ. ಕೆರೆಯಲ್ಲಿ ಮೀನುಗಾರಿಕೆ ಕೃಷಿ ನಡೆಯುತ್ತದೆ.

ಗುಡ್ಡದ ಮಾದಾಪುರ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ಹಾಗೂ ಹಿರೇ ಅಣಜಿ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ರಟ್ಟೀಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದೆ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೦೨೩. ಇದರಲ್ಲಿ ಪುರುಷರು ೧೦೪೬, ಮಹಿಳೆಯರು ೯೭೭ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೬೮ ಪುರುಷರು, ೬೬ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೫೬ ಪುರುಷರು, ೫೪ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೯೨೨ ಪುರುಷರು, ೫೮೭ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೪೮೪. ಇದರಲ್ಲಿ ಪುರುಷರು ೮೬೧, ಮಹಿಳೆಯರು ೬೨೩ ರಷ್ಟು ಇದ್ದಾರೆ.

ದೊಡ್ಡಕೆರೆ

ಗ್ರಾಮ : ಗುಡ್ಡದ ಮಾದಾಪುರ	ತೂಬುಗಳ ಸಂಖ್ಯೆ : ೦೦
ಸರ್ವೆ ನಂ : ೦೨	ಕೆರೆಯ ವಿಸ್ತೀರ್ಣ : ೪೦೦ ಎಕರೆ
ಜಲಾವೃತ ಪ್ರದೇಶ : ೬೫.೭೫ (ಟಭಿಜಿಣ)	ಏರಿಯ ಎತ್ತರ : ೮.೫ ಅಡಿ
ಏರಿಯ ಉದ್ದ : ೫೫ ಅಡಿ	ಅಚ್ಚುಕಟ್ಟು ಪ್ರದೇಶ : ೫೭.೩೫ ಹೆ.

ದೊಡ್ಡಕೆರೆಯು ಅಣಜಿಯಿಂದ ಗುಡ್ಡದ ಮಾದಾಪುರಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಎಡಭಾಗಕ್ಕೆ ಕಂಡುಬರುತ್ತದೆ. ಹೆಸರೇ ಹೇಳುವಂತೆ ಇದು ಪ್ರಮಾಣದಲ್ಲಿ ದೊಡ್ಡಕೆರೆಯಾಗಿದೆ. ರಸ್ತೆಯ ಪಕ್ಕದಲ್ಲಿ ಏರಿಯಿರುವಂತೆಯೇ ಕೆರೆಯ ಸುತ್ತಮುತ್ತಲೂ ಏರಿಯು ಕಂಡುಬರುತ್ತದೆ. ನೀರಾವರಿ ಚಟುವಟಿಕೆಗಳೇ ಪ್ರಮುಖವಾಗಿ ನಡೆಯುವ ಜಲತಾಣ ಇದಾಗಿದೆ. ಸುತ್ತಲೂ ತೋಟ, ಗದ್ದೆಗಳು ಇದಕ್ಕೆ ಸಾಕ್ಷಿರೂಪವಾಗಿ ನಿಲ್ಲುತ್ತವೆ. ಹಾಗೆಂದಮಾತ್ರಕ್ಕೆ ಎಲ್ಲ ಹೊಲ, ಗದ್ದೆಗಳು ಇದನ್ನೇ ಆಶ್ರಯಿಸಿವೆ ಎಂದರೆ ತಪ್ಪಾದೀತು. ಏಕೆಂದರೆ ಪ್ರಸ್ತುತ ಕೆರೆಗಳ ಸ್ಥಿತಿಯನ್ನು ನೋಡಿಯೇ ಅದರಲ್ಲಿ ಕೆಲವರು ಪರ್ಯಾಯ ಮಾರ್ಗವಾದ ಕೊಳವೆ ಬಾವಿಗಳನ್ನು ಕೊರೆಯಿಸಿಕೊಂಡು ಅದರ ಮೂಲಕವೂ ನೀರಾವರಿ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಕೆರೆಯ ಪಕ್ಕದಲ್ಲೇ ಗುಡ್ಡವಿರುವುದರಿಂದ ಮಳೆಯು ಬಂದಾಗ ಗುಡ್ಡದಿಂದಿಳಿದ ನೀರು ಕೆರೆಯನ್ನು ಸೇರುತ್ತದೆ ಎಂದು ಭಾವಿಸಲಾಗಿದೆ. ಅದಕ್ಕೆ ಪ್ರತ್ಯೇಕವಾಗಿ ಕಾಲುವೆ ವ್ಯವಸ್ಥೆಯನ್ನೂ ಮಾಡಿರಬಹುದು. ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣವು ಕಡಿಮೆಯಾಗಿರುವುದರಿಂದಲೋ ಏನೋ ಕೆರೆಯಲ್ಲಿ ಸ್ವಲ್ಪವೂ ನೀರು ಇಲ್ಲದೇ ಸಂಪೂರ್ಣ ಬತ್ತಿಹೋಗಿದೆ.

ಕೆರೆಗೆ ಸಂಬಂಧಿಸಿದಂತೆ ತೂಬುಗಳು ಕಂಡುಬಂದಿಲ್ಲ. ಹೂಳಿನ ಪ್ರಮಾಣವೂ ಕೂಡ ತುಸು ಹೆಚ್ಚಾಗಿಯೇ ಇದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಕ್ಕದ ಹೊಲ, ಗದ್ದೆಗಳ ಕೃಷಿ ಕಾರ್ಮಿಕರು ತಮ್ಮ ತಮ್ಮ ಹೊಲಗಳಿಗೆ ಕೆರೆಯಿಂದ ಹೂಳನ್ನು ಹೇರಿಸಿಕೊಳ್ಳುತ್ತಿದ್ದರು. ಅದೂ ಏಕಪ್ರಮಾಣದಲ್ಲಿ ಅಲ್ಲ ಕೆರೆಯ ಮಧ್ಯಭಾಗದಲ್ಲಿಯೋ, ಅಥವಾ ಕೆರೆಯ ಅಂಚಿನಲ್ಲಿಯೋ ಹೀಗೆ ತಮತಮಗೆ ಇಚ್ಛೆ ಬಂದ ಜಾಗದಲ್ಲಿ. ಅಧಿಕಾರಿಗಳಾದವರು ಈ ಕುರಿತ ಸರಿಯಾದ ಕೆರೆ ನಿರ್ವಹಣೆಯನ್ನು ಮಾಡದಿರುವುದೇ ಈ ರೀತಿಯ ಚಟುವಟಿಕೆಗಳಿಗೆ ಕಾರಣವಾಗಿರಬಹುದು. ಇದನ್ನು ಕಣ್ಣಾರೆ ಕಂಡೂ ಕೂಡ ಅಧಿಕಾರಿಗಳು ಕೆರೆಯ ನವೀಕರಣ ಕಾರ್ಯಕ್ಕೆ ಮುಂದಾಗದೇ ಇರುವುದು ಶೋಚನೀಯವಾದುದು. ಕೆರೆಯನ್ನು ಪುನರುಜ್ಜೀವನಗೊಳಿಸಿದ್ದೇ ಆದರೆ ಗ್ರಾಮಸ್ಥರಿಗಾಗುವಂತಹ ಸಂತೋಷ ಮತ್ತಾರಿಗೂ ಆಗುವುದಿಲ್ಲವೇನೊ. ಏಕೆಂದರೆ ಅಲ್ಲಿ ಬೆಳೆಯುವ ಎಷ್ಟೋ ಬೆಳೆಗಳು ಈ ಕೆರೆಯನ್ನೇ ನೆಚ್ಚಿಕೊಂಡು ಉಸಿರಾಡುತ್ತಿವೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕಾದ ಸಂಗತಿ ಹಾಗೂ ವಾಸ್ತವ ಕೂಡ.

೧೨. ಗೊಡಚಿಕೊಂಡ

ಹಿರೇಕೆರೂರು ತಾಲೂಕು ಹಿರೇಕೆರೂರು ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ಶಾಸನದಲ್ಲಿ ಈ ಊರಿಗೆ 'ಗೊಟ್ಟಿಯಹಳ್ಳಿ' ಎಂದು ಇದೆ. (ಭೋ.ಪಾ.) ಗೊಟ್ಟಿಯ ಹಳ್ಳಿ ಎಂದರೆ 'ದನಕರುಗಳ ಕೊಟ್ಟಿಗೆಯಾಗಿದ್ದ ಊರು' ಎಂದರ್ಥ. ಇನ್ನು ಗೊಡಚಿಕೊಂಡ ಇದರ ಅರ್ಥ ಗೊಡಚಿ ಇದರ ಮೂಲ ಕೊಡಚಿ (ಕೊಡಂಚಿ). ಇದು ಒಂದು ಜಾತಿಯ ಮುಳ್ಳಿನಗಿಡ. ಈಗ 'ಗೊಡಚಿಕೊಂಡ' ಎಂದರೆ ಗೊಡಚಿಕಂಟಿಗಳು ಬೆಳೆಯುವ ತಗ್ಗಿನಲ್ಲಿರುವ

ಊರು (ಭೋ.ಪಾ.). ಗ್ರಾಮದ ಕ್ರಿ.ಶ. ೧೨೦೩-೧೨೦೪ ರ ಶಾಸನದಲ್ಲಿ ಈ ಊರು 'ಗೊಟ್ಟೆಯಹಳ್ಳಿ' ಎಂದು ಉಲ್ಲೇಖವಾಗಿದೆ. ಕಾಲಕ್ರಮೇಣದಲ್ಲಿ ಇದು 'ಗೊಡಚಿಕೊಂಡ' ಎಂಬ ನಾಮದಿಂದ ರೂಢಿಗೆ ಬಂದಿದೆ. ಭೌಗೋಳಿಕ ವಿಸ್ತೀರ್ಣ ೫೬೯.೮೦ ಹೆಕ್ಟೇರ್. ಕಪ್ಪು ಶಿಲೆಯಿದ್ದು, ಮಸಾರಿ ಮತ್ತು ಎರೆಮಣ್ಣಿನ ಲಕ್ಷಣ ಹೊಂದಿದೆ. ಗೊಡಚಿಕೊಂಡ ಗುಡ್ಡ, ತಿಮ್ಮಪ್ಪ ಗುಡ್ಡಗಳಿದ್ದು, ಅವುಗಳ ಮಧ್ಯೆ ಒಂದು ದೊಡ್ಡ ಕೆರೆಯಿದೆ ಹಾಗೂ ಸಿದ್ದನ ಕಟ್ಟೆ, ಕಲ್ಲಪ್ಪನ ಕಟ್ಟಿ, ತಳವಾರ ಕಟ್ಟಿ, ದಾಸನಕಟ್ಟಿ, ಜಾಲಿಕಟ್ಟಿ, ಭೀಮನಕಟ್ಟಿ, ಕೋಣನಕಟ್ಟಿ, ಬಾಲನಕಟ್ಟಿ, ಸುಡುಗಟ್ಟಿ, ಹೊಸಗಟ್ಟಿ, ಕರಕಿಕಟ್ಟಿ ಎಂಬ ಕಟ್ಟಿಗಳಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೪೨೦.೨೬ ಹೆಕ್ಟೇರ್. ಗೋವಿನಜೋಳ, ಹತ್ತಿ, ಪ್ರಧಾನ ಬೆಳೆಗಳಾಗಿವೆ. ದ್ವಿದಳ ಧಾನ್ಯ, ತರಕಾರಿ, ಭತ್ತ ಉಪಬೆಳೆಗಳು. ತೆಂಗು, ಮಾವು ತೋಟಗಾರಿಕೆ ಬೆಳೆಗಳು. ಹನಿ ನೀರಾವರಿ ಅಳವಡಿಸಿಕೊಂಡಿದ್ದಾರೆ.

ಗೊಡಚಿಕೊಂಡ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿದೆ. ಎತ್ತಿನಹಳ್ಳಿ ಎಂ.ಕೆ. ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಿರೇಕೆರೂರು ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದ ನಳಗಳ ಮೂಲಕ ಕುಡಿಯುವ ನೀರು ಪೂರೈಕೆಯಾಗುತ್ತದೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೧೮೨. ಇದರಲ್ಲಿ ಪುರುಷರು ೫೮೮, ಮಹಿಳೆಯರು ೫೯೪ ರಷ್ಟಿದ್ದಾರೆ. ಪರಿಶಿಷ್ಟಜಾತಿಯಲ್ಲಿ ೧೯೯ ಪುರುಷರು, ೨೧೬ ಮಹಿಳೆಯರು, ಪರಿಶಿಷ್ಟಪಂಗಡದಲ್ಲಿ ೧೨ ಪುರುಷರು, ೧೦ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೩೭೭ ಪುರುಷರು, ೩೬೮ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೯೨೫. ಇದರಲ್ಲಿ ಪುರುಷರು ೫೦೩, ಮಹಿಳೆಯರು ೪೨೨ ರಷ್ಟು ಇದ್ದಾರೆ.

ಊರ ಹೊರಗಿರುವ ಕಲ್ಲಪ್ಪ ದೇವಾಲಯದ ಆವರಣದಲ್ಲಿ ಮೂರು ಶಾಸನಗಳು ಕಂಡುಬಂದಿವೆ. ಡಾ. ಭೋಜರಾಜ ಪಾಟೀಲರು ತಮ್ಮ ಮಹಾಪ್ರಬಂಧ 'ನಾಗರಖಂಡ-೭೦' ರಲ್ಲಿ ಇವುಗಳ ಬಗ್ಗೆ ಬರೆಯುತ್ತಾರೆ. ಕ್ರಿ.ಶ. ೧೨೦೪ರ ಒಂದು ಶಾಸನವು ಈ ಊರ ಪೂರ್ವದ ಹೆಸರು 'ಗೊಟ್ಟೆಯಹಳ್ಳಿ' ಎಂದು ಹೇಳುತ್ತದೆ. ಅಲ್ಲದೇ 'ಕಾಳಮುಖ' ಗುರುಗಳಾದ ತೇಜೋನಿಧಿ ದೇವರು ಗ್ರಾಮದಲ್ಲಿ ಶಿವಧರ್ಮ ಪುರಾಣ ಪ್ರವಚನ ಮಾಡಿದರೆಂದು ಇದರಿಂದ ಪ್ರಭಾವಿತನಾದ ಆ ಗ್ರಾಮದ ಬಮ್ಮಗಾವುಂಡ ಶಿವದೀಕ್ಷೆಯನ್ನು ಪಡೆದು ಬ್ರಹ್ಮೇಶ್ವರ ದೇವಾಲಯ

ನಿರ್ಮಿಸಿದನೆಂದು ಶಾಸನವು ತಿಳಿಸುತ್ತದೆ. ಈಗಿರುವ ಕಲ್ಲೇಶ್ವರ ದೇವಾಲಯವೇ ಹಳೆಯ ಬ್ರಹ್ಮೇಶ್ವರ ದೇವಾಲಯವಾಗಿತ್ತೆಂದು ತೋರುತ್ತದೆ.

ಕಲ್ಲಪ್ಪ ದೇವಾಲಯದ ಗರ್ಭಗೃಹದ ಬಾಗಿಲ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪದ ಕೆಳಗೆ ಕೇವಲ ಎರಡು ಸಾಲುಗಳ ಒಂದು ಶಾಸನವಿದ್ದು, ಅದು ಗಜಲಕ್ಷ್ಮಿಯ ಉಬ್ಬುಶಿಲ್ಪ ಮಾಡಿದವರ ಹೆಸರು ಹೇಳುತ್ತದೆ.

ಇನ್ನೊಂದು ಶಾಸನವು ವೀರಗಲ್ಲು ಆಗಿದ್ದು, ಅದು ತೃಟಿತವಾಗಿದೆ. ಇವುಗಳಲ್ಲದೇ ಊರ ಪಕ್ಕದಲ್ಲಿರುವ ಕೆರೆ ಏರಿ ದಂಡೆಯ ಮೇಲೆ ಹಾವನೂರು ಹನುಮಂತರಾಯನಿಗೆ ಸೇರಿದ ವರದಿಯಾಗದ ಅಪ್ರಕಟಿತ ಶಾಸನವನ್ನು ಹೊಂದಿದೆ. ಹನುಮಂತರಾಯನು ಮಾಡಿದ ಭೂದಾನ ಉಲ್ಲೇಖಿಸುತ್ತದೆ. ಇವುಗಳಲ್ಲದೇ ಊರಲ್ಲಿ ದೇವಾಲಯಗಳ ಪಕ್ಕದಲ್ಲಿ ಒಂದೆರಡು ತುಂಡು ಶಾಸನಗಳು, ಭಗ್ನ ವಿಗ್ರಹಗಳು ಕಂಡುಬಂದಿವೆ.

ಗ್ರಾಮದ ಹೊರವಲಯದಲ್ಲಿ ವರದಿಯಾದ ಕಲ್ಲಪ್ಪ ದೇವಾಲಯವಿದ್ದು, ಊರ ಹೊರಗಿದ್ದು, ಕ್ರಿ.ಶ. ಸುಮಾರು ೧೧-೧೨ ನೇ ಶತಮಾನಕ್ಕೆ ಸೇರಿದೆ. ಕಲ್ಯಾಣ ಚಾಲುಕ್ಯ ಶೈಲಿಯಲ್ಲಿರುವ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಲಿಂಗ ಮತ್ತು ಅರ್ಧಮಂಟಪದಲ್ಲಿ ನಂದಿಯ ಶಿಲ್ಪಗಳಿವೆ. ಗುಡಿಯ ಮುಂದೆ ನಂದಿಯ ಇನ್ನೊಂದು ಶಿಲ್ಪವಿದೆ. ಊರಲ್ಲಿ ವಿಜಯನಗರ ಕಾಲಕ್ಕೆ ಸೇರಿರಬಹುದಾದ ಚನ್ನಬಸವೇಶ್ವರ ದೇವಾಲಯವಿದೆ. ಆದರೆ ಸಧ್ಯದಲ್ಲಿ ಇದನ್ನು ಸಂಪೂರ್ಣವಾಗಿ ತೆಗೆದುಹಾಕಿ ನೂತನವಾಗಿ ಭವ್ಯ ದೇವಾಲಯವನ್ನು ಈ ಗ್ರಾಮದವರು ನಿರ್ಮಿಸುತ್ತಿದ್ದಾರೆ.[೨೮]

ದೊಡ್ಡಕೆರೆ

ಗ್ರಾಮ : ಗೊಡಚಿಕೊಂಡ	ತೂಬುಗಳ ಸಂಖ್ಯೆ : ೦೩
ಸರ್ವೆ ನಂ : ೧೨೪	ಕೆರೆಯ ವಿಸ್ತೀರ್ಣ : ೪೦ ಎಕರೆ
ಜಲಾವೃತ ಪ್ರದೇಶ : ೧೬.೫೦ (mcft)	ಏರಿಯ ಎತ್ತರ : ೩ ಅಡಿ
ಏರಿಯ ಉದ್ದ : ೩೫ ಅಡಿ	ಅಚ್ಚುಕಟ್ಟು ಪ್ರದೇಶ : ೪೪.೩೫ ಹೆಕ್ಟೇರ್

ಗೊಡಚಿಕೊಂಡ ಗ್ರಾಮದ ನೀರಾವರಿ ಚಟುವಟಿಗಳ ಕೇಂದ್ರವಾಗಿದ್ದ ದೊಡ್ಡಕೆರೆಯು ಗ್ರಾಮದಲ್ಲಿ ಕಂಡುಬರುವ ಅತ್ಯಂತ ದೊಡ್ಡ ಪ್ರಮಾಣದ ಕೆರೆಯಾಗಿದೆ. ಕೊಳವೆ ಬಾವಿಗಳ ಪರಿಚಯವಿಲ್ಲದ ಒಂದು ಕಾಲದಲ್ಲಿ ಮಳೆಯು ಬಾರದ ಸಮಯದಲ್ಲಿ ಬೆಳೆಗಳಿಗೆ ನೀರು ಸರಬರಾಜು ಮಾಡಲು ಪೂರಕವಾದ ಇನ್ನೊಂದು ಪರ್ಯಾಯ ಮಾರ್ಗವೇ ಕೆರೆ. ಆದ್ದರಿಂದ ಎಲ್ಲರಂತೆ ಎಲ್ಲ ಕಡೆಗಳಂತೆ ಇಲ್ಲಿಯೂ ಕೂಡ ಕೆರೆಯನ್ನಾಧರಿಸಿಯೇ ಕೃಷಿಕರು ತಮ್ಮ

ನೀರಾವರಿ ಚಟುವಟಿಕೆಗಳಲ್ಲಿ ಎಂದಿನಂತೆ ತೊಡಗಿಕೊಳ್ಳುತ್ತಿದ್ದರು. ಆದರೆ ಇತ್ತೀಚಿನ ನಾಲ್ಕೈದು ವರ್ಷಗಳು ಅವರ ಕೈಗಳನ್ನೇ ಕಟ್ಟಿ ಹಾಕಿವೆ. ಇದರಲ್ಲಿ ಮಳೆರಾಯನ ಪಾಲೇ ಪ್ರಮುಖವಾಗಿದೆ. ಮಳೆಯನ್ನೇ ಯಾವತ್ತು ನಚ್ಚಿಕೊಂಡಿರಲು ಸಾಧ್ಯವಿಲ್ಲ. ಹಾಗಾಗಿಯೇ ಕೆರೆಯಂತಹ ಪರ್ಯಾಯ ಮಾರ್ಗಗಳನ್ನು ನಮ್ಮ ಪೂರ್ವಜರು ಕಂಡುಕೊಂಡಿದ್ದರು. ಆದ್ದರಿಂದ ಅವರಂತೆಯೇ ನಾವೂ ಕೂಡ ಅವರು ಉಳಿಸಿ, ಬೆಳಸಿಕೊಟ್ಟ ಕೆರೆಗಳನ್ನು ಕಾಲದಿಂದ ಕಾಲಕ್ಕೆ ಸರಿಯಾಗಿ ನಿರ್ವಹಣೆ ಮಾಡುತ್ತ ಬರುವುದು ನಮ್ಮೆಲ್ಲರ ಆದ್ಯ ಕರ್ತವ್ಯದ ಜೊತೆಗೆ ಅನಿವಾರ್ಯವೂ ಆಗಿದೆ. ಇದರಲ್ಲಿ ಪಂಚಾಯತಿಯ ಅಧಿಕಾರಿಗಳು ಪ್ರಮುಖ ಪಾತ್ರವಹಿಸಬೇಕಾಗುತ್ತದೆ.

ದೊಡ್ಡಕೆರೆಯು ತನ್ನೊಡಲ ನೀರನ್ನು ಪಕ್ಕದ ಹೊಲದಲ್ಲಿರುವ ಬೆಳೆಗಳು ಸಮೃದ್ಧವಾಗಿ ಬೆಳೆಯಲಿ ಎನ್ನುವ ಕಾರಣಕ್ಕಾಗಿ ಮೂರು ತೂಬುಗಳನ್ನು ಹೊಂದಿದೆ. ಈ ತೂಬುಗಳನ್ನು ಗ್ರಾಮಸ್ಥರು 'ಮಡಿ ತುಂಬು' ಎಂದು ಗ್ರಾಮೀಣ ಭಾಷೆಯಲ್ಲಿ ಉಚ್ಚರಿಸುತ್ತಾರೆ. ಬಹುತೇಕ ಎಲ್ಲಾ ತೂಬುಗಳು ಆಧುನಿಕತೆಯ ಸ್ಪರ್ಶ ಪಡೆದುಕೊಂಡಿವೆ. ಅಂದರೆ ಸಿಮೆಂಟು, ಕಬ್ಬಿಣದಿಂದ ನಿರ್ಮಿಸಲ್ಪಟ್ಟಿವೆ. ತೂಬಿನ ಎಲ್ಲ ಭಾಗದಲ್ಲಿಯೂ ಸಿಮೆಂಟಿನ ಹೊದಿಕೆಯಿದೆ. ನಡುಭಾಗದಲ್ಲಿ ಕಬ್ಬಿಣವನ್ನು ವ್ಯವಸ್ಥಿತವಾಗಿ ಜೋಡಿಸಿದ್ದಾರೆ. ಉಳಿದ ಇನ್ನೆರಡು ತೂಬುಗಳೂ ಮೊದಲ ತೂಬಿನ ರಚನೆಯನ್ನೇ ಯಥಾವತ್ತಾಗಿ ಪಾಲಿಸಿಕೊಂಡಿವೆ. ಅವುಗಳ ರಚನೆಯಲ್ಲೇನೂ ಅಂಥ ಬದಲಾವಣೆಯೇನಿಲ್ಲ. ಮೂರು ತೂಬುಗಳು ಸುಸ್ಥಿತಿಯಲ್ಲಿದ್ದು ಮುಂದಿನವಧಿಯಲ್ಲಿ ಮಳೆ ಬಂದು ಕೆರೆ ಸಂಪೂರ್ಣ ತುಂಬಿದರೆ ತೂಬುಗಳಿಗೂ ಕೆಲಸ ಕೊಟ್ಟಂತಾಗುತ್ತದೆ. ಇಷ್ಟೆ ಆದರೆ ಸಾಲದು. ಕೆರೆಯ ಹೂಳನ್ನೂ ಕೂಡ ಪೂರ್ಣ ಪ್ರಮಾಣದಲ್ಲಿ ತಗೆಸಿದರೆ ಕೆರೆಯ ಆಳ ಹೆಚ್ಚುವುದಲ್ಲದೇ, ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯವೂ ಹೆಚ್ಚಾಗಿ, ಅಂತರ್ಜಲ ಮಟ್ಟವೂ ತಾನೇ ಹೆಚ್ಚಾಗುತ್ತದೆ. ಕೆರೆಗಳಿಂದ ಇಷ್ಟೆಲ್ಲ ಅನುಕೂಲಗಳಿದ್ದರೂ ಅವುಗಳನ್ನು ನವೀಕರಣ ಮಾಡಲು, ಸರಿಯಾಗಿ ನಿರ್ವಹಣೆ ಮಾಡಲು ಮಾತ್ರ ಎಲ್ಲರೂ ಹಿಂದೇಟು ಹಾಕುತ್ತಿದ್ದಾರೆ. ಅವರ ಈ ರೀತಿಯ ಹಿಂದೇಟು ಹಾಕುವ ಮನಸ್ಥಿತಿ ಬದಲಾದರೆ ಕೆರೆಗಳು ಮುನ್ನೆಲೆಗೆ ಬರುತ್ತವೆ. ತೂಬಿನ ಜೊತೆಗೆ ಈ ಕೆರೆಯು ಕಾಲುವೆ ವ್ಯವಸ್ಥೆಯನ್ನು ತುಂಬಾ ಅಚ್ಚುಕಟ್ಟಾಗಿ ನಿರ್ಮಿಸಲಾಗಿದೆ. ಇದರಿಂದ ಹೊರ ಹೋಗುವ ನೀರು ಸಲೀಸಾಗಿ ಹೊಲಗಳಿಗೆ ಪ್ರವೇಶ ಮಾಡಿ ಬೆಳೆಗಳಿಗೆ ಜೀವತುಂಬುತ್ತದೆ.

೧೩. ಚಿಕ್ಕೆರೂರು

'ಅನಾದಿ ಅಗ್ರಹಾರ, ಪಿರಿಯ ಅಗ್ರಹಾರ' ಎಂದೆಲ್ಲಾ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಚಿಕ್ಕೆರೂರು ಒಂದು ಪ್ರಾಚೀನ ಪಟ್ಟಣವಾಗಿದೆ. ಐತಿಹಾಸಿಕ ಈ ಗ್ರಾಮ ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ. ಶಾಸನಗಳಲ್ಲಿ 'ಕೆರೆಊರು' 'ಚಿಕ್ಕಕೆರೆಊರು' ಎಂದು ಉಲ್ಲೇಖವಾಗಿದೆ. ಈಗ ಅದು ಚಿಕ್ಕೇರೂರು ಎಂದಾಗಿದೆ. ತಾಲೂಕು ಕೇಂದ್ರದಿಂದ

ವಾಯವ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೦೧೮.೨೫ ಹೆಕ್ಟೇರ್. ಕಪ್ಪು ಶಿಲೆ ಹೊಂದಿದ್ದು, ಎರೆ ಮತ್ತು ಮಸಾರಿ ಮಣ್ಣಿನ ಲಕ್ಷಣಗಳಿವೆ. ಊರಬಳಿ ಕುಂತಿಗುಡ್ಡವಿದೆ. ಊರಿನಲ್ಲಿ ಒಟ್ಟು ೧೯ ಕೆರೆಗಳಿವೆ. ಅವುಗಳಲ್ಲಿ ದೊಡ್ಡಕೆರೆ, ೨೭೩ ಎ.ಗುಂ. ಇದೆ. ಮುಟ್ಟಗಟ್ಟಿ, ಕಾರಿಕಟ್ಟಿ, ಹೊಂಡದಕಟ್ಟಿ, ಜಿಗಳಿಕಟ್ಟಿ ಎಂಬವು ಪ್ರಮುಖವಾದವು. ಊರ ಸಮೀಪದಲ್ಲಿ ನಾಗರಹಳ್ಳವಿದ್ದು ಮಳೆಗಾಲದಲ್ಲಿ ತುಂಬಿಹರಿಯುತ್ತದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೭೫೨.೬೦ ಹೆಕ್ಟೇರ್. ಗೋವಿನಜೋಳ, ಹತ್ತಿ, ಭತ್ತ ಪ್ರಧಾನ ಬೆಳೆಗಳಾಗಿವೆ. ಹೆಸರು, ಹುರುಳಿ, ಅಲಸಂದಿ, ತೊಗರಿ, ಉದ್ದು ಉಪಬೆಳೆಗಳು. ತೆಂಗು, ಮಾವು, ಹಲಸು, ಚಿಕ್ಕು, ಪೇರಲ ತೋಟಗಾರಿಕೆ ಬೆಳೆಗಳು.

ಚಿಕ್ಕೆರೂರು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಚಿಕ್ಕೆರೂರು ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಔಟ್‌ಪೋಸ್ಟ್ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೭೫೯೦. ಇದರಲ್ಲಿ ಪುರುಷರು ೩೯೨೬, ಮಹಿಳೆಯರು ೩೬೬೪ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೧೩೬ ಪುರುಷರು, ೧೪೩ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೨೬ ಪುರುಷರು, ೧೨೫ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೩೬೬೪ ಪುರುಷರು, ೩೩೯೬ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೫೪೯೩. ಇದರಲ್ಲಿ ಪುರುಷರು ೩೦೧೨, ಮಹಿಳೆಯರು ೨೬೮೧ ರಷ್ಟು ಇದ್ದಾರೆ.

ಚಿಕ್ಕೇರೂರಿನಲ್ಲಿ ೨೧ ಶಾಸನಗಳು ಹಾಗೂ ೩ ಪ್ರಾಚೀನ ದೇವಾಲಯಗಳು ಕಂಡುಬಂದಿವೆ. ಊರತುಂಬ ಶಾಸನಗಳು, ಭಗ್ನವಿಗ್ರಹಗಳು ಕಂಡುಬಂದರೂ ಪ್ರಕಟಣೆಗೊಂಡ ಶಾಸನ ಒಂದೇ ಒಂದು ಮಾತ್ರ. ಇಲ್ಲಿಯ ಶಾಸನಗಳಲ್ಲಿ ಹೆಚ್ಚಿನವು ದಾನ, ವೀರ, ದೇವಾಲಯ ನಿರ್ಮಾಣಗಳಿಗಾಗಿ ಮೀಸಲಾಗಿವೆ. ೮ ನೇ ಶತಮಾನದ ಒಂದು ಶಾಸನ ಮಾತ್ರ ಗೋಸಾಸ ಕಲ್ಲು ಆಗಿದೆ.

ಇಲ್ಲಿಯ ಬಳರಿ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ೯೫೯ ರ ಶಾಸನವು ಎರಡು ದೃಷ್ಟಿಗಳಿಂದ ಮಹತ್ವ ಪಡೆದುಕೊಂಡಿದೆ. ಮೊದಲನೆಯದಾಗಿ ಅರಸಕ್ಕನೆಂಬ ಮಹಿಳೆ

ನಿತ್ಯ ಒಂದು ಸಟ್ಟುಗ ಮಾತ್ರ ಊಟ ಮಾಡುವ ನೇತು ಹಿಡಿದು ಕ್ರಿ.ಶ. ೯೫೫ ರಲ್ಲಿ ಬಳರಿ ವಿಗ್ರಹ ಸ್ಥಾಪಿಸಿದಳು. ಇದು ಕರ್ನಾಟಕದ ಅತ್ಯಂತ ಪ್ರಾಚೀನ ನಿಂತ ಬಳರಿ ವಿಗ್ರಹವಾಗಿದೆ. ಎರಡನೆಯದಾಗಿ ಕಲ್ಯಾಣ ಚಾಲುಕ್ಯ ದೊರೆ ಮುಂಜರಾಜನ ಮೇಲೆ ಏರಿಹೋಗಿ ಆತನನ್ನು ಸೋಲಿಸಿದ ಸಂಗತಿಯನ್ನೂ ತಿಳಿಸುವ ಕರ್ನಾಟಕದ ಮೊದಲ ಶಾಸನ ಇದೇ ಆಗಿರುವುದರಿಂದ ಇದು ಐತಿಹಾಸಿಕವಾಗಿ ಮಹತ್ವದ ಶಾಸನವಾಗಿದೆ.

ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯನ ರಾಣಿಯರಲ್ಲಿ ಪ್ರಮುಖಳಾದ ಮಲಯವತಿ, ಮಹಾದೇವಿ ಕುರಿತ ಪ್ರಥಮ ಶಾಸನ ಚಿಕ್ಕೇರೂರಿನಲ್ಲಿದೆ. ಇಲ್ಲಿಯ ಅಗ್ರಹಾರವನ್ನು ಅವಳು ಆಳುತ್ತಿದ್ದುದಾಗಿಯೂ ಶಾಸನ ಹೇಳುತ್ತದೆ. ಚಿಕ್ಕೇರೂರು 'ಅನಾದಿ ಅಗ್ರಹಾರ'ವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೦೮೨ರ ಶಾಸನವೊಂದು ಬಿಯಸಸೆಟ್ಟಿ ಎಂಬ ವ್ಯಾಪಾರಿ ಬಿಪೇಶ್ವರ ದೇವಾಲಯವನ್ನು ಜಿನ್ನಿಸೆಟ್ಟಿ ಚನ್ನೇಶ್ವರ ದೇವಾಲಯ(೧೧೨೯)ವನ್ನು ನಿರ್ಮಾಣ ಮಾಡಿದ ವಿಷಯ ತಿಳಿಸುತ್ತದೆ. ಇಲ್ಲಿಯ ಶಾಸನಗಳಿಂದ ಚಿಕ್ಕೇರೂರು ಕಾಳಾಮುಖ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಗಂಗಾ-ಯಮುನಾ ನದಿಗಳ ನಾಡಿನಿಂದ ಇಲ್ಲಿಗೆ ವ್ಯಾಪಾರಕ್ಕೆಂದು ಬಂದು ನೆಲೆಸಿದ ವ್ಯಕ್ತಿ ಬಗೆಗೂ ಒಂದು ಶಾಸನ ದಾಖಲಿಸಿದೆ. ಈ ಜನವೇ ಇಲ್ಲಿಯ ಇಂದಿನ ವೈಶ್ಯರು.

ಚಿಕ್ಕೇರೂರಿನ ಕೆರೆ ಏರಿಯ ಮೇಲೆ ಆಳೆತ್ತರದ ಒಂದು ಭವ್ಯ ಗಣಪತಿ ವಿಗ್ರಹವಿದೆ. ಆದರೆ ಅದು ಭಗ್ನಸ್ಥಿತಿಯಲ್ಲಿದೆ. ಇಂತಹ ಹಲವಾರು ಅವಶೇಷಗಳು ಇಲ್ಲಿ ಕಂಡುಬರುತ್ತದೆ.[೨೯]

ದೊಡ್ಡಕೆರೆ

ಗ್ರಾಮ : ಚಿಕ್ಕೆರೂರು	ತೂಬುಗಳ ಸಂಖ್ಯೆ : ೦೫
ಸರ್ವೆ ನಂ : ೧೯೨	ಕೆರೆಯ ವಿಸ್ತೀರ್ಣ : ೨೭೩ ಎಕರೆ
ಜಲಾವೃತ ಪ್ರದೇಶ : ೧೧೦.೫೬ (mcft)	ಏರಿಯ ಎತ್ತರ : ೫.೫ ಅಡಿ
ಏರಿಯ ಉದ್ದ : ೧೫೦ ಅಡಿ	ಅಚ್ಚುಕಟ್ಟು ಪ್ರದೇಶ : ೧೪೨.೨೩ ಹೆ.

ಚಿಕ್ಕೆರೂರಿನ ಈ ದೊಡ್ಡ ಕೆರೆಯು ಊರಿನ ಎಡಗಡೆಯ ಅಂಚಿನಲ್ಲಿದೆ. ಹಿರೇಕೆರೂರಿನ ಕೆರೆಯನ್ನು ಬಿಟ್ಟರೆ ನಂತರದ ಸ್ಥಾನವನ್ನು ಈ ಕೆರೆ ತುಂಬಿದೆ. ಹಿರಿಕೆರೆಯಿಂದ ಹಿರೇಕೆರೂರು ಎಂದು ಹೆಸರುವಾಸಿಯಾದರೆ ಅದರ ನಂತರ ಎರಡನೇ ದೊಡ್ಡ ಕೆರೆ ಅಂದರೆ ಚಿಕ್ಕ ಕೆರೆ ಎಂದು ನಾಮಕರಣ ಮಾಡುವ ಮೂಲಕ ಚಿಕ್ಕೇರೂರು ಎಂದು ಹೆಸರು ಪ್ರಚಲಿತಕ್ಕೆ ಬಂದಿದೆಯೆಂದು ಅಲ್ಲಿ ದೊರೆತಿರುವ ಶಾಸನಗಳು ಹೇಳುತ್ತವೆ. ಈ ಕೆರೆಯು ನೀರಾವರಿ

ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಕಟ್ಟಿಸಲಾಗಿದೆ. ಹಿರೇಕೆರೂರಿನ ದೊಡ್ಡಕೆರೆಗೆ ಈ ಕೆರೆಯು ಅದರಗುಂಟ ಸಾಗಿದೆ. ಹಿರೇಕೆರೆಯ ನೀರು ಈ ಕೆರೆಗೆ ಬಂದು ಸೇರುತ್ತದೆ. ಮಾರ್ಗಮಧ್ಯದಲ್ಲಿ ಅಲ್ಲಲ್ಲಿ ಅನುಕೂಲವಾಗಲೆಂದು ಕಾಲುವೆಗಳನ್ನು ತೋಡಿಕೊಂಡಿದ್ದಾರೆ. ಈ ಕಾಲುವೆಗಳನ್ನು ಅತ್ಯಂತ ಸುವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಸಿಮೆಂಟು, ಕಬ್ಬಿಣವನ್ನು ಬಳಸಿ ಕಾಲುವೆ ನಿರ್ಮಾಣ ಮಾಡಲಾಗಿದೆ. ಹಾಗೂ ಏರಿಯನ್ನೂ ತುಂಬಾ ಅಚ್ಚುಕಟ್ಟಾಗಿ ನಿರ್ಮಿಸಲಾಗಿದೆ. ಇತ್ತೀಚೆಗೆ ಏರಿಗೆ ಕೆಂಪು ಗೊರಚಿನಿಂದ ತುಂಬಿ ಓಡಾಡಲು ಅನುಕೂಲವಾಗುವಂತೆ ಮಾಡಿದ್ದಾರೆ. ಪ್ರಸ್ತುತ ಕೆರೆಯು ನೀರಿಲ್ಲದೆ ಬರಡಾಗಿ ಕೆರೆಯ ಮಧ್ಯೆ ಅಲ್ಲಲ್ಲಿ ಕಸ-ಕಡ್ಡಿ, ತ್ಯಾಜ್ಯವಸ್ತುಗಳಿಂದ ಮುಳ್ಳು-ಗಿಡಗಂಟಿಗಳು ಬೆಳೆದು ಕೆರೆಯ ಸೌಂದರ್ಯ ಸಂಪೂರ್ಣ ಹಾಳಾಗಿದೆ. ನೀರಾವರಿ ಚಟುವಟಿಕೆಗಳಿಗೆ ಕೆರೆಯನ್ನೇ ನಂಬಿರುವ ಜನತೆ ತದೇಕ ದೃಷ್ಟಿಯಿಂದ ಮೋಡದ ಕಡೆಗೆ ನೋಡುತ್ತಿದ್ದಾರೆ ಮಳೆರಾಯನ ಆಗಮನವನ್ನು ಬಯಸುತ್ತಾ. ಅವರಂದುಕೊಂಡಂತೆ ಮಳೆ ಏನಾದರೂ ಬಂದು ಕೆರೆ ತುಂಬಿದರೆ ಮತ್ತೆಂದಿನಂತೆ ಗ್ರಾಮಜನತೆ ಬಿತ್ತನೆ, ಕೊಯ್ಲು, ಸುಗ್ಗಿಯ ಕಾರ್ಯಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅನುಕೂಲವಾಗುತ್ತದೆ.

ಕೆರೆಯು ಒಟ್ಟು ೫ ತೂಬುಗಳನ್ನು ಹೊಂದಿದ್ದು, ಅವುಗಳು ನಶಿಸಿದ್ದರಿಂದಲೋ ಏನೋ ಈಗ ಹೊಸದಾಗಿ ಅವುಗಳನ್ನು ನವೀಕರಿಸಿದ್ದಾರೆ. ಈ ತೂಬುಗಳು ತುಂಬ ಎತ್ತರವಾಗಿದ್ದು, ಏರಿಗೆ ಸಮನಾಗಿವೆ. ಇವುಗಳನ್ನು ಸಿಮೆಂಟು ಮತ್ತು ಕಬ್ಬಿಣ ಬಳಸಿ ನಿರ್ಮಿಸಲಾಗಿದೆ. ಈ ತೂಬುಗಳ ಮೂಲಕ ಹೊರಗಿನ ಕಾಲುವೆಗಳು ನೀರನ್ನು ತಮ್ಮೆಡೆಗೆ ಆವಕ ಮಾಡಿಕೊಂಡು ನಂತರ ಕೃಷಿಕರು ತಮ್ಮ ತಮ್ಮ ಹೊಲ, ಗದ್ದೆಗಳಿಗೆ ತಿರುಗಿಸಿಕೊಳ್ಳುತ್ತಾರೆ. ಇನ್ನು ಹೂಳಿನ ವಿಷಯಕ್ಕೆ ಬಂದರೆ ಇದುವರೆಗೆ ನೋಡಿದ ಕೆರೆಗಳಿಗೆ ಹೋಲಿಕೆ ಮಾಡಿದರೆ ಈ ಕೆರೆಯಲ್ಲಿ ಹೂಳು ತುಂಬ ಕಡಿಮೆ. ಈ ಮೊದಲು ಕೆರೆಯಲ್ಲಿ ಹೂಳು ತೆಗೆಸುವ ಕಾರ್ಯವನ್ನು ಹಮ್ಮಿಕೊಂಡಿರಬೇಕು. ಹಾಗಾಗಿ ಹೂಳಿನ ಪ್ರಮಾಣ ಕಡಿಮೆ ಇದೆ. ಆದರೂ ಕೆರೆಯ ಅಂಚಿನ ಭಾಗದಲ್ಲಿ ಜೆಸಿಬಿಯಿಂದ ಈಗಲೂ ಹೂಳು ಎತ್ತುವ ಕಾರ್ಯ ನಿರಂತರವಾಗಿ ಸಾಗಿದೆ.

ಒಟ್ಟಾರೆಯಾಗಿ ಉಳಿದ ಕೆರೆಗಳಿಗೆ ಹೋಲಿಸಿದರೆ ಸ್ವಲ್ಪಮಟ್ಟಿಗೆ ಸುಸ್ಥಿತಿಯಲ್ಲಿರುವ ಕೆರೆಯೆಂದರೆ ಇದೊಂದೆ ಎನ್ನಬಹುದು. ಇದನ್ನು ಹೊರತುಪಡಿಸಿ ಇನ್ನೂ ಕೆರೆಯನ್ನು ಅಭಿವೃದ್ಧಿ ಮಾಡುವ ಅಗತ್ಯತೆ ಇದೆ.

೧೪. ಸಾತೇನಹಳ್ಳಿ

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ೧೨೦೩, ೧೨೦೪ ರ ಶಾಸನಗಳಲ್ಲಿ ಕ್ರಮವಾಗಿ 'ಕೊಲ್ಲಿಗೊಡ್ಡೆ' 'ಸಾತೆಯನಹಳ್ಳಿ' ೧೬ ನೇ ಶತಮಾನದ ಶಾಸನದಲ್ಲಿ 'ಸಾತೇನಹಳ್ಳಿ' ಎಂಬ ಪ್ರಾಚೀನ ಹೆಸರುಗಳಿದ್ದು, ಈಗ

'ಸಾತೇನಹಳ್ಳಿ'ಯಾಗಿ ರೂಢಿಯಲ್ಲಿದೆ. 'ಸಾತೇಯ' ಎಂಬುದು ಶಾಂತಯ್ಯ ಹೆಸರಿನ ಗ್ರಾಮ್ಯರೂಪ. ಆದ್ದರಿಂದ 'ಶಾಂತಯ್ಯ'ನೆಂಬ ಓರ್ವ ವೀರಶೈವ ಸ್ವಾಮಿಯ ಹೆಸರಿನಲ್ಲಿ ಈ ಊರು ನಾಮಕರಕಣಗೊಂಡಿದೆ. ಅದೇ ಹೆಸರೇ ಗ್ರಾಮದ ಆಂಜನೇಯ ಸ್ವಾಮಿಗೂ ನಾಮಕರಣ (ಶಾಂತೇಶ) ಮಾಡಲಾಗಿದೆ. ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೭೮೫.೦೬ ಹೆಕ್ಟೇರ. ಕೆಂಪು ಶಿಲೆ ಹೊಂದಿದ್ದು, ಮಸಾರಿ ಮಣ್ಣಿನ ಲಕ್ಷಣ ಹೊಂದಿದೆ. ನೆಲ್ಲಗುಡ್ಡ ಹೊಂದಿದ್ದು, ಸುಮಾರು ೩೩ ಕೆರೆಕಟ್ಟೆಗಳಿವೆ (ಭೋ.ಪಾ.). ಹಾರನಕಟ್ಟೆ, ಅಗಸಿಕಟ್ಟೆ, ಕಾಳಿಂಗನ ಕಟ್ಟೆ, ಕರ್ಲಕಟ್ಟೆಕೆರೆ, ಮಡುಗಟ್ಟೆ, ಹಾರನಕಟ್ಟೆ, ಕಮ್ಮಾರಕಟ್ಟೆ, ಕೇಯಾರಕೆರೆ, ಬಸರೀಕಟ್ಟೆ, ಕೆರೆ-ಕಟ್ಟೆಗಳು ಮುಖ್ಯವಾದವು. ದಾಸರಹಳ್ಳದಿಂದ ಹರಿದುಬರುವ ನೀರು ಈ ಕೆರೆಯ ನೀರಿನ ಮೂಲವಾಗಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೬೨೦ ಹೆಕ್ಟೇರ್. ಗೋವಿನಜೋಳ, ಹತ್ತಿ, ಭತ್ತ, ಜೋಳ ಪ್ರಧಾನ ಬೆಳೆಗಳಾಗಿವೆ. ಹೆಸರು, ಹುರುಳಿ, ಅಲಸಂದಿ, ತೊಗರಿ, ಉಪಬೆಳೆಗಳು. ತೆಂಗು, ಮಾವು, ಹಲಸು, ಚಿಕ್ಕು, ಪೇರಲ ತೋಟಗಾರಿಕೆ ಬೆಳೆಗಳು.

ಸಾತೇನಹಳ್ಳಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ಸಾತೇನಹಳ್ಳಿ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಂಸಬಾವಿ ಪೋಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದೆ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೧೮೮೫. ಇದರಲ್ಲಿ ಪುರುಷರು ೯೫೧, ಮಹಿಳೆಯರು ೯೩೪ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೧೦೨ ಪುರುಷರು, ೧೧೨ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೬೬ ಪುರುಷರು, ೫೬ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೭೮೩ ಪುರುಷರು, ೭೬೬ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೪೧೨. ಇದರಲ್ಲಿ ಪುರುಷರು ೭೪೮, ಮಹಿಳೆಯರು ೬೬೪ ರಷ್ಟು ಇದ್ದಾರೆ.

ಈ ಗ್ರಾಮದಲ್ಲಿ ೧೦ ಶಾಸನಗಳಿದ್ದು, ಅವುಗಳಲ್ಲಿ ೯ ಶಾಸನಗಳು ಪ್ರಕಟವಾಗಿವೆ. ಡಾ॥ ಭೋಜರಾಜ ಪಾಟೀಲರವರು ೩ ಹೊಸ ಶಾಸನಗಳನ್ನು ಗುರುತಿಸಿ ಎರಡು ನಾಗರಖಂಡ-೭೦ ರ ಮಹಾಪ್ರಬಂಧದಲ್ಲಿ ಪ್ರಕಟಿಸಿದ್ದಾರೆ. ಮೊದಲ ಶಾಸನಗಳಲ್ಲಿ ೦೪ ಶಾಸನಗಳು ದಾನನೀಡಿದ ಬಗ್ಗೆ, ೦೩ ವೀರಮರಣದ ಬಗ್ಗೆ ೦೪ ದೇವಾಲಯದಲ್ಲಿ ಕಂಬ ನಿಲ್ಲಿಸಿದರ ಬಗ್ಗೆ ಉಲ್ಲೇಖಿಸುತ್ತವೆ.

ಪ್ರಾಚೀನವಾದ ಹರಿಹರೇಶ್ವರ ದೇವಾಲಯ, ರಾಮಲಿಂಗೇಶ್ವರ, ಶಿವಾಲಿ ಬಸವೇಶ್ವರ, ನಾರಾಯಣ, ಹನುಮಂತ, ಮಾತಂಗೇಶ್ವರಿ, ಗ್ರಾಮದೇವತೆ ಉಡಚಲಮ್ಮ ದೇವಾಲಯಗಳಿವೆ. ಸಾತೇನಹಳ್ಳಿಯಲ್ಲಿ ಈಗಿರುವ ಶಾಸನಗಳಲ್ಲಿ ಕ್ರಿ.ಶ. ೧೧೧೪ ರ ಶಾಸನವೇ ಪ್ರಾಚೀನವಾದುದು. ಆದರೆ ಇವುಗಳಿಗಿಂತ ಪ್ರಾಚೀನವಾದ ರಾಷ್ಟ್ರಕೂಟರ ಕಾಲದ ಹಲವಾರು ಗೋಸಾಸ ಮೇಂಟಿಗಳು ಎರಡು–ಮೂರು ಕಡೆಗಳಲ್ಲಿ ಕಂಡುಬಂದಿವೆ. ಇವು ಬಹುತೇಕ ಲಿಖಿತವಾಗಿದವು. ಇಲ್ಲಿಯ ಶಾಸನಗಳಲ್ಲಿ ಹರಿಹರೇಶ್ವರ ಗುಡಿಯ ಬಲಭಾಗದಲ್ಲಿ ನಿಂತಿರುವ ಕ್ರಿ.ಶ. ೧೨೦೪ರ ಶಾಸನವು ಭವ್ಯವಾದುದಾಗಿದೆ. ಸುಮಾರು ೮ ಅಡಿ ಎತ್ತರ ೩ ಅಡಿ ಅಗಲ ೫–೬ ಅಂಗುಲ ವ್ಯಾಸವುಳ್ಳದ್ದಾಗಿದೆ. ಈ ಊರನ್ನಾಳಿದ ಅಪ್ರತಿಮ ಧೀರ ಮಹಿಳೆ ವೆಣ್ಣೆಲೆಶೆಟ್ಟಿ ಕವ್ವೆ ತನ್ನ ಮಗ ಹರಿಹರನ ಸ್ಮರಣಾರ್ಥವಾಗಿ ಇಲ್ಲಿ ದೇವಾಲಯವನ್ನು ಕಟ್ಟಿಸಿ ಶಾಸನವನ್ನು ನಿಲ್ಲಿಸಿದ್ದಾಳೆ. ಅವಳ ಶೂರ–ಧೀರ–ಸಾಹಸಮಯ ವ್ಯಕ್ತಿತ್ವ ಇದರಲ್ಲಿ ಅಡಗಿದೆ.

ಇದುವರೆಗೂ ಈ ಊರಿನ ನಾಲ್ಕು ದೇವಾಲಯಗಳು ಮಾತ್ರ ವರದಿಯಾಗಿವೆ. ಎಲ್ಲವೂ ಕಲ್ಯಾಣ ಚಾಲುಕ್ಯರ ಕಾಲದವೇ ಆಗಿವೆ. ಕೆರೆದಂಡೆಯ ಮೇಲಿರುವ ರಾಮಲಿಂಗೇಶ್ವರ ದೇವಾಲಯವು ಆಕಾರದಲ್ಲಿ ಬೃಹತ್ತಾಗಿದೆ. ಯಾವುದೇ ಕೆತ್ತನೆಗಳಿಲ್ಲ. ದೇವಾಲಯದ ಪಕ್ಕಕ್ಕೆ ಶಾಸನ ಮತ್ತು ವೀರಗಲ್ಲುಗಳಿವೆ. ಇಲ್ಲಿಯ ೬ನೇ ವಿಕ್ರಮಾದಿತ್ಯನ ಒಂದು ಶಾಸನವು (ಕ್ರಿ.ಶ. ೧೧೧೪) ಊರ ಒಡೆಯ ಸಂಕಿಮಯ್ಯನು ಗುಂಡೇಶ್ವರ ದೇವಾಲಯಕ್ಕೆ ಭೂದಾನ ಮಾಡಿದನೆಂದು ಉಲ್ಲೇಖಿಸುತ್ತದೆ. ಈ ಗುಂಡೇಶ್ವರ ದೇವಾಲಯದ ಬಗ್ಗೆ ಹೆಚ್ಚಿನ ಅಧ್ಯಯನವಾಗಬೇಕಿದೆ.

ಸಾತೇನಹಳ್ಳಿಯ ದೇವಾಲಯಗಳಲ್ಲಿ ಶಾಸನೋಕ್ತವಾಗಿರುವ ಎರಡು ದೇವಾಲಯಗಳಿವೆ. ಅವುಗಳಲ್ಲಿ ಹರಿಹರೇಶ್ವರ ದೇವಾಲಯವು ಊರ ಹೊರಗೆ ಇದ್ದರೆ, ಶಂಕರನಾರಾಯಣ ದೇವಾಲಯವು ಕೋಟೆಯ ಬುರುಜಿನಲ್ಲಿದೆ. ಹರಿಹರೇಶ್ವರ ದೇವಾಲಯವನ್ನು 'ವೆಣ್ಣೆಲೆಶೆಟ್ಟಿ' ಕ್ರಿ.ಶ. ೧೨೦೪ ರಲ್ಲಿ ಕಟ್ಟಿಸಿದರು. ಶಂಕರನಾರಾಯಣ ದೇವಾಲಯವನ್ನು ಬೊಮ್ಮಿಶೆಟ್ಟಿಯು ೧೨೪೧ ರಲ್ಲಿ ನಿರ್ಮಿಸಿದನು.

ಸಾತೇನಹಳ್ಳಿಯ ದೇವಾಲಯಗಳಲ್ಲೆಲ್ಲಾ ಸುಪ್ರಸಿದ್ಧವಾದದ್ದು ಶಾಂತೇಶ್ವರ ದೇವಾಲಯವೆಂದು ಕರೆಯಲ್ಪಡುವ ಆಂಜನೇಯ ಸ್ವಾಮಿಯ ಗುಡಿ. ಈ ದೇವಾಲಯವು ವಿಜಯನಗರ ಕಾಲದಲ್ಲಿ ವ್ಯಾಸರಾಯರ ಗುರುಗಳಿಂದ ಸ್ಥಾಪಿತವಾಯಿತೆಂದು ಹೇಳುತ್ತಾರೆ. ಈ ಶಾಸನ ಹಾಗೂ ದೇವಾಲಯಗಳಲ್ಲದೆ ಊರಲ್ಲಿ ಹಲವು ಭಗ್ನವಾಗಿರುವ ಹಾಗೂ ಬಿಡಿ ವಿಗ್ರಹಗಳು ಕಂಡುಬರುತ್ತವೆ. ಬಿಡಿ ವಿಗ್ರಹಗಳಲ್ಲಿ ಬಳರಿಯ ವಿಗ್ರಹವು ಒಂದಾಗಿದೆ. ಒಟ್ಟಾರೆ ಸಾತೇನಹಳ್ಳಿಯು ಸರ್ವದೃಷ್ಟಿಯಿಂದಲೂ ಐತಿಹಾಸಿಕ ಪ್ರೇಕ್ಷಣೀಯ ಗ್ರಾಮವಾಗಿದೆ.[೩೦]

ಹಿರೇಕೆರೆ

ಗ್ರಾಮ : ಸಾತೇನಹಳ್ಳಿ | ತೂಬುಗಳ ಸಂಖ್ಯೆ : ೦೪
ಸರ್ವೆ ನಂ : ೪೦ | ಕೆರೆಯ ವಿಸ್ತೀರ್ಣ : ೧೮೦ ಎಕರೆ
ಜಲಾವೃತ ಪ್ರದೇಶ : ೩೩.೯೭ (mcft) | ಏರಿಯ ಎತ್ತರ : ೩.೫ ಅಡಿ
ಏರಿಯ ಉದ್ದ : ೪೫.೫ ಅಡಿ | ಅಚ್ಚುಕಟ್ಟು ಪ್ರದೇಶ : ೮೪.೬೦ ಹೆಕ್ಟೇರ್

ಸರ್ವದೃಷ್ಟಿಯಿಂಲೂ ಐತಿಹಾಸಿಕ ಪ್ರೇಕ್ಷಣೀಯ ಗ್ರಾಮವಾಗಿರುವ ಸಾತೇನಹಳ್ಳಿಯಲ್ಲಿ ದೊಡ್ಡ ಪ್ರಮಾಣದಲ್ಲಿರುವ ಒಂದೇ ಒಂದು ಕೆರೆಯೆಂದರೆ ಅದೇ ಹಿರೇಕೆರೆ. ಅನೇಕ ಶಾಸನಗಳನ್ನು, ದೇವಾಲಯಗಳನ್ನು ಹೊಂದಿರುವ ಈ ಗ್ರಾಮದಲ್ಲಿ ಕೆರೆಗಳನ್ನು ಅಷ್ಟೇ ಪ್ರಮಾಣದಲ್ಲಿ ಹೊಂದಿದೆ. ಈ ಕೆರೆಯು ಶಾಸನಗಳು ಇದ್ದ ಕಾಲಕ್ಕೆ ಇದ್ದಿರಬಹುದು. ಆಗಿನವಧಿಯಲ್ಲಿ ಕೆರೆಯೇ ಮೂಲಾಧಾರವಾಗಿದ್ದರಿಂದ ಕೆರೆಯ ನಿರ್ಮಾಣ ಅತಿ ಅವಶ್ಯಕವಾಗಿದ್ದಿತು. ನೀರಾವರಿಯನ್ನೇ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ನಿರ್ಮಿತವಾದ ಕೆರೆಗಳಲ್ಲಿ ಈ ಹಿರೇಕೆರೆಯೂ ಒಂದು. ಪ್ರಸ್ತುತ ಕೆರೆಯು ಬತ್ತದೇ ಸ್ವಲ್ಪ ಪ್ರಮಾಣದಲ್ಲಿಯಾದರೂ ತನ್ನೊಡಲಲ್ಲಿ ಗಂಗೆಯನ್ನು ಉಳಿಸಿಕೊಂಡಿದೆ. ಕೃಷಿ ಚಟುವಟಿಕೆಗಳಿಗಲ್ಲದಿದ್ದರೂ ಪಶು, ಪಕ್ಷಿಗಳ ದಾಹ ತೀರಿಸಲು ಕೆರೆಯಲ್ಲಿ ಇಷ್ಟು ನೀರಿರುವುದು ಸಂತಸದ ವಿಷಯ. ಕೆರೆಯ ಏರಿಯ ಕೆಳಭಾಗದಲ್ಲಿ ಕೃಷಿಕರು ಕೆರೆಯಿಂದ ನೀರು ಹಾಯಿಸಿಕೊಳ್ಳಲು ಅನುಕೂಲವಾಗಲೆಂದು ಕಾಲುವೆ ವ್ಯವಸ್ಥೆಯನ್ನೂ ಕೂಡ ಅಷ್ಟೆ ಅಚ್ಚುಕಟ್ಟಿನಿಂದ ನಿರ್ಮಿಸಿದ್ದಾರೆ. ಕೆರೆಯ ಆಳ ಅದರ ವಿಸ್ತೀರ್ಣಕ್ಕೆ ಹೋಲಿಸಿದರೆ ತುಂಬ ಕಡಿಮೆ ಇದೆ. ಜೊತೆಗೆ ಏರಿಯ ಮಧ್ಯೆ ಅಲ್ಲಲ್ಲಿ ಕೆರೆಗೆ ಇಳಿದು ಹತ್ತಲು ಸೋಪಾನಗಳ ವ್ಯವಸ್ಥೆಯನ್ನೂ ಮಾಡಲಾಗಿದೆ. ಕಾಲುವೆ ಮತ್ತು ಸೋಪಾನಗಳು ಎರಡೂ ಸಿಮೆಂಟಿನಿಂದ ಮಾಡಿದವುಗಳಾಗಿವೆ.

ಹಿರೇಕೆರೆಯು ಒಟ್ಟು ೪ ತೂಬುಗಳನ್ನು ಹೊಂದಿದೆ. ತೂಬುಗಳು ಅಲ್ಪಮಟ್ಟಿಗೆ ಹೊಸತೆನಿಸಿದರೂ ಅವು ಹಳೆಯವೇ. ಇನ್ನೂ ಅವು ಆಧುನಿಕ ನವೀಕರಣಕ್ಕೆ ತಮ್ಮನ್ನು ತೆರೆದುಕೊಂಡಿಲ್ಲವೆಂದೇ ಹೇಳಬಹುದು. ಏಕೆಂದರೆ ಕೆರೆಯ ಆಳವನ್ನು ಗಮನಿಸಿದರೆ ಹೂಳನ್ನೇ ಸರಿಯಾಗಿ ತೆಗೆಯುವ ಕಾರ್ಯವಾಗಿಲ್ಲವೆಂದರೆ ಇನ್ನು ತೂಬುಗಳದು ಹೇಳತೀರದು. ಮೊದಲೇ ಹೇಳಿದಂತೆ ಹೂಳು ಕೆರೆಯ ತುಂಬೆಲ್ಲ ಹೆಚ್ಚಾಗಿರುವುದರಿಂದ ಕೆರೆಯ ಆಳ ಕಡಿಮೆಯಾಗುತ್ತಾ ಬಂದಿದೆ. ಈ ನಿಟ್ಟಿನಲ್ಲಿ ವಿಚಾರಿಸುವುದಾದರೆ ಆಗಬೇಕಾದ ನವೀಕರಣ, ಅಭಿವೃದ್ಧಿ ಕಾರ್ಯಗಳು ಸಾಗಬೇಕಿದೆ.

೧೫. ಕಡೂರು

ಹಿರೇಕೆರೂರು ತಾಲೂಕು ರಟ್ಟೀಹಳ್ಳಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ತಾಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಕಡೂರು ಗುಡ್ಡಗಳ ಸಾಲಿನ ಎಡಭಾಗದಲ್ಲಿ ಗುಡ್ಡದ ಅಡಿಯಲ್ಲಿದೆ. ಗ್ರಾಮದಲ್ಲಿ ಕ್ರಿ.ಶ. ೧೦೭೩ರ ಒಂದು ಶಾಸನದಲ್ಲಿ 'ಕಡವೂರು' ಎಂದು ಐದು ಬಾರಿ ಉಲ್ಲೇಖಗೊಂಡಿದೆ. ಇದಲ್ಲದೆ ಪೌರಾಣಿಕ ಕಥೆಯೊಂದರಲ್ಲಿ ಗ್ರಾಮವನ್ನು ಕುರಿತು ವಿವರಿಸುತ್ತದೆ. ಶಾಸನವೊಂದರಲ್ಲಿ 'ಕಡವೂರು' ಎಂದು ಉಲ್ಲೇಖವಾಗಿದೆ. 'ಕಡ' ಎಂದರೆ ಜಲಾಶಯದ ದಂಡೆ. ಗುಡ್ಡದ ಅಡಿಯಲ್ಲಿರುವ ಈ ಪ್ರದೇಶದಲ್ಲಿ ಅಂತರ್ಜಲದ ಝರಿಗಳು ಚಾಚಿಕೊಂಡಿವೆ. ಆದ್ದರಿಂದ ಕಡವೂರು>ಕಡೂರು ಎಂದರೆ ಅಂತರ್ಜಲದ ಸಮೃದ್ಧತೆ ಹೊಂದಿದ ಊರು ಎಂದರ್ಥ. ಭೌಗೋಳಿಕ ವಿಸ್ತೀರ್ಣ ೪೮೯೨.೩ ಎಕರೆ ಗುಂಟೆ. ಭೂಗರ್ಭವು ಕಪ್ಪು ಮತ್ತು ಗಟ್ಟಿ ಶಿಲೆಯಿಂದ ಕೂಡಿದ್ದು, ಮಸಾರಿ, ಎರೆ ಮಣ್ಣಿನ ಲಕ್ಷಣ ಹೊಂದಿದೆ. ಊರಿನ ದಕ್ಷಿಣಕ್ಕೆ ಬೆಟ್ಟಮಲ್ಲೇಶ್ವರ ಗುಡ್ಡವಿದೆ. ತುಂಬುಕೆರೆ, ಸಣ್ಣಕೆರೆ, ಕೊಪ್ಪ ಕೆರೆಗಳು ಇವೆ. ದಾಸನಹಳ್ಳಿ, ಕುರುವಡ್ಡನ ಹಳ್ಳ, ಮಸೂತಿಕೆರೆ ಹಳ್ಳ ಇವೆ. ದುರ್ಗಮ್ಮನ ಕಟ್ಟೆ ಮತ್ತು ಸೊಪ್ಪಿನ ಕಟ್ಟೆ ಇವೆ. ಸಾಮಾಜಿಕ ಅರಣ್ಯ ಪ್ರದೇಶವಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೧೩೨೮ ಹೆಕ್ಟೇರ್. ಗೋವಿನಜೋಳ, ಹತ್ತಿ, ಮೆಣಸಿನಕಾಯಿ ಪ್ರಧಾನ ಬೆಳೆಗಳಾಗಿವೆ. ಸೂರ್ಯಕಾಂತಿ, ಹೈಬ್ರೀಡ್ ಜೋಳ, ಶೇಂಗಾ ಉಪಬೆಳೆಗಳು. ಬಾಳೆ, ಕಬ್ಬು, ತೆಂಗು ತೋಟಗಾರಿಕೆ ಬೆಳೆಗಳು. ರೇಷ್ಮೆ ಸಹ ಬೆಳೆಯುತ್ತಾರೆ. ತುಂಗಾ ಮೇಲ್ದಂಡೆ ಕಾಲುವೆಯಿಂದ ನೀರಾವರಿ ಸೌಲಭ್ಯ ಉಂಟಾಗಿದೆ.

ಕಡೂರು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಗೆ ಸೇರಿದ್ದು, ಸ್ವತಂತ್ರ ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ರಟ್ಟೀಹಳ್ಳಿ ಪೋಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದೆ ನಳಗಳ ಮೂಲಕ ಕುಡಿಯುವ ನೀರು ಪೂರೈಕೆಯಾಗುತ್ತದೆ.

೨೦೧೧ ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೪೧೦೩. ಇದರಲ್ಲಿ ಪುರುಷರು ೨೦೯೩, ಮಹಿಳೆಯರು ೨೦೧೦ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೨೨೬ ಪುರುಷರು, ೨೧೫ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೩೭೭ ಪುರುಷರು, ೩೭೮ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೧೪೯೦ ಪುರುಷರು, ೧೪೧೭ ಮಹಿಳೆಯರು ಇದ್ದಾರೆ. ಒಟ್ಟು

ಸಾಕ್ಷರತಾ ಪ್ರಮಾಣ ೨೮೯. ಇದರಲ್ಲಿ ಪುರುಷರು ೧೫೬೮, ಮಹಿಳೆಯರು ೧೨೩೧ ರಷ್ಟು ಇದ್ದಾರೆ.

ಈ ಗ್ರಾಮದಲ್ಲಿ ಒಟ್ಟು ನಾಲ್ಕು ಶಾಸನಗಳು ಬೆಳಕಿಗೆ ಬಂದಿದ್ದು, ಅವುಗಳು ಕ್ರಿ.ಶ. ೧೧-೧೫ ನೇ ಶತಮಾನಕ್ಕೆ ಸಂಬಂಧಿಸಿದ ಶಾಸನಗಳಾಗಿವೆ. ಇವುಗಳಲ್ಲಿ ಕ್ರಿ.ಶ. ೧೦೭೩ ರ ಶಾಸನವು ಅತ್ಯಂತ ಪ್ರಾಚೀನವಾಗಿದ್ದು, ಇದರಲ್ಲಿ ಈ ಊರ ಹೆಸರು ಕಡವೂರು ಎಂದು ವರ್ಣಿತವಾಗಿದೆ. ಅಲ್ಲದೇ ಈ ಬಗೆಗೆ ಶಾಸನವು ಪೌರಾಣಿಕ ಕಥೆಯನ್ನು ಹೇಳುತ್ತದೆ. ಜಮದಗ್ನಿಯ ಮಗ ಪರಶುರಾಮನು ತನ್ನ ತಂದೆಯನ್ನು ಹತ್ಯೆ ಮಾಡಿದ ಕ್ಷತ್ರಿಯ ಅರಸ ಕಾರ್ತ್ಯ ವೀರಾರ್ಜುನನ ಸಹಸ್ರ ತೋಳುಗಳನ್ನು ಇಲ್ಲಿಯೇ ಕಡಿದು ಹಾಕಿದನಂತೆ. ಹೀಗೆ ತೋಳು ಕಡಿದಿದ್ದರಿಂದ ಕಡವೂರು > ಕಡವೂರು ಎಂದು ಹೆಸರಾಯಿತೆಂಬ ಅಭಿಪ್ರಾಯವಿದೆ. ಕ್ರಿ.ಶ. ೧೨೮೮ ಶಾಸನವು ಯುದ್ಧ ಮರಣದ ಬಗ್ಗೆ ತಿಳಿಸುತ್ತದೆ. ವಿಯಜನಗರದ ಕ್ರಿ.ಶ. ೧೪೨೯ರ ಶಾಸನವು ನಾಗರಸನ ಯುದ್ಧ ಮರಣದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. ೧೧ ನೇ ಶತಮಾನದ ಶಾಸನವು ತೃಟಿತವಾಗಿದೆ. ಈ ಗ್ರಾಮದ ಉತ್ತರಕ್ಕೆ ಇರುವ ಹೊಂಡದ ಪಕ್ಕದಲ್ಲಿ ಈಶ್ವರ ದೇವಾಲಯವಿದೆ. ಇದು ಕ್ರಿ.ಶ. ಸುಮಾರು ೧೨-೧೩ ನೇ ಶತಮಾನಕ್ಕೆ ಸೇರಿದ್ದು, ಹೊಯ್ಸಳ-ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಇದು ತ್ರಿಕೂಟ ದೇವಾಲಯವಾಗಿದ್ದು, ಪೂರ್ವಾಭಿಮುಖವಾಗಿರುವ ಗರ್ಭಗೃಹಕ್ಕೆ ಮಾತ್ರ ಅಂತರಾಳವಿದೆ. ಮೂರು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ನವರಂಗವಿದೆ. ಗರ್ಭಗೃಹದಲ್ಲಿ ಲಿಂಗವಿದೆ. ದಕ್ಷಿಣದ ಗರ್ಭಗೃಹದಲ್ಲಿ ಬ್ರಹ್ಮಲಿಂಗೇಶ್ವರನಿದ್ದು, ನವರಂಗದಲ್ಲಿ ನಂದಿ ಮತ್ತು ಮಹಿಷಮರ್ಧಿನಿ ಶಿಲ್ಪಗಳಿವೆ. ಮುಖ್ಯ ಗರ್ಭದಲ್ಲಿ ನಾಲ್ಕು ಕಂಬಗಳು ಭುವನೇಶ್ವರಿಯನ್ನು ಹೊತ್ತಿವೆ. ಭುವನೇಶ್ವರಿಯಲ್ಲಿ ತಲೆಕೆಳಗಾದ ತಾವರೆ ಮೊಗ್ಗಿನ ಅಲಂಕಾರವಿದೆ. ಗುಡಿಯ ಮುಂಭಾಗದಲ್ಲಿ ಧ್ವಜಸ್ತಂಭವಿದೆ.[೩೧]

ದೊಡ್ಡಕೆರೆ

ಗ್ರಾಮ : ಕಡೂರು	ತೂಬುಗಳ ಸಂಖ್ಯೆ : ೦
ಸರ್ವೆ ನಂ : ೨೭	ಕೆರೆಯ ವಿಸ್ತೀರ್ಣ : ೫-೬ ಎಕರೆ
ಜಲಾವೃತ ಪ್ರದೇಶ : ೧೫.೨೫ (mcft)	ಏರಿಯ ಎತ್ತರ : ೨.೫ ಅಡಿ
ಏರಿಯ ಉದ್ದ : ೪೫.೫ ಅಡಿ	ಅಚ್ಚುಕಟ್ಟು ಪ್ರದೇಶ : ೨೫.೩೫ ಹೆ.

ಕಡೂರಿನ ಈ ದೊಡ್ಡಕೆರೆಯು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾದ ಈಶ್ವರ ದೇವಾಲಯದ ಹಿಂಭಾಗದಲ್ಲಿದೆ. ಈ ಕೆರೆಯು ಪ್ರಮುಖವಾಗಿ ಗ್ರಾಮಸ್ಥರ ದಿನನಿತ್ಯದ ಕಾರ್ಯಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ. ಹಿಂದೆ ಆಳರಸರೂ ಕೂಡ ದೇವಸ್ಥಾನಕ್ಕೆ ಅನುಕೂಲವಾಗುವಂತೆ ಈ ಕೆರೆಯನ್ನು ನಿರ್ಮಿಸಿರಬಹುದು. ಅದು ಈಗಲೂ ಅದೇ ಉದ್ದೇಶಕ್ಕೆ

ಉಪಯೋಗವಾಗುತ್ತಾ ಬಂದಿದೆ ಎಂಬುದು ವಿಶೇಷ. ಮದುವೆ-ಮುಂಜಿಯಂತಹ ಸಂದರ್ಭದಲ್ಲಿ ಈ ಕೆರೆಗೆ ಬಂದು ಪೂಜೆ-ಪುನಸ್ಕಾರಗಳನ್ನು ಮಾಡಿಕೊಂಡು ಸಿದ್ಧಿ ಪಡೆದುಕೊಳ್ಳುತ್ತಾರೆ. ಕೆರೆಯ ನೀರನ್ನು ಬಳಸಲು ಬಿಟ್ಟು ಇನ್ನಿತರ ಕಾರ್ಯಚಟುವಟಿಕೆಗಳಿಗೆ ಅವಕಾಶವನ್ನಿತ್ತಿಲ್ಲ ಇದುವರೆಗೂ. ಕೆರೆಯ ಮೇಲ್ಭಾಗದಲ್ಲಿ ಮೆಟ್ಟಿಲುಗಳಿದ್ದು, ಮಟ್ಟಿಲುಗಳ ಪಕ್ಕ ಬಸವಣ್ಣನ ಶಿಲ್ಪ ಕಾಣಸಿಗುತ್ತದೆ. ಮಳೆ ಬಂದಂತಹ ಸಂದರ್ಭದಲ್ಲಿ ಕೆರೆಗೆ ಊರ ಆಚೆಯಿರುವ ಗುಡ್ಡದ ಮಾರ್ಗದಿಂದ ನೀರು ಬಂದು ಸೇರುತ್ತದೆ. ಅದಕ್ಕೆ ಇತ್ತೀಚೆಗೆ ಪ್ರತ್ಯೇಕ ಕಾಲುವೆ ವ್ಯವಸ್ಥೆಯನ್ನೂ ಮಾಡಲಾಗಿದೆ. ಇತ್ತೀಚೆಗೆ ಕೆನಾಲ್‌ಗಳಿಂದಲೂ ನೀರು ಬಂದು ಈ ಕೆರೆಗೆ ಸೇರುತ್ತದೆ. ಈ ಕೆರೆಯ ವಿಶೇಷತೆ ಎಂದರೆ ಗ್ರಾಮದ ಯಾವ ಕೆರೆಯಲ್ಲಿ ನೀರಿಲ್ಲದಿದ್ದರೂ ಈ ಕೆರೆಯಲ್ಲಿ ಮಾತ್ರ ನೀರು ಸತತವಾಗಿರುತ್ತದೆ.

ಈ ಕೆರೆಯು ಯಾವುದೇ ರೀತಿಯ ತೂಬಿನ ವ್ಯವಸ್ಥೆಯನ್ನು ಹೊಂದಿಲ್ಲ. ಏಕೆಂದರೆ ಈ ಕೆರೆಯು ನೀರಾವರಿ ಉದ್ದೇಶವನ್ನಿಟ್ಟುಕೊಂಡು ಕಟ್ಟಿಸಿದ್ದಲ್ಲ. ಆದ್ದರಿಂದ ತೂಬುಗಳನ್ನೂ ಕೂಡ ಕಟ್ಟಿಸಿಲ್ಲ. ಕೆರೆಯಿಂದ ನೀರು ಯಾವುದೇ ರೂಪದಲ್ಲೂ ಹೊರಹೋಗುವುದಿಲ್ಲ. ಬದಲಾಗಿ ಆವಕವಾಗಿ ವಿವಿಧ ರೂಪಗಳಿಂದ ಬಂದು ಸೇರುತ್ತದೆ. ಹೂಳಿನ ಪ್ರಮಾಣ ಸ್ವಲ್ಪ ಹೆಚ್ಚಾಗಿಯೇ ಇದೆ ಎಂದು ಹೇಳಬಹುದು. ಇದರಿಂದ ಕೆರೆಯ ಆಳದ ಪ್ರಮಾಣವೂ ಕಡಿಮೆಯಾಗಿದೆ. ಹೂಳನ್ನು ತೆಗೆದು ಮತ್ತಷ್ಟು ನವೀಕರಣಗೊಳಿಸಿದರೆ ಕೆರೆಯು ತನ್ನ ಪ್ರಾಚೀನತೆಯನ್ನು ಉಳಿಸಿಕೊಂಡು ಹೋಗುತ್ತದೆ ಮತ್ತು ಉಳಿಸಿಕೊಂಡು ಹೋಗುವುದೂ ಕೂಡ ನಮ್ಮೆಲ್ಲರ ಆದ್ಯ ಕರ್ತವ್ಯ ಕೂಡ. ಈ ಕುರಿತು ಸರ್ಕಾರದ ಅಧಿಕಾರಿಗಳು ಗಂಭೀರ ಕ್ರಮ ತೆಗೆದುಕೊಳ್ಳುವುದು ಇಂದಿನ ಅಗತ್ಯವಾಗಿದೆ.

೧೬. ಹಂಸಬಾವಿ

ಹಿರೇಕೆರೂರು ತಾಲೂಕು ಹೋಬಳಿ ಕೇಂದ್ರವಾಗಿದೆ. ತಾಲೂಕು ಕೇಂದ್ರದಿಂದ ಉತ್ತರಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಗ್ರಾಮವು ಕ್ರಿ.ಶ. ೧೧೪೪ ಮತ್ತು ೧೧೫೭ ರ ಶಾಸನಗಳಲ್ಲಿ "ತಯ್ಯಲ ಬೇಗೂರು" ಎಂದು ಹೆಸರು ದಾಖಲಾಗಿದೆ. ಗ್ರಾಮದ ಭೌಗೋಳಿಕ ವಿಸ್ತೀರ್ಣ ೧೦೧.೮೪ ಎಕರೆ. ಶಿಲೆಯ ಲಕ್ಷಣ ಬೆಣಚು. ದುರ್ಗಿಕೆರೆ, ತಳವಾರ ಕಟ್ಟೆ, ಚಲವಾದೇರ ಕಟ್ಟೆ, ಕಾಳಮ್ಮನ ಕಟ್ಟೆ ಎಂದು ೩೩ ಕೆರೆ-ಕಟ್ಟೆಗಳಿವೆ. ಗೋಮಾಳವಿದೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗಿದೆ. ಕೃಷಿಭೂಮಿ ವಿಸ್ತೀರ್ಣ ೮೭೫.೮೫ ಹೆಕ್ಟೇರ್. ಮಣ್ಣು ಎರಿ ಮತ್ತು ಮಸಾರಿ. ಗೋವಿನಜೋಳ, ಹತ್ತಿ, ಭತ್ತ ಪ್ರಧಾನ ಬೆಳೆಗಳಾಗಿವೆ. ಬಿಳಿಜೋಳ, ಅಲಸಂದಿ, ಹುರಳಿ, ರಾಗಿ, ಔಡಲ ಉಪಬೆಳೆಗಳು. ಬಾಳೆ, ಮಾವು, ಅಡಿಕೆ, ತೆಂಗು ತೋಟಗಾರಿಕೆ ಬೆಳೆಗಳು. ರೈತರು ಹನಿ ನೀರಾವರಿ ಮತ್ತು

ಪಂಪ್‌ಸೆಟ್ ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಗ್ರಾಮದ ಕೆಲವು ಕೆರೆಗಳಲ್ಲಿ ಮೀನುಗಾರಿಕೆಯಿದೆ.

ಹಂಸಬಾವಿ ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿದ್ದು, ಗ್ರಾಮ ಪಂಚಾಯತಿ ಕೇಂದ್ರವಾಗಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಂಸಬಾವಿ ಪೊಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದೆ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೬೨೫೧. ಇದರಲ್ಲಿ ಪುರುಷರು ೩೧೦೮, ಮಹಿಳೆಯರು ೩೧೪೩ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೨೪೪ ಪುರುಷರು, ೨೮೦ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೧೯೧ ಪುರುಷರು, ೨೦೫ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೨೭೦೮ ಪುರುಷರು, ೨೬೫೮ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೪೯೧೨. ಇದರಲ್ಲಿ ಪುರುಷರು ೨೫೦೭, ಮಹಿಳೆಯರು ೨೪೦೫ ರಷ್ಟು ಇದ್ದಾರೆ.[೨]

ದುರ್ಗಿಕೆರೆ

ಗ್ರಾಮ : ಹಂಸಬಾವಿ | ತೂಬುಗಳ ಸಂಖ್ಯೆ : ೦೨

ಸರ್ವೆ ನಂ : ೧೬ | ಕೆರೆಯ ವಿಸ್ತೀರ್ಣ : ೩೦ ಎ. ೩೦ ಗುಂ.

ಜಲಾವೃತ ಪ್ರದೇಶ : ೧೬.೪೦ (mcft) | ಏರಿಯ ಎತ್ತರ : ೨.೫ ಅಡಿ

ಏರಿಯ ಉದ್ದ : ೪೯.೨೫ ಅಡಿ | ಅಚ್ಚುಕಟ್ಟು ಪ್ರದೇಶ : ೮.೧೯ ಹೆಕ್ಟೇರ್

ಹಂಸಬಾವಿಯಲ್ಲಿಯೇ ಅತ್ಯಂತ ದೊಡ್ಡ ಕೆರೆಯೆಂದರೆ ದುರ್ಗಿಕೆರೆ. ನೀರಾವರಿ ಉದ್ದೇಶದಿಂಲೇ ನಿರ್ಮಿತವಾದ ಕೆರೆ ಇದಾಗಿದೆ. ಕೆರೆಯ ಏರಿಯ ಮೇಲೆ ದುರಗಮ್ಮನ ದೇವಸ್ಥಾನವಿರುವುದರಿಂದ ಈ ಕೆರೆಗೆ ದುರ್ಗಿ ಕೆರೆ ಎಂದು ಕರೆಯಲಾಗಿದೆ. ಪ್ರಸ್ತುತ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಕೆರೆಯಲ್ಲಿ ನೀರಿದೆ. ಮಳೆಯ ಅಭಾವದಿಂದ ಬಹುತೇಕ ಕೆರೆಯು ಬತ್ತಿ ಹೋಗಿದೆ. ಪಕ್ಕದ ಹೊಲ, ಗದ್ದೆಗಳಿಗೆ ನೀರನ್ನು ಹಾಯಿಸಿಕೊಳ್ಳಲು ಕಾಲುವೆ ವ್ಯವಸ್ಥೆಯನ್ನೂ ಮಾಡಲಾಗಿದೆ. ಕಾಲುವೆಗಳು ತುಂಬ ಅಚ್ಚುಕಟ್ಟಾಗಿದ್ದು, ಸಿಮೆಂಟಿನಿಂದ ನಿರ್ಮಿತವಾದವುಗಳಾಗಿವೆ. ಏರಿಯ ಮಧ್ಯೆ ಅಲ್ಲಲ್ಲಿ ಕೆರೆಗೆ ಇಳಿಯಲು, ಹತ್ತಲು ಮೆಟ್ಟಿಲುಗಳ ವ್ಯವಸ್ಥೆ ಇದೆ. ಕೆರೆಯು ಬತ್ತಿರುವುದರಿಮದ ಕೆರೆಯ ತುಂಬ ಕಸ-ಕಡ್ಡಿ ಬೆಳೆದು ಬೀಳಾದಂತೆ ಕಾಣುತ್ತದೆ. ಕೆರೆಯ

ವಿಸ್ತೀರ್ಣ ಮೊದಲಿನಂತೆಯೇ ಇಲ್ಲ ಅಂದರೆ ಕಾಲಕ್ರಮೇಣ ಕೆರೆಯ ವಿಸ್ತೀರ್ಣ ಕಡಿಮೆಯಾಗುತ್ತ ಬರುತ್ತಿದೆ. ಇದಕ್ಕೆ ಕಾರಣವೆಂದರೆ ಗ್ರಾಮದಲ್ಲಿನ ಕೆಲವರು ಕೆರೆಯ ಭಾಗವನ್ನು ದಿನದಿಂದ ದಿನಕ್ಕೆ ಒತ್ತುವರಿ ಮಾಡಿಕೊಳ್ಳುತ್ತಾ ಬರುತ್ತಿದ್ದಾರೆ. ಇದು ಹೀಗೆ ಮುಂದುವರಿದರೆ ಆ ಭಾಗದಲ್ಲಿ ಕೆರೆ ಇತ್ತು ಎಂದು ಹೇಳಲು ಯಾವ ಕುರುಹೂ ಇರುವುದಿಲ್ಲ. ಆದ್ದರಿಂದ ಅಧಿಕಾರಿಗಳು, ಊರಿನ ಮುಖಂಡರು ಇದಕ್ಕೆ ಪರಿಹಾರವಾಗಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಕೆರೆಯಿಂದ ಮರಳಿ ಬರುವಾಗ ಬಲಗಡೆಗೆ ಒಂದು ಸಣ್ಣ ಹಸಿರು ಹೊಂಡ ಕಂಡುಬರುತ್ತದೆ. ಅದಕ್ಕೆ ಗ್ರಾಮಸ್ಥರು 'ಹಂಸಬಾವಿ' ಎಂದು ಕರೆಯುತ್ತಾರೆ. ಏಕೆಂದರೆ ಈ ಹೊಂಡದಲ್ಲಿ ಯಾವಾಗಲೂ ಹಂಸಗಳು ಬಂದು ಕೂರುತ್ತಿದ್ದ, ಜೀವಿಸುತ್ತಿದ್ದ ಕಾರಣಕ್ಕಾಗಿ. ಹಾಗೂ ಊರ ಮಧ್ಯದಲ್ಲಿ ಗಚ್ಚಿನ ಬಾವಿ ಎಂದು ಕರೆಯುವ ಮತ್ತೊಂದು ಬಾವಿ ಇದೆ. ಇದು ನಿರಂತರವಾಗಿ ಗ್ರಾಮಕ್ಕೆ ನೀರೊದಗಿಸುವ ಏಕೈಕ ಬಾವಿಯಾಗಿದೆಯಂತೆ. ಇದರ ಇನ್ನೊಂದು ವಿಶೇಷತೆಯೇನೆಂದರೆ ಈ ಬಾವಿಯೊಳಗೆ ಮತ್ತೆ ಮೂರು ಚಿಕ್ಕ ಬಾವಿಗಳಿವೆ. ಮಳೆ ಕೈಕೊಟ್ಟು ಬರಗಾಲ ಬಂದರೂ ಕೂಡ ಈ ಬಾವಿಯಲ್ಲಿ ಮಾತ್ರ ನೀರು ಯಾವ ಕಾಲಕ್ಕೂ ಬತ್ತದೇ ಇಡೀ ಗ್ರಾಮವನ್ನೇ ಸಲಹುವ ಶಕ್ತಿ ಈ ಬಾವಿಗಿದೆ ಎಂಬುದು ಕ್ಷೇತ್ರಕಾರ್ಯ ಕೈಗೊಂಡಾಗ ಗ್ರಾಮಸ್ಥರು, ಪಂಚಾಯತಿ ಅಧಿಕಾರಿಗಳು ತಿಳಿಸಿದ ಮಾಹಿತಿಯಾಗಿದೆ. ಈ ಬಾವಿಯು ಸುಮಾರು ೬೦-೭೦ ಅಡಿ ಆಳವಾಗಿದೆ. ಇದರಲ್ಲಿರುವ ನೀರು ಬಹು ಸಿಹಿಯಾಗಿದ್ದು, ತಿಳಿನೀರಾಗಿದೆ.

ಈ ಕೆರೆಯು ೨ ತೂಬುಗಳನ್ನು ಹೊಂದಿದ್ದು, ಇವು ಕಟ್ಟಿಗೆಯಿಂದ ಮಾಡಿದುದಾಗಿವೆ. ಕೃಷಿಕರ ನಿರಾವರಿ ಚಟುವಟಿಕೆಗಳಲ್ಲಿ ಈ ತೂಬುಗಳು ಪ್ರಮುಖ ಪಾತ್ರ ವಹಿಸುತ್ತವೆ. ಏಕೆಂದರೆ ಕಾಲುವೆಗಳಿಗೂ ಮತ್ತು ತೂಬುಗಳಿಗೂ ನಿಕಟ ಸಂಬಂಧವಿರುತ್ತದೆ. ತೂಬುಗಳ ಮೂಲಕ ನೀರನ್ನು ಹೊರಬಿಟ್ಟ ನಂತರ ಆ ನೀರನ್ನು ಕಾಲುವೆಗಳ ಮುಖಾಂತರ ರೈತರು ತಮ್ಮ ತಮ್ಮ ಹೊಲ, ಗದ್ದೆಗಳಿಗೆ ನೀರನ್ನು ಹಾಯಿಸಿಕೊಳ್ಳುತ್ತಾರೆ. ಇನ್ನು ಹೂಳಿನ ವಿಷಯಕ್ಕೆ ಬಂದರೆ ಕೆರೆಯಲ್ಲಿ ಹೂಳಿನ ಪ್ರಮಾಣ ತುಂಬ ಹೆಚ್ಚಾಗಿದೆ. ಇದರಿಂದ ಒಮ್ಮಿಂದೊಮ್ಮಲೆ ಕೆರೆಯ ಆಳವೂ ಕಡಿಮೆಯಾಗಿದೆ. ಆದ್ದರಿಂದ ತುರ್ತಾಗಿ ಗ್ರಾಮದ ಮುಖಂಡರು, ಅಧಿಕಾರಿಗಳು ಸೇರಿಕೊಂಡು ಕೆರೆಯ ಹೂಳನ್ನು ತೆಗೆಸುವ ಕಾರ್ಯವನ್ನು ಆದಷ್ಟು ಬೇಗ ಕೈಗೊಳ್ಳಬೇಕಾಗಿದೆ. ಇಲ್ಲದೇ ಹೋದರೆ ಕೆರೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗುತ್ತದೆ.

ಹಂಸಬಾವಿಯಲ್ಲಿ ಕಂಡುಬರುವ ಆನೆಕೆರೆ ಮತ್ತು ದುರ್ಗಿಕೆರೆಗಳಲ್ಲಿ ಮನುಷ್ಯನನ್ನು ಬಲಿ ತೆಗೆದುಕೊಳ್ಳುವ ಪದ್ಧತಿ ಹಿಂದಿನಿಂದಲೂ ನಡೆದು ಬಂದಿದೆ. ಕೆರೆಗಳು ತುಂಬಿದಾಗ ಪ್ರತಿವರ್ಷ ಒಂದು ನರಬಲಿಯನ್ನು ತೆಗೆದುಕೊಳ್ಳುತ್ತಿತ್ತಂತೆ. ಇದಕ್ಕೆ ಕಾರಣಗಳು ಏನು ಎಂದು ತಿಳಿದು ಬಂದಿಲ್ಲ. ನಿಸರ್ಗಕ್ಕೆ ವಿರುದ್ಧವಾದ ಈ ರೀತಿಯ ಪದ್ಧತಿಗಳು ಅದು ಹೇಗೆ

ಆಚರಿಸಲ್ಪಡುತ್ತವೆ ಎಂಬುದೇ ಆಶ್ಚರ್ಯದ ಸಂಗತಿಯಾಗಿದೆ. ಈ ಕುರಿತು ಮತ್ತಷ್ಟು ಅಧ್ಯಯನಗಳಾಗಬೇಕಿದೆ.

೧೭. ಬೆಟಕೇರೂರು

ಹಿರೇಕೆರೂರು ತಾಲೂಕು ಹಂಸಬಾವಿ ಹೋಬಳಿಗೆ ಸೇರಿದ ಜನವಸತಿ ಗ್ರಾಮ ಇದಾಗಿದೆ. ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಪೂರ್ವಕ್ಕೆ ದೊಡ್ಡಕೆರೆ ಇದ್ದು, ಸುಮಾರು ೬೦೦ ಎಕರೆ ವ್ಯಾಪಿಸಿದೆ. ಬೆಟ್ಟಸಾಲು ಇದೆ. ಬೆಟ್ಟದ ಎರಡು ಕಡೆಗಳಲ್ಲಿ ಊರಿಗೆ ಹತ್ತಿಕೊಂಡಂತೆ, ದೊಡ್ಡ ಕೆರೆಗಳಿವೆ. ಹಾಗಾಗಿ ಇದು ಬೆಟ್ಟಕೆರೆಗಳಿಂದ ಕೂಡಿದ ಊರು ಬೆಟಕೇರೂರು ಆಗಿದೆ. ಭೂಮಿಯು ಕೆಂಪು ಮತ್ತು ಕರಿ ಮಣ್ಣಿನ ಲಕ್ಷಣ ಹೊಂದಿದೆ. ಊರಿಗೆ ಸುಮಾರು ೧೦ ಎಕರೆಯಷ್ಟು ಅರಣ್ಯವಿದೆ. ಗ್ರಾಮದ ಪಶ್ಚಿಮಕ್ಕೆ ಚಿಕ್ಕೇರಿ ಗುಡ್ಡವಿದೆ. ದೊಡ್ಡ ಕೆರೆಹಳ್ಳ ಎಂದು ಒಂದು ಹಳ್ಳ ಇದೆ. ೧ ಎಕರೆ ೨೭ ಗುಂಟೆಯಿಂದ ೮೯.೦೮ ಎಕರೆಗೆ ವಿಸ್ತಾರ ಹೊಂದಿದೆ. ೧೩ ಕೆರೆಗಳಿವೆ. ಹಂದಿ, ನರಿ, ತೋಳ, ನವಿಲು ಮುಂತಾದ ವನ್ಯಜೀವಿಗಳಿವೆ.

ವಾರ್ಷಿಕ ಸರಾಸರಿ ೫೭೬.೧೬ ಮಿ.ಮೀ. ನಿಂದ ೧೩೦೫.೬ ಮಿ.ಮೀ. ಮಳೆಯಾಗುತ್ತಿದ್ದು, ಹವಾಮಾನ ವೈಪರೀತ್ಯದಿಂದಾಗಿ ಬಿಸಿಲಿನ ತಾಪ ವ್ಯತ್ಯಾಸವಾಗುತ್ತದೆ. ಕೃಷಿಭೂಮಿ ವಿಸ್ತೀರ್ಣ ೮೫೪.೦೦ ಹೆಕ್ಟೇರ್. ಗೋವಿನಜೋಳ ಪ್ರಧಾನ ಬೆಳೆ. ತೊಗರಿ, ಅಲಸಂದಿ ಉಪಬೆಳೆಗಳು. ಬಾಳೆ, ಮಾವು, ಚಿಕ್ಕು ತೋಟಗಾರಿಕೆ ಬೆಳೆಗಳು. ದೊಡ್ಡ ಕೆರೆ ಪೂರ್ವಕ್ಕೆ ಚಿಕ್ಕ ಕೆರೆ ಇದ್ದು ಇವುಗಳಲ್ಲಿ ಗೌರಿ ಹಾಗೂ ಕಾಟ್ಲ ತಳಿಯ ಮೀನುಗಾರಿಕೆ ಇರುತ್ತದೆ. ರೈತರು ಹನಿ ನೀರಾವರಿ ಮತ್ತು ಪಂಪ್‌ಸೆಟ್ ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಬೆಟಕೇರೂರು ಹಾವೇರಿ ಲೋಕಸಭಾ ಕ್ಷೇತ್ರ, ಹಾವೇರಿ ಜಿಲ್ಲಾ ಪಂಚಾಯತಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರ, ಹಿರೇಕೆರೂರ ತಾಲೂಕು ಪಂಚಾಯತಿ ವ್ಯಾಪ್ತಿಯಲ್ಲಿದ್ದು, ಬೆಟಕೇರೂರು ಗ್ರಾಮ ಪಂಚಾಯತಿ ಹೊಂದಿದೆ. ಹಿರೇಕೆರೂರು ತಹಶೀಲ್ದಾರ್ ಕಚೇರಿ, ಹಂಸಬಾವಿ ಪೋಲೀಸ್ ಠಾಣಾ ಸರಹದ್ದಿಗೆ, ಹುಬ್ಬಳ್ಳಿ ವಿದ್ಯುತ್ ನಿಗಮ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಕಿರುನೀರು ಸರಬರಾಜು ಯೋಜನೆ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಂದ ನಳಗಳ ಮೂಲಕ ಕುಡಿಯು ನೀರು ಪೂರೈಕೆಯಾಗುತ್ತದೆ.

೨೦೧೧ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆ ೨೧೫೧. ಇದರಲ್ಲಿ ಪುರುಷರು ೧೦೮೮, ಮಹಿಳೆಯರು ೧೦೬೩ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ ೧೩೭ ಪುರುಷರು, ೧೩೦ ಮಹಿಳೆಯರು, ಪರಿಶಿಷ್ಟ ಪಂಗಡದಲ್ಲಿ ೯೨ ಪುರುಷರು, ೮೬ ಮಹಿಳೆಯರು, ಹಿಂದುಳಿದ ವರ್ಗದಲ್ಲಿ ೯೫೯ ಪುರುಷರು, ೮೪೭ ಮಹಿಳೆಯರು ಇದ್ದಾರೆ. ಒಟ್ಟು ಸಾಕ್ಷರತಾ ಪ್ರಮಾಣ ೧೬೫೦. ಇದರಲ್ಲಿ ಪುರುಷರು ೮೭೨, ಮಹಿಳೆಯರು ೭೭೮ ರಷ್ಟು ಇದ್ದಾರೆ.[೩೩]

ದೊಡ್ಡ ಕೆರೆ

ಗ್ರಾಮ : ಬೆಟಕೇರೂರು | ತೂಬುಗಳ ಸಂಖ್ಯೆ : ೦೨
ಸರ್ವೆ ನಂ : ೪೯ | ಕೆರೆಯ ವಿಸ್ತೀರ್ಣ : ೧೫೦ಎ.
ಜಲಾವೃತ ಪ್ರದೇಶ : ೩೬.೦೮ (mcft) | ಏರಿಯ ಎತ್ತರ : ೪.೫ ಅಡಿ
ಏರಿಯ ಉದ್ದ : ೬೫ ಅಡಿ | ಅಚ್ಚುಕಟ್ಟು ಪ್ರದೇಶ : ೧೪೫.೮೦ ಹೆ.

ಬೆಟಕೇರೂರಿನ ಈ ದೊಡ್ಡಕೆರೆಯು ಒಂದು ವಿಶಿಷ್ಟವಾದ ಕೆರೆಯಾಗಿದೆ. ಏಕೆಂದರೆ ಇದು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಅಂದರೆ ಈ ಕರೆಯನ್ನು 'ಜನಮೇಜಯ' ಅರಸನು ಕಟ್ಟಿಸಿದ ಎಂಬ ಪ್ರತೀತಿ ಇದೆ. ಅದಕ್ಕೆ ಸಂಬಂಧಿಸಿದಂತೆ ಕೆರೆಯ ದಂಡೆ ಮೇಲೆ ಒಂದು ಶಾಸನವೂ ಲಭ್ಯವಾಗಿದೆ. ಆದರೆ ಈ ಶಾಸನದ ಲಿಪಿ ಹಾಳಾಗಿದ್ದರಿಂದ ಇದನ್ನು ಓದಲಾಗಿಲ್ಲ. ಇದರ ಪಕ್ಕ ಒಂದು ಈಶ್ವರ ಶಿಲ್ಪ ಕೂಡ ಕಂಡುಬಂದಿದ್ದು, ಅದಕ್ಕೆ ಚೌಕಾಕಾರವಾಗಿ ದೇವಾಲಯದಂತೆ ರಚನೆ ಮಾಡಿದ್ದಾರೆ. ಈ ಕೆರೆಯು ಗ್ರಾಮದ ಪೂರ್ವಕ್ಕೆ ಕಂಡುಬಂದಿದ್ದು, ೯೦೦ ಎಕರೆ ಭೂಮಿ ವ್ಯಾಪಿಸಿದೆ. ನೀರಾವರಿ ಉದ್ದೇಶಕ್ಕಾಗಿ ನಿರ್ಮಿಸಿರುವ ಪ್ರಮುಖ ಕರೆಯಾಗಿದೆ. ಇದಲ್ಲದೆ ಈ ಕೆರೆಯಲ್ಲಿ ಗೌರಿ ಹಾಗೂ ಕಾಟ್ಲ ತಳಿಯ ಮೀನು ಸಾಕಾಣಿಕೆ ಮಾಡಲಾಗಿದೆ. ಪಕ್ಕದ ಹೊಲ, ಗದ್ದೆಗಳಿಗೆ ನಿರು ಹಾಯಿಸಿಕೊಳ್ಳಲು ಪ್ರತ್ಯೇಕ ಕಾಲುವೆ ವ್ಯವಸ್ಥೆ ಕೂಡ ಕಲ್ಪಿಸಲಾಗಿದೆ.

ದೊಡ್ಡಕೆರೆಯು ಒಟ್ಟು ೦೨ ತೂಬುಗಳನ್ನು ಹೊಂದಿದ್ದು, ಇವು ಈಗ ಅವನತಿಯ ಅಂಚಿನಲ್ಲಿವೆ. ಕಲ್ಲು ಮತ್ತು ಸಿಮೆಂಟಿನಿಂದ ಕಟ್ಟಿದ ತೂಬುಗಳಾಗಿದ್ದರೂ ಅವುಗಳ ಸರಿಯಾದ ನಿರ್ವಹಣೆಯ ಕೊರತೆಯಿಂದಾಗಿ ಅವುಗಳ ಸುತ್ತಮುತ್ತ ಗಿಡ-ಗಂಟಿಗಳೆಲ್ಲ ಬೆಳೆದು ಸಂಪೂರ್ಣವಾಗಿ ಹಾಳಾಗಿವೆ. ಕೆರೆಯ ಹೊರಭಾಗದಲ್ಲಿ ಇರುವ ಕಾಲುವೆಗಳು ತೂಬಿಗೆ ಸಂಪರ್ಕಿಸಿದ್ದು, ಹೊಲ, ಗದ್ದೆಗಳಿಗೆ ನೀರು ಸರಬರಾಜು ಮಾಡುವ ವೇಳೆಯಲ್ಲಿ ಇವೆರೆಡೂ ಕಾರ್ಯನಿರತವಾಗಿರುತ್ತಿದ್ದವು. ಕೆರೆಯಲ್ಲಿ ಹೂಳು ಹೆಚ್ಚಿನ ಪ್ರಮಾಣದಲ್ಲಿ ಆವರಿಸಿರುವುದರಿಂದ ಕೆರೆಯ ಆಳ ಕ್ರಮೇಣ ಕಡಿಮೆಯಾಗಿದೆ. ಜೊತೆಗೆ ಇತ್ತೀಚೆಗೆ ಕೆರೆಯನ್ನು ಒತ್ತುವರಿಯನ್ನೂ ಮಾಡಿಕೊಳ್ಳುತ್ತಿದ್ದರಿಂದ ಕೆರೆಯ ವಿಸ್ತೀರ್ಣ ಕಡಿಮೆಯಾಗುತ್ತ ಬಂದಿದೆ. ಇದು ಹೀಗೆ ಮುಂದುವರಿದರೆ ಕೆರೆಯು ಕ್ರಮೇಣ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಹೆಸರಿಗೂ ಇಲ್ಲದ ಸ್ಥಿತಿ ನಿರ್ಮಾಣವಾಗುವ ಭೀತಿಯಿದೆ. ಆದ್ದರಿಂದ ಸಂಬಂಧಿಸಿದ ಇಲಾಖೆಗಳು ಈ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಂಡು ಕೆರೆಯನ್ನು ಪುನಶ್ಚೇತನಗೊಳಿಸುವುದು ಇಂದಿನ ದಿನಗಳಲ್ಲಿ ತುಂಬ ಅಗತ್ಯ ಮತ್ತು ಅನಿವಾರ್ಯವೆನಿಸಿದೆ

ಮದಗ–ಮಾಸೂರು ಕೆರೆ

ಶಿಕಾರಿಪುರ ತಾಲೂಕಿಗೆ ಹೋಗುವ ಮಾರ್ಗದಲ್ಲಿ ಬಲಭಾಗಕ್ಕೆ ಕಂಡುಬರುವ ಈ ಕೆರೆಯು ತುಂಗಭದ್ರಾ ನದಿಯ ಉಪನದಿಯಾದ ಕುಮದ್ವತಿ ನದಿಗೆ ಅಡ್ಡಲಾಗಿ ಮದಗ ಆಣೆಕಟ್ಟನ್ನು ಸು. ೧೬ನೇ ಶತಮಾನದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಕಟ್ಟಲಾಗಿದೆ. ಇದು ಹಿರೇಕೆರೂರು ತಾಲೂಕಿನ ಮಾಸೂರು ಗ್ರಾಮಕ್ಕೆ ೬.೫ ಕಿ.ಮೀ. ದೂರದಲ್ಲಿದೆ. ಆಣೆಕಟ್ಟೆಯು ಕೆಳ ಅಗಲ ೧೦೪೮ ರಿಂದ ೧,೨೪೮ ಅಡಿಗಳು, ಮೇಲ್ಭಾಗದಲ್ಲಿ ೪೦೦ ರಿಂದ ೬೦೦ ಅಡಿಗಳ ಅಗಲ ಹೊಂದಿದ್ದು, ನದಿಯ ತಳದಿಂದ ಸುಮಾರು ೧೪೦ ಅಡಿಗಳಷ್ಟು ಎತ್ತರವಾಗಿದೆ. ಮೂಲಕೆರೆಯು ಒಡೆದುಹೋಗಿ ಆದಿಲ್‌ಷಾಹಿಗಳ ಕಾಲದಲ್ಲೂ ನಂತರ ೧೮೮೯–೯೦ ರಲ್ಲೂ ದುರಸ್ತಿ ಮಾಡಲಾಗಿದೆ. ಎಡ ಮತ್ತು ಬಲದಂಡೆ ನಾಲೆಗಳು ಒಟ್ಟು ೧೫ ಕಿ.ಮೀ. ದೂರ ನೀರನ್ನು ಸಾಗಿಸುತ್ತವೆ. ಕೆರೆಯಲ್ಲಿ ನೀರು ತುಂಬಿದಾಗ ೧೪೪ ಹೆ. ವಿಸ್ತಾರವಾಗಿರುತ್ತದೆ. ಪಾರ್ಶ್ವ ಕೋಡಿಯುಳ್ಳ ಮಣ್ಣಿನ ಆಣೆಕಟ್ಟೆಯ ಒಟ್ಟು ಉದ್ದ ೧,೮೫೦ ಅಡಿಗಳಾಗಿವೆ. ಈ ಕೆರೆಯ ಒಟ್ಟು ಅಚ್ಚುಕಟ್ಟು ಪ್ರದೇಶವು ೧,೧೩೦ ಹೆ.ಗಳಾಗಿದ್ದು, ೫೩೮ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ. ಈ ಆಣೆಕಟ್ಟೆಯ ಉಪಯುಕ್ತ ಶೇಖರಣೆ ೫೬೭ ದಶಲಕ್ಷ ಘನ ಅಡಿಗಳು; ೧೯೫೦–೫೧ ರಲ್ಲಿ ೨೫೫ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು. ೧೯೩೮ ರಲ್ಲಿ ನಿರ್ಮಿಸಲಾದ ಅಂಜನಾಪುರ ಆಣೆಕಟ್ಟೆಯಿಂದ (ಸುಮಾರು ಮದಗ ಕೆರೆಯ ಮೇಲ್ಭಾಗದ ನದಿಯ ಹರಿವಿನ ೩೬ ಕಿ.ಮೀ. ದೂದಲ್ಲಿ) ಮದಗ ಕೆರೆಯ ಸಮೀಪದವರೆಗೂ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು. ಇವೆರಡೂ ಆಣೆಕಟ್ಟುಗಳ ಮಧ್ಯೆ ಹಲವಾರು ಚಿಕ್ಕ ಕೆರೆಗಳು ಅಸ್ತಿತ್ವದಲ್ಲಿದ್ದವು.[೩೪]

ಕೊಂಚ ಮಲೆನಾಡಿನ ಸೊಬಗನ್ನು ಹೊತ್ತ ಪ್ರಸ್ತುತ ಕೆರೆಯು ನೋಡಲು ತುಂಬಾ ಸುಂದರವಾಗಿದೆ. ಇತ್ತೀಚೆಗೆ ಉದ್ಯಾನವನವನ್ನು ನಿರ್ಮಿಸಿ ಅಚ್ಚುಕಟ್ಟಾದ ಮೆಟ್ಟಿಲುಗಳು, ಬೆಂಚುಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಒಂದು ರೀತಿಯ ಪ್ರೇಕ್ಷಣೀಯ ತಾಣವೂ ಎಂದರೆ ತಪ್ಪಾಗಲಾರದು. ಎಷ್ಟೋ ಪ್ರವಾಸಿಗರು ಮನೋರಂಜನೆಗಾಗಿ ಈ ಕೆರೆಗೆ ಆಗಮಿಸಿ ಕೆರೆಯ ಸೌಂದರ್ಯವನ್ನು ನೋಡಿ ಆನಂದಿಸುವರು.

ಕೆರೆಗಳ ಪುನರುಜ್ಜೀವನ

ಶತಮಾನಗಳ ಹಿಂದೆ ನಮ್ಮ ಹಿರಿಯರು ನಿರ್ಮಿಸಿದ ಕೆರೆಗಳ ಸರಿಯಾದ ಉಸ್ತುವಾರಿ, ದುರಸ್ತಿ ಇಲ್ಲದೆ ಹೂಳು ತುಂಬಿ ಜಲಾನಯನ ಪ್ರದೇಶದ ಬಾಯಿಯೇ ಮುಚ್ಚಿ ಹೋಗಿ ಮೇಲ್ಭಾಗದ ನೆಲ ನಾಶವಾಗಿ ಅನೇಕ ಕೆರೆಗಳ ಒಡ್ಡು, ತೂಬು, ಕೋಡಿ, ಕಾಲುವೆ ಹೀಗೆ ಕೆರೆಯ ಅಂಗಗಳೆಲ್ಲ ಶಿಥಿಲಗೊಂಡಿವೆ. ಇವುಗಳ ಜೀರ್ಣೋದ್ಧಾರ ಅತ್ಯಗತ್ಯ. ಕೆರೆಗಳ ಅಭಿವೃದ್ಧಿ ಎಂದರೆ ಹಳ್ಳಿಗಳ ಅಭಿವೃದ್ಧಿ ಎಂದೇ ಅರ್ಥ. ಬೇರೆ ಬೇರೆ ಯೋಜನೆಗಳಿಗೆ ಹೋಲಿಸಿದಾಗ

ಕೆರೆಗಳ ಅಭಿವೃದ್ಧಿಗೆ ತಗಲುವ ವೆಚ್ಚ ದೊಡ್ಡದೇನಲ್ಲ. ಕೃಷಿ ಉತ್ಪಾದನೆಯೇ ಮುಖ್ಯವಾಗಬೇಕು. ಕೆರೆಗಳು ಜೀವ ಪಡೆಯುವುದರಿಂದ ಕೃಷಿ ಉತ್ಪಾದನೆಯೊಂದೇ ಅಲ್ಲ ಮೀನುಗಾರಿಕೆಯ ಅಭಿವೃದ್ಧಿಗೂ ನೆರವಾಗುತ್ತದೆ. ಕೆರೆಗಳು ತುಂಬಿಕೊಂಡರೆ ಸುತ್ತಮುತ್ತಲ ಪ್ರದೇಶದ ಅಂತರ್ಜಲವೂ ಉತ್ತಮಗೊಂಡು ಬತ್ತಿಹೋಗಿರುವ ಕೊಳವೆ ಬಾವಿಗಳೂ ಮರುಜೀವ ಪಡೆಯುತ್ತವೆ. ಅಲ್ಲದೆ ಕೆರೆಗಳು ತುಂಬಿಕೊಳ್ಳುವುದರಿಂದ ಪರಿಸರವೂ ಉತ್ತಮಗೊಂಡು ಇಡೀ ಗ್ರಾಮವನ್ನು ಆರ್ಥಿಕವಾಗಿ ಸದೃಢಗೊಳಿಸಬಹುದು. ಗ್ರಾಮ ಸಂಸ್ಕೃತಿಯ ಪ್ರತೀಕಗಳಾದ ನಮ್ಮ ಹಳೆಯ ಕೆರೆಗಳನ್ನು ಪುನರುಜ್ಜೀವನಗೊಳಿಸಿ ಅವುಗಳ ನೀರಿನ ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಿ ಕೆರೆಯ ಸದುಪಯೋಗವನ್ನು ಪಡೆದುಕೊಳ್ಳಬಹುದು. ಈ ನಿಟ್ಟಿನಲ್ಲಿ ಕೆರೆಯನ್ನು ಅಭಿವೃದ್ಧಿಪಡಿಸುವುದು ಅಗತ್ಯವಾಗಿದೆ.[೩೫]

ಕೊನೆಟಿಪ್ಪಣಿಗಳು

೧. SII Vol, IV, No. 267

೨. ಕೋಲಾರ್ ಶರಣಬಸಪ್ಪ., ೨೦೧೧, **ಕನಕಗಿರಿ ನಾಯಕರ ನೀರಾವರಿ ವ್ಯವಸ್ಥೆ,** ಪು. ೧೫೩

೩. ಸ್ವಾಮಿ ಲ. ನ., ೨೦೦೯, **ಕೆರೆ-ಕಟ್ಟೆಗಳು,** ಸಿ. ಮಹದೇವ (ಸಂ), ತೋಣ್ಣೂರು, ಪು. ೧೨೯

೪. ಅದೇ

೫. ಅದೇ ಪು. ೧೩೦

೬. CTM Kotraiah, 1995, **Irrigation System Under Vijayanagar Empire,** Page No. 02

೭. ಬೆಳಗೆರೆ ಕೃಷ್ಣಮೂರ್ತಿ., ೨೦೧೧; **ಬೇಸಾಯವ ಮಾಡು,** ಪು. ೩೪

೮. SII Vol – XVIII, NO – 25, Page No. 178 AD – 840

9. SII Vol – XI, P – I, NO – 127

10. SII Vol – XV, P – II, NO – 57

೧೧. ಮೂರ್ತಿ ಎ.ಎನ್., ೧೯೭೬; **ನೀರಾವರಿ,** ಪು. ೨೩

೧೨. ನೀಲತ್ತಹಳ್ಳಿ ಕಸ್ತೂರಿ (ಅನು), **ಕರ್ನಾಟಕದಲ್ಲಿ ಕೆರೆ ನೀರಾವರಿ,** ಪು. ೧೪೮

೧೩. ಎ.ಕ.ಸಂ. ೧೦, ಅರಸೀಕೆರೆ ೨೨೪, ಪು. ೨೭೫

೧೪. ಚೂಡಾಮಣಿ ನಂದಗೋಪಾಲನ್, ೧೯೯೨; **ಗಜಲಕ್ಷ್ಮಿಯ ಸಾಕೇತಿಕ ವಿನ್ಯಾಸ : ಒಂದು ಅಧ್ಯಯನ,** ಇತಿಹಾಸ ದರ್ಶನ ಸಂ. ೭, ಪು. ೪೬-೪೯

೧೫. ದೇವರಕೊಂಡಾರೆಡ್ಡಿ (ಸಂ)., ೨೦೦೬, **ಹಂಪಿ ಸಂಪುಟ** (ಕಲೆ, ಕ್ರೀಡೆ ಮತ್ತು ಕೌಶಲ) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೪೭೦

೧೬. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಪು. ೪೭೦

೧೭. ಹಿರಿಯಣ್ಣ ಅಂಬಳಿಕೆ, ೨೦೧೫; **ಕರ್ನಾಟಕ ಗ್ರಾಮ ಚರಿತ್ರೆ ಕೋಶ, ಹಾವೇರಿ ಜಿಲ್ಲೆ ಭಾಗ-೨,** ಪು. ೨೦೧೨-೨೧೫

೧೮. ಅದೆ ಪು. ೩,೪

೧೯. ಅದೆ ಪು. ೪-೭

೨೦. ಅದೆ ಪು. ೧೨, ೧೩

೨೧. ಅದೆ ಪು. ೧೩-೧೫

೨೨. ಅದೆ ಪು. ೧೭, ೧೮

೨೩. ಅದೆ ಪು. ೨೦-೨೨

೨೪. ಅದೆ ಪು. ೨೪-೨೬

೨೫. ಅದೆ ಪು. ೪೦, ೪೧

೨೬. ಅದೆ ಪು. ೪೭-೪೯

೨೭. ಅದೆ ಪು. ೫೯-೬೧

೨೮. ಅದೆ ಪು. ೬೮-೭೦

೨೯. ಅದೆ ಪು. ೭೪-೭೭

೩೦. ಅದೆ ಪು. ೧೯೬-೧೯೮

೩೧. ಅದೆ ಪು. ೨೬-೨೮

೩೨. ಅದೆ ಪು. ೨೦೪-೨೦೬

೩೩. ಅದೇ ೧೩೧-೧೩೩

೩೪. ಕಾಮತ್ ಸೂರ್ಯನಾಥ, ೧೯೯೫, ಭಾರತದ ಗ್ಯಾಜೆಟಿಯರ್, ಧಾರವಾಡ ಜಿಲ್ಲೆ, ಕರ್ನಾಟಕ ಸರ್ಕಾರ, ಪು. ೩೦೫

೩೫. ಕುಂಚೂರು ಬಸವರಾಜ, **ನಮ್ಮೂರ ಕೆರೆಗಳು,** ಪು. ೦೬

* * *

ಅಧ್ಯಾಯ – ನಾಲ್ಕು

ನಂಬಿಕೆ ಮತ್ತು ಆಚರಣೆಗಳು

ಅಧ್ಯಾಯ - ನಾಲ್ಕು
ನಂಬಿಕೆ ಮತ್ತು ಆಚರಣೆಗಳು

ನಂಬಿಕೆ ಮತ್ತು ಆಚರಣೆಗಳು ಸಂಸ್ಕೃತಿಯ ಒಂದು ಭಾಗ. ಮನುಕುಲಕ್ಕೆ ಬಹುಮುಖ್ಯವಾದ ಸಂಸ್ಕೃತಿ ಬಹಳ ವ್ಯಾಪಕ ಅರ್ಥವನ್ನು ಒಳಗೊಂಡಿದೆ. ನ್ಯಾಯ, ನೀತಿ, ಸತ್ಯ, ಧರ್ಮ, ಪ್ರಾಮಾಣಿಕತೆ ಇವೆಲ್ಲವನ್ನು ಒಳಗೊಂಡಿರುವುದೇ ಸಂಸ್ಕೃತಿ. ಸಂಸ್ಕೃತಿಯಲ್ಲಿ ಸಂಗೀತ, ಸಾಹಿತ್ಯ, ಕಲೆ, ನಂಬಿಕೆ, ಸಂಪ್ರದಾಯ, ಜಾತ್ರೆ, ಉತ್ಸವ ಮೊದಲಾದವುಗಳು ಸಮಾವೇಶಗೊಂಡಿರುತ್ತವೆ. ಒಂದು ಜನಾಂಗದ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ಈ ಎಲ್ಲಾ ಕ್ಷೇತ್ರಗಳು ನಿರ್ಧರಿತ ಅಂಶಗಳಾಗಿವೆ. ಸಂಸ್ಕೃತಿ ಎಂದೂ ನಿಂತ ನೀರಲ್ಲ ನಿರಂತರ ಬೆಳವಣಿಗೆಯೇ ಸಂಸ್ಕೃತಿಯ ವಿಶೇಷತೆ.[೧]

ಕೆರೆ-ಬಾವಿಗೆ ಸಂಬಂಧಿಸಿದ ಆಚರಣೆಗಳು ಅವುಗಳನ್ನು ಕಟ್ಟುವ ಪೂರ್ವದಿಂದಲೇ ಆರಂಭವಾಗುತ್ತವೆ. ಅಷ್ಟೇ ಯಾಕೆ, ಮನೆ, ಗುಡಿ-ಗುಂಡಾರಗಳನ್ನು ಕಟ್ಟುವಾಗ, ಮದುವೆ-ಮುಂಜಿ ಮುಂತಾದ ಕಾರ್ಯಗಳು ಪದ್ಧತಿಗನುಗುಣವಾಗಿ ಶುಭಮುಹೂರ್ತದಲ್ಲಿ ಪೂಜೆಯನ್ನು ಸಲ್ಲಿಸುವುದರ ಮೂಲಕ ಪ್ರಾರಂಭವಾಗುತ್ತವೆ. ಹಿರೇಕೆರೂರು ತಾಲೂಕು ಮತ್ತು ತಾಲೂಕಿನ ಸುತ್ತಮುತ್ತ ಗ್ರಾಮಗಳಲ್ಲಿ ಕೆರೆಗಳ ಕುರಿತ ನಂಬಿಕೆ-ಆಚರಣೆಗಳು ಸಂಪ್ರದಾಯ, ಉತ್ಸವಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ ಅವುಗಳ ಕುರಿತು ಅಧ್ಯಯನವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ.

ನಮ್ಮ ರಾಜ್ಯದಲ್ಲಿ ೪೦ ಸಾವಿರ ಕೆರೆಗಳಿದ್ದರೆ, ಹಿರೇಕೆರೂರು ತಾಲೂಕಿನಲ್ಲಿ ಸುಮಾರು ೧೫೦ಕ್ಕೂ ಹೆಚ್ಚು ಕೆರೆಗಳಿವೆ. ಪ್ರತಿಯೊಂದು ಕೆರೆಯ ನಿರ್ಮಾಣದ ಹಿಂದೆ ಅದರದೇ ಆದ ಇತಿಹಾಸವಿದೆ. ಕೆರೆಗಳನ್ನು ಕಟ್ಟುವ ಉದ್ದೇಶ ಜೀವಸಂಕುಲವನ್ನು ರಕ್ಷಿಸುವುದಾಗಿದೆ. 'ನೀರು ನಿಂತರೆ ಹೊಲ ಹಾಳು, ಇಲ್ಲದಿದ್ದರೆ ಕೆರೆ ಹಾಳು' ಎಂಬ ಗಾದೆ ಮಾತಿದೆ. ಕೆರೆಯ ದಡದಲ್ಲಿ ದೇವರೊಂದನ್ನು ಪ್ರತಿಷ್ಠಾಪಿಸಿ ಆ ಪರಿಸರಕ್ಕೊಂದಿಷ್ಟು ಪಾವಿತ್ರ್ಯತೆಯನ್ನು ಕಲ್ಪಿಸಿ ಪರಿಸರವನ್ನು

ಕಾಪಾಡಿಕೊಂಡು ಬಂದ ನಮ್ಮ ಹಿರಿಯರು ಕೆರೆಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಇಂತಹ ಕೆರೆಗಳನ್ನು ಹಿರೇಕೆರೂರು ತಾಲೂಕಿನಲ್ಲಿ ಹಿರೇಕೆರೂರು, ಹಂಸಬಾವಿ, ಬೆಟಕೇರೂರು ಹಿರೇಕೆರೂರು ಮೊದಲಾದ ಕಡೆಗಳಲ್ಲಿ ಕಾಣುತ್ತೇವೆ. ಇಂದಿನ ಕೆರೆಗಳು ಸಂಪೂರ್ಣ ಅಳಿವಿನಂಚಿನಲ್ಲಿವೆ. ಅವುಗಳ ನಿರ್ವಹಣೆ ಅಸಮರ್ಪಕವಾಗಿರುವುದರಿಂದ ಕೆರೆಯಲ್ಲಿ ಹೂಳು ತುಂಬಿ ಜಲಕಳೆ ಬೆಳೆಯುತ್ತಿದ್ದು, ನೆಲಗಳ್ಳರು ಕೆರೆಗಳನ್ನು ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ. ಕೆರೆಗಳ ಆಯುಷ್ಯ ಕಡಿಮೆಯಾಗುತ್ತದೆ. ಹೂಳು ಮತ್ತು ಜಲಕಳೆಯನ್ನು ಮೇಲಿಂದ ಮೇಲೆ ತೆಗೆಯುತ್ತಿದ್ದರೆ ಅದರಿಂದ ನಮ್ಮ ಜಮೀನುಗಳಿಗೆ ಫಲವತ್ತಾದ ಮಣ್ಣು ದೊರೆಯುತ್ತದೆ, ಕೆರೆಯೂ ಜೀವದಾನ ಪಡೆಯುತ್ತದೆ. ಸರಕಾರಗಳು ಹಲವಾರು ಮೂಲಗಳಿಂದ ಕೆರೆಗಳ ಪುನರುಜ್ಜೀವನಕ್ಕಾಗಿ ಸಾಲ ಪಡೆಯುತ್ತವೆ. ಆ ಹಣ ಕೆರೆಗಳಿಗೆ ಬಳಕೆಯಾಗದೇ ಭ್ರಷ್ಟಾಚಾರಿಗಳ ಪಾಲಾಗುತ್ತಿದೆ. ದಾಖಲೆಗಳಲ್ಲಿ ಮಾತ್ರ ಕೆರೆಗಳ ಪುನರುಜ್ಜೀವನವಾಗಿರುತ್ತದೆ. ಆದರೆ ಕೆರೆಯ ಹೂಳು, ಜಲಕಳೆ ಹಾಗೆಯೇ ಇರುತ್ತದೆ. ಇದು ಇಂದಿನ ಆಡಳಿತ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯನ್ನು ಸೂಚಿಸುತ್ತದೆ.[೨]

ಮಾನವನು ಅನಾದಿ ಕಾಲದಿಂದಲೂ ನಂಬಿಕೆ ಮತ್ತು ತತ್ಸಂಬಂಧಿತವಾದ ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಕಾಲಕಾಲಕ್ಕೆ ಹೊಸ ಹೊಸ ನಂಬಿಕೆ ಮತ್ತು ಆಚರಣೆಗಳು ಪ್ರವೇಶ ಮಾಡುತ್ತಿರುತ್ತವೆ. ಇವೆಲ್ಲವೂ ಅವನ ಮಾನಸಿಕ ನೆಮ್ಮದಿಗಾಗಿ ಮಾಡಿಕೊಂಡಿರುವ ಚಿಕಿತ್ಸಕ ಸ್ವರೂಪದ ಸಾಧನಗಳೆನ್ನಬಹುದು. ನಂಬಿಕೆಯ ಭೌತಿಕ ರೂಪವೇ ಆಚರಣೆ.[೩] ಮಾನವನ ನಾಗರಿಕತೆಯ ಬೆಳವಣಿಗೆಯಲ್ಲಿ ಕೃಷಿ ಆಧಾರಿತ ಬದುಕು ಬಹು ಮಹತ್ವದ್ದು. ಈ ಹಂತದಲ್ಲಿ ಅವನು ತನ್ನ ನಂಬಿಕೆ ಮತ್ತು ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿರುತ್ತಾನೆ. ಅದೇ ರೀತಿ ಪ್ರಸ್ತುತ ಪರಿಸರದಲ್ಲಿ ರೂಢಿಯಲ್ಲಿರುವ ನಂಬಿಕೆ, ಆಚರಣೆಗಳನ್ನು ಇಡಿಯಾಗಿ ನೋಡುವ ಪ್ರಯತ್ನ ಮಾಡಲಾಗಿದೆ. ನಮ್ಮ ದೈನಂದಿನ ಬದುಕಿನಲ್ಲಿ ಹಲವಾರು ರೀತಿಯ ನಂಬಿಕೆ, ಆಚರಣೆ ಹಾಗೂ ಕಟ್ಟುಪಾಡುಗಳನ್ನು ರೂಢಿಸಿಕೊಂಡು ಬಂದಿದ್ದೇವೆ. ನಾವು ಋತುಮಾನಕ್ಕೆ ತಕ್ಕಂತೆ ಆಹಾರ, ಪಾನೀಯ, ಬಟ್ಟೆ ಹಾಗೂ ವಸತಿಗಳಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುತ್ತೇವೆ. ಈ ವ್ಯವಸ್ಥೆಗಳಲ್ಲಿ ನಾವು ನಂಬಿಕೆಗಳನ್ನಿಟ್ಟುಕೊಂಡಿದ್ದೇವೆ. ಉದಾ : ದೇವರು ಇದ್ದಾನೋ ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ ನಾವು ದೇವರು ಇದ್ದಾನೆ ಎಂದರೆ ಇದ್ದಾನೆ ಇಲ್ಲ ಎಂದರೆ ಇಲ್ಲ. ಹಾಗೆ ಎಲ್ಲದಕ್ಕೂ ನಂಬಿಕೆ ಮುಖ್ಯ. ನಂಬಿಕೆ ಇಲ್ಲದ ಜೀವನವಿಲ್ಲ. ಎಲ್ಲರೂ ಒಂದಲ್ಲಾ ಒಂದು ರೀತಿಯಿಂದ ನಂಬಿಕೆ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದೇವೆ. ಸಹಜವಾಗಿ ಎಷ್ಟೋ ಸಲ ನಾವು ಇನ್ನೊಬ್ಬರನ್ನು ನಂಬಿ ಮೋಸ ಹೋಗಿದ್ದೇವೆ. ಹಾಗಂತ ನಂಬದೇ ಇರಲು ಅಸಾಧ್ಯ. ಆದ್ದರಿಂದ ದಾಸರು 'ನಂಬಿ ಕೆಟ್ಟವರಿಲ್ಲವೋ' ಎಂದು ಹಾಡಿರುವುದು ಸತ್ಯವೆನಿಸುತ್ತದೆ.[೪]

ನಂಬಿಕೆಗಳು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು, ಉಳಿದುಕೊಂಡು ಬಂದಿವೆ. ನಂಬಿಕೆಗಳ ಬೇರು ಜನಪದ ಸಂಸ್ಕೃತಿಯ ಉದಯದೊಂದಿಗೆ ತಲೆಯೆತ್ತಿರುವುದು ಗಮನಾರ್ಹ. ಜನಪದರ ನಿತ್ಯ ಬದುಕಿಗೂ, ನಂಬಿಕೆಗಳಿಗೂ ನಿಕಟವಾದ ನಂಟಿದೆ. ಪ್ರತ್ಯೇಕಿಸಲು ಅಸಾಧ್ಯವೆನ್ನುವಷ್ಟು ಗಾಢವಾಗಿ ಅವು ಒಂದನ್ನೊಂದು ತಬ್ಬಿ ನಿಂತಿವೆ. ಜನಪದರ ಆಂತರಿಕ ಮನೋಭಾವವನ್ನು ಹಾಗೂ ಅವರ ಮೂಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಮುಖ್ಯ ಸಾಧನಗಳಲ್ಲಿ ನಂಬಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ.[೫] ಇಷ್ಟೆಲ್ಲಾ ಪ್ರಾಮುಖ್ಯತೆಯನ್ನು ಪಡೆದಿರುವ ನಂಬಿಕೆಗಳು ಮತ್ತು ಆಚರಣೆಗಳ ಉಗಮ ಹಾಗೂ ಪ್ರಾಚೀನತೆಯತ್ತಲೂ ಗಮನಹರಿಸಬೇಕಾಗುತ್ತದೆ. ಪ್ರಾಚೀನತೆಯ ದೃಷ್ಟಿಯಿಂದ ಈ ಅಭಿಪ್ರಾಯ ಸ್ವಲ್ಪ ಅತಿರೇಕದಂತೆ ತೋರಿಬಂದರೂ ಉಗಮ ಮತ್ತು ವಿಕಾಸವನ್ನು ಗಮನಿಸಿದಾಗ ಅವೆರಡಕ್ಕೆ ಆಂತರಿಕ ಸಂಬಂಧವಿದೆ.[೬] ಮಾನವ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿದಾಗಲೇ ನಂಬಿಕೆಗಳು ಉಗಮಗೊಂಡವು. ಅವನ ಮಾನಸಿಕ ಸ್ಥಿತಿ ಬದಲುಗೊಂಡಂತೆ ನಂಬಿಕೆಗಳು ವಿಕಾಸಗೊಂಡವು. ಪುರಾತನ ಕಾಲದಿಂದ ನಾಗರಿಕತೆ, ಪ್ರೌಢಜ್ಞಾನ ಮತ್ತು ಸಂಸ್ಕೃತಿಯ ಹಂತವನ್ನು ಮುಟ್ಟುವವರೆಗೆ ಮಾನವನ ಅವಿರತೆಯ ಮುನ್ನಡೆಯ ಹಾದಿಯಲ್ಲಿ ಬೆಳೆದು ಬಂದ ನಂಬಿಕೆಗಳು ಅಂತರ್ಗತವಾಗಿರುವುದು ಕಂಡುಬರುತ್ತದೆ. ಕೆಲವೊಮ್ಮೆ ತಪ್ಪು ತಿಳುವಳಿಕೆ, ಅಜ್ಞಾನ ಮತ್ತು ಅಂಧಕಾರದಿಂದ ಮಾನವನ ವಿಚಾರಶಕ್ತಿ ಕುಸಿದಿರುವಲ್ಲಿ ಮತ್ತು ಜ್ಞಾನಸಂಪತ್ತು ಕಿರಿದಾಗುವಲ್ಲಿ ಇಂತಹ ನಂಬಿಕೆಗಳು ಮನೆ ಮಾಡುತ್ತವೆ.

ಸಾವಿರಾರು ವರ್ಷಗಳಿಂದ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿ ಬಂದಿರುವ ಆಚಾರ-ವಿಚಾರ ಮತ್ತು ಪದ್ಧತಿಗಳು ಹಳ್ಳಿಗಳಲ್ಲಿ ಪ್ರಚಲಿತವಾಗಿವೆ. ಐತಿಹಾಸಿಕವಾಗಿ ಇವುಗಳನ್ನು ಗಮನಿಸಿದರೆ, ಬಹುತೇಕ ನಂಬಿಕೆಗಳು ಪ್ರಕೃತಿ ಮೂಲದಿಂದ ಹುಟ್ಟಿಕೊಂಡು ಬಂದಿವೆ. ಅಂತಹ ನಂಬಿಕೆಗಳನ್ನು ಹಲವು ಭಾಗಗಳಾಗಿ ವರ್ಗೀಕರಿಸಬಹುದು. ಮೊದಲನೆಯದಾಗಿ ಮಾನವ ಶರೀರ ಮತ್ತು ಜನಪದ ವೈದ್ಯಕ್ಕೆ ಸಂಬಂಧಪಟ್ಟವು. ನಂತರ ಜೀವನಚಕ್ರ, ಹಾಗೆಯೇ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಈ ಮೊದಲಾದವುಗಳನ್ನೊಳಗೊಂಡಿರುತ್ತವೆ.[೭] ನಂಬಿಕೆಗಳು ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಅವರು ಪ್ರಾಣಿ, ಪಕ್ಷಿ ಎಲ್ಲವುಗಳ ಮೇಲೆ ನಂಬಿಕೆಗಳನ್ನು ಇಟ್ಟುಕೊಂಡಿದ್ದಾರೆ. ಅದರಂತೆ ಕೆರೆಯ ಬಗ್ಗೆಯೂ ಕೂಡ ಹಲವಾರು ರೀತಿಯಲ್ಲಿ ನಂಬಿಕೆಗಳು ಇವೆ. ಊರಿಗೊಂದು ಕೆರೆ, ನೀರಿಗೊಂದು ಬಾವಿ ಎಂಬಂತೆ ಪ್ರತಿ ಹಳ್ಳಿಗೊಂದೊಂದು ಕೆರೆ-ಬಾವಿಗಳು ಇವೆ.[೮] ಕೆರೆಯು ಗ್ರಾಮೀಣ ನೆಲೆಯ ಜನಪದರ ಜೀವಾಳ ಹಾಗೂ ಹಳ್ಳಿಯ ಸ್ವತ್ತೂ ಕೂಡಾ ಹೌದು. ಕೆರೆದೇವತೆಯಾದ ಚೌಡಮ್ಮ ನಮ್ಮನ್ನು ಕಾಪಾಡುತ್ತಾಳೆ.[೯] ಆ ವರ್ಷ ಕೆರೆಗಳು ತುಂಬಿದರೆ ಹಳ್ಳಿಗರಿಗೆ ಹಿಗ್ಗೋ ಹಿಗ್ಗು! ಈ ವರ್ಷ ಸುಗ್ಗಿಯು ಸಮೃದ್ಧಿಯಾಗುತ್ತದೆ ಎಂಬ ಸಂತಸ. ಕೆರೆಗಳು ತುಂಬಿದರೆ ನಮಗೆ ಬರವಿಲ್ಲ, ಕೆರೆ ತುಂಬಿಲ್ಲ

ಅಂದ್ರೆ ನಮಗೆ ಬರ ಬಂದ್ಹಂಗೆ ಎಂಬುದೊಂದು ಜನಪದರ ಅನುಭವ ನುಡಿ. ಕೆರೆಗೆ ಸಂಬಂಧಿಸಿದ ನಂಬಿಕೆಗಳು ವೇದಗಳ ಕಾಲದಿಂದಲೂ ಇವೆ. ಅಗ್ನಿ ಪುರಾಣದ ೭೪ನೇ ಅಧ್ಯಾಯದಲ್ಲಿ ವರುಣದೇವನನ್ನು ಜಲದೇವನೆಂದೇ ವರ್ಣಿಸಲಾಗಿದೆ.[೧೦] ಆದುದರಿಂದ ಗಣೇಶನಂಥ ಮೂರ್ತಿಯನ್ನು ಮುಳುಗಿಸುವುದರಿಂದ ಶುದ್ಧವಾಗುತ್ತೇವೆ. ಇಂದು ಹಳ್ಳಿಗಳಲ್ಲಿ ಪ್ರತಿಯೊಂದು ಶುಭಕಾರ್ಯಗಳಲ್ಲಿ ಗಂಗಮ್ಮನಿಗೆ ಹೋಗಿ ಬರುವುದು ಆಚರಣೆಯಲ್ಲಿದೆ. ಹೆಚ್ಚಾಗಿ ಈ ಆಚರಣೆಗಳು ಶ್ರಾವಣ ಮಾಸದಲ್ಲಿ ನಡೆಯುತ್ತವೆ. ಹೀಗೆ ಮಾಡುವುದರಿಂದ ಮೂಲರೂಪಕ್ಕೆ ಧಕ್ಕೆ ಬರುವುದಿಲ್ಲ. ದೈವಗಳು ನೆಲೆಸಿ ಸರ್ವರಿಗೂ ಒಳ್ಳೆಯದನ್ನು ಮಾಡುತ್ತದೆ. ಮಳೆ ಬೆಳೆ ಚೆನ್ನಾಗಿ ಆಗಿ ಜೀವನ ಸಮೃದ್ಧಿಯಾಗುತ್ತದೆ ಎಂಬ ನಂಬಿಕೆ ಇಂದಿಗೂ ನಮ್ಮ ಜನಪದರಲ್ಲಿ ಆಳವಾಗಿ ಬೇರೂರಿದೆ.

ಜನಪದ ನಂಬಿಕೆಗಳು ಪರಂಪರಾನುಗತವಾದ, ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಹಾಗೂ ಸಾಮೂಹಿಕ ನಿರೀಕ್ಷೆಗಳು ಮುಖ್ಯವಾಗುತ್ತವೆ. ನಂಬಿಕೆಗಳು ಜನಪದರ ಜೀವನಾನುಭವದ ಉತ್ಪನ್ನಗಳು. ಸೂಚನೆ, ನಿಯಮ, ವಿಧಿ ನಿಷೇಧ, ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರೇಪಿತವಾದವು.[೧೧] ನಂಬಿಕೆ, ಸಂಪ್ರದಾಯ ಆಚರಣೆಗಳೊಂದಿಗೆ ಅಂತರ್‌ಸಂಬಂಧವನ್ನು ಹೊಂದಿದ್ದು, ಆ ಮೂಲಕ ಕ್ರಿಯಾರೂಪವನ್ನು ತಾಳುತ್ತವೆ. ಅದು ಜನಪದ ಪ್ರಕಾರಗಳ, ಗಾದೆ, ಜನಪದ ವೈದ್ಯ, ಜನಪದ ಕಲೆ, ಜನಪದ ಐತಿಹ್ಯ, ಜನಪದ ಧರ್ಮ ಇವುಗಳೊಂದಿಗೆ ಒಳಸಂಬಂಧವನ್ನು ಹೊಂದಿದ್ದು, ಸಂಕೀರ್ಣ ಸ್ವರೂಪದ್ದಾಗಿದೆ.

೪.೧ ವ್ಯಾಖ್ಯೆಗಳು

ನಂಬಿಕೆ ಕುರಿತಾಗಿ ವಿದ್ವಾಂಸರು ವಿಶ್ಲೇಷಿಸಿರುವ ವ್ಯಾಖ್ಯೆಗಳನ್ನು ಈ ಕೆಳಕಂಡಂತೆ ಗಮನಿಸಬಹುದು.

ಆರ್.ಎಸ್. ಬ್ಲಾಗ್ ರವರ ಪ್ರಕಾರ 'ನಂಬಿಕೆಗಳು ಪುನರಾವೃತವಾಗುವ ಸಾಮಾಜಿಕ ವೀಕ್ಷಣೆಯ ಫಲವಾಗಿ ಮಾಡುವ ಭೂತ, ವರ್ತಮಾನ, ಭವಿಷ್ಯತ್ತುಗಳೊಂದಿಗೆ ಕಾರ್ಯಕಾರಣ ಸಂಬಂಧ ಉಳ್ಳದ್ದಾಗಿರುವ ಸಾಂಪ್ರದಾಯಿಕ ಭಾವನೆ'.

ಮರಿಯಾ ಲೀಚ್ ರವರ ಪ್ರಕಾರ 'ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮಾಡುವ ಭೂತ, ವರ್ತಮಾನ, ಭವಿಷ್ಯತ್ತುಗಳೊಂದಿಗೆ ಕಾರ್ಯಕಾರಣ ಸಂಬಂಧ ಹೊಂದಿರುವ ಸಾಂಪ್ರದಾಯಿಕ ಸ್ವೀಕೃತ ಪರಿಕಲ್ಪನೆಯೇ ಜನಪದ ನಂಬಿಕೆ'.

ದೇಜಗೌ ರವರ ಪ್ರಕಾರ 'ದೇಶ ಕಾಲಗಳ ಹಿನ್ನೆಲೆಯಲ್ಲಿ ಪರಂಪರಾಗತವಾದ ಜ್ಞಾನ, ದೀರ್ಘಾನುಭವ, ಕಾಲ್ಪನಿಕ ಆಲೋಚನೆ ಹಾಗೂ ಅತೀಂದ್ರೀಯ ವ್ಯಾಪಾರದ ಫಲವಾಗಿ ಮೂಡಿದ ಶ್ರದ್ಧೆಯೇ ನಂಬಿಕೆ'.[೧೨]

ಹೀಗೆ ವಿದ್ವಾಂಸರು ವಿವಿಧ ಪ್ರಕಾರದ ವ್ಯಾಖ್ಯೆಗಳನ್ನು ನೀಡುವ ಸಮೂಲಕ ನಂಬಿಕೆ ಮತ್ತು ಆಚರಣೆಗಳು ಹಾಸುಹೊಕ್ಕಾಗಿರುವ ಬಗೆಯನ್ನು ತಿಳಿಸಿದ್ದಾರೆ. ಕೆರೆಯ ಕುರಿತು ಜನಪದರಲ್ಲಿರುವ ನಂಬಿಕೆ ಮತ್ತು ಆಚರಣೆಗಳು ತಾವು ಹಿಂದಿನಿಂದಲೂ ಆಚರಿಸಿಕೊಂಡು ಬಂದಂಥವುಗಳಾಗಿದ್ದು ತಮ್ಮದೇ ಆದ ವಿಶಿಷ್ಟ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತವೆ ಎಂದು ಹೇಳಬಹುದಾಗಿದೆ.

೪.೨ ನಂಬಿಕೆಗಳ ಉಗಮ

ಪ್ರಕೃತಿಯ ರಹಸ್ಯವನ್ನು ಭೇದಿಸಲು ಆದಿಮಾನವನು ಪ್ರಯತ್ನಿಸಿದ. ಅದರ ಫಲವಾಗಿ ಶಕ್ತಿ, ಭಯ, ಆತಂಕ, ಭೀತಿ ಹುಟ್ಟಿಕೊಂಡವು. ವೇದಗಳ ಕಾಲದಲ್ಲಿ ಜಾತಿ, ಧರ್ಮ ಅಸ್ತಿತ್ವಕ್ಕೆ ಬಂದವು. ಈ ದೃಷ್ಟಿಯಿಂದ ಜನಪದ ನಂಬಿಕೆಗಳನ್ನು ೧) ಧಾರ್ಮಿಕ ನಂಬಿಕೆಗಳು ೨) ಸಾಂಸ್ಕೃತಿಕ ನಂಬಿಕೆಗಳು ೩) ವೈಯಕ್ತಿಕ ನಂಬಿಕೆಗಳು ಎಂದು ಮೂರು ವಿಧಗಳಾಗಿ ವಿಭಾಗಿಸಲಾಗಿದೆ.

೧. ಧಾರ್ಮಿಕ ನಂಬಿಕೆಗಳು

ಮಾನವ ಮನಸ್ಸಿನ ಭಯ ಮತ್ತು ಆತಂಕಗಳು ಧಾರ್ಮಿಕ ನಂಬಿಕೆಗಳಿಗೆ ಮೂಲ. ಇಂತಹ ಸಂದರ್ಭಗಳಲ್ಲಿ ಶಕ್ತಿಯ ರೂಪವಾಗಿ ಹುಟ್ಟಿಕೊಂಡವುಗಳೇ ದೇವರು ಮತ್ತು ದೆವ್ವಗಳು. ಆಗ ದೇವರ ಸ್ವರೂಪ, ಕಾರ್ಯಗಳಿಗೆ ಸಂಬಂಧಿಸಿದಂತೆ ಅನೇಕ ನಂಬಿಕೆಗಳನ್ನು ಹುಟ್ಟು ಹಾಕಿದ. ಅಮೂರ್ತ ದೇವರನ್ನು ವಾಸ್ತವ ಜಗತ್ತಿನ ವಸ್ತು ವಿಷಯಗಳೊಂದಿಗೆ ಸಮೀಕರಿಸಿ ಪೂಜಿಸತೊಡಗಿದ. ಉದಾ : ತೆಂಗಿನಕಾಯಿಯನ್ನು ಕಾಲಿನಿಂದ ತುಳಿಯಬಾರದು. ಅದು ಮುಕ್ಕಣ್ಣ, ಬೀಸುವ ಕಲ್ಲನ್ನು ತುಳಿಯಬಾರದು ಅದು ಲಕ್ಷ್ಮಿ.

ಲೌಕಿಕ ಕ್ರಿಯೆಯೊಂದನ್ನು ಸಮರ್ಪಕವಾಗಿ ಮಾಡಲು ಅಥವಾ ನಿಷೇಧಿಸಲು ಅದಕ್ಕೆ ಧಾರ್ಮಿಕ ಚೌಕಟ್ಟನ್ನು ಒದಗಿಸುವುದುಂಟು. ಉದಾ : ಕಾಲನ್ನು ತೊಳೆಯುವಾಗ ಹಿಮ್ಮಡಿ ಪೂರ್ತಿ ನೆನೆಯಬೇಕು, ಇಲ್ಲದಿದ್ದರೆ ಶನಿ ಹಿಡಿದುಕೊಳ್ಳುತ್ತದೆ. ಸಂಜೆ ಹೊತ್ತಲ್ಲಿ ಕಸಗುಡಿಸಬಾರದು, ಲಕ್ಷ್ಮಿ ಹೊರಹೋಗುತ್ತಾಳೆ. ಮೊದಲನೆಯದರಲ್ಲಿ ಲೌಕಿಕ ಉದ್ದೇಶ ಕಾಲನ್ನು ತೊಳೆದುಕೊಳ್ಳಬೇಕು ಎನ್ನುವುದು. ಎರಡನೆಯದರಲ್ಲಿ ಕತ್ತಲೆಯಲ್ಲಿ ಕಸದೊಂದಿಗೆ ವಸ್ತುಗಳೂ ಮನೆಯಿಂದ ಹೊರಹೋಗಬಹುದು ಎನ್ನುವುದು ಕಾರಣವಾಗುತ್ತದೆ.[೧೩]

೨. ಸಾಂಸ್ಕೃತಿಕ ನಂಬಿಕೆಗಳು

ಹುಟ್ಟಿನ ಬಗೆಗೆ ಕುತೂಹಲ, ಸಾವಿನ ಕುರಿತು ಭಯ, ತನ್ನ ಬದುಕನ್ನು ರೂಪಿಸಿದ ಋತುಮಾನಗಳ ಚಲನೆಗಳು ಅನೇಕ ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ನಂಬಿಕೆಗಳನ್ನು ರೂಪಿಸಿದೆ.

ತೆಂಗಿನಕಾಯಿ ತಿಂದರೆ ಮದುವೆಯಲ್ಲಿ ಮಳೆ ಬರುತ್ತದೆ.

ಆರತಿಯ ದೀಪ ಆರಿದರೆ ಅಪಶಕುನ.

ಉತ್ತರಾಯಣದಲ್ಲಿ ಸತ್ತರೆ ಸ್ವರ್ಗ.

ಆಷಾಢದಲ್ಲಿ ಅತ್ತೆ-ಸೊಸೆ ಒಂದೇ ಬಾಗಿಲಲ್ಲಿ ಓಡಾಡಬಾರದು.

೩. ವೈಯಕ್ತಿಕ ನಂಬಿಕೆಗಳು

ವೈಯಕ್ತಿಕ ನಂಬಿಕೆಗಳು ಮೊದಲಿಗೆ ವ್ಯಕ್ತಿಯೊಬ್ಬನ ಉತ್ಪನ್ನವಾಗಿದ್ದು, ಮುಂದೆ ಸಾಮಾಜೀಕರಣದ ಕಾಕತಾಳೀಯ ಸಂಬಂಧವನ್ನು ಕಂಡುಕೊಂಡು ಒಂದು ಸಂಖ್ಯೆ, ದಿನ, ಉಂಗುರ, ಒಂದು ಬಣ್ಣಗಳ ವೈಯಕ್ತಿಕ ನಂಬಿಕೆಯಾಗಿ ಮಾರ್ಪಡುತ್ತದೆ.

೧. ಶನಿವಾರ ಹೊಸ ಬಟ್ಟೆ ಉಡಬಾರದು

೨. ಐದು ಮೂಲೆ ಮನೆ ಹೊಂದಿದ್ದರೆ ಅಶುಭ

೩. ಮಂಗಳವಾರ, ಶುಕ್ರವಾರ ಮದುಮಗಳು ತಾಯಿಯ ಮನೆಯಿಂದ ಹೊರಡಬಾರದು[೧೪]

೪. ವೀರಭದ್ರ ದೇವರ ಸಂಪ್ರದಾಯಸ್ಥರಿಗೆ ಕಪ್ಪು ಬಣ್ಣ ಅಶುಭ

ಜಾನಪದ ಬದುಕಲ್ಲಿ 'ಜಲ' ಎನ್ನುವುದು ಉತ್ತೇಜಕ ಹಾಗೂ ಸಮೃದ್ಧಿಯ ಸಂಕೇತವಾಗಿದ್ದಂತೆ ಜೀವಂತಿಕೆಯ ಪ್ರತಿನಿಧಿಯಾಗಿಯೂ ಕೆಲಸ ಮಾಡಿದೆ. ಜನಪದರಿಗೆ ಗಂಗೆ ತಾಯಿ, ಮಾತೆ, ಅಮ್ಮನಾಗಿ ಪೂಜೆಗೊಳ್ಳುತ್ತಾಳೆ. ಅವಳು ಪ್ರಕೃತಿಯ ಸ್ವರೂಪಳು. ಕೃಷಿ ಹಾಗೂ ಕೃಷಿಯ ಉಪವೃತ್ತಿಯನ್ನು ಆಧರಿಸಿದ ಸಮುದಾಯಗಳಲ್ಲಿ ಹೆಣ್ಣು ಸೃಷ್ಟಿಯ ಸಂಕೇತ. ಗಂಗೆ ಇವರ ಆರಾಧ್ಯ ದೇವತೆ. ಇಂದಿಗೂ ಎಲ್ಲಾ ಗ್ರಾಮದೇವತೆಗಳು ಜಲರೂಪಿಯಾಗಿದ್ದ ಜಲಮೂಲದೊಂದಿಗೆ ನೇರ ಸಂಬಂಧ ಹೊಂದಿದೆ. ಎಲ್ಲಾ ಜನಪದ ಹಾಗೂ ಬುಡಕಟ್ಟು ಸೃಷ್ಟಿ ಪುರಾಣಗಳು ಸೃಷ್ಟಿಯ ಮೂಲಧಾತುವೇ ನೀರು ಎಂದು ಹೇಳುತ್ತವೆ. ಜಗತ್ತಿನ ಎಲ್ಲಾ ಪ್ರಾಚೀನ ಸಂಸ್ಕೃತಿಗಳು ಕೃಷಿ ಮೂಲವಾದಂತವು. ನದಿ, ಮಳೆ, ಅಂತರ್ಜಲದಂತಹ ಪ್ರಕೃತಿಯ

ಅಂಶಗಳು ಇವುಗಳ ವಿಕಾಸದ ಹಾದಿಯಲ್ಲಿ ಅವಶ್ಯವಾಗಿದ್ದವು. ನೀರು ಕೇವಲ ಪ್ರಾಕೃತಿಕ ಪದಾರ್ಥವಾಗಿರದೇ ಜೀವಜಲದ ಪೋಷಣೆ ಹಾಗೂ ಸಂವರ್ಧನೆಗೆ ಕಾರಣವಾಗಿತ್ತು. ನೀರಿನ ಬಹೂಪಯೋಗಿ ಶಕ್ತಿ ಸಾಧ್ಯತೆಗೂ ಮಾನವ ಸಮಾಜ ವಿಕಾಸಕ್ಕೂ ನೇರ ಸಂಬಂಧವಿದೆ. ನೀರು ತನ್ನ ಪ್ರಾಕೃತಿಕ ರೂಪಗಳಾದ ನದಿ, ಕೆರೆ, ಬಾವಿ, ಝರಿ, ಸಮುದ್ರ ಮಳೆಗಳ ಮೂಲಕ ಫಲವಂತಿಕೆಯ ಸ್ವರೂಪವನ್ನು ಪೋಷಣೆಯ ಸ್ವರೂಪವನ್ನು ಪಡೆದುಕೊಂಡಿದೆ. ಜನಸಮುದಾಯಗಳು ಧಾರ್ಮಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪವಿತ್ರ–ಅಪವಿತ್ರ, ಶುಭ–ಅಶುಭ, ಸೂತಕ–ಶುದ್ಧೀಕರಣ ಇತ್ಯಾದಿಯಾಗಿ ಬಿಂಬಿತವಾಗಿವೆ.[೧೫]

ಕೆರೆಯ ಬಗೆಗೆ ಇರುವ ಭಾರತದ ಅತ್ಯಂತ ಪ್ರಾಚೀನವಾದ ಉಲ್ಲೇಖವು ಸಾಂಖ್ಯಾಯನನ ಗೃಹ್ಯಸೂತ್ರದಲ್ಲಿದೆ. ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅಧಿದೇವತೆಯಾದ ವರುಣನನ್ನು ಮತ್ತು ಇತರ ದೇವತೆಗಳನ್ನು ಸ್ತುತಿಸಿದ ನಂತರದಲ್ಲಿ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು.[೧೬] ಅಗ್ನಿ ಪುರಾಣವು ಸಹ ಈ ಅಭಿಪ್ರಾಯವನ್ನು ಅನುಮೋದಿಸುತ್ತದೆ ಹಾಗೂ ಕೆಲವು ವಿಧಿ ಮತ್ತು ಅಚರಣೆಗಳನ್ನು ಕುರಿತ ಮಾಹಿತಿಗಳನ್ನು ನೀಡುತ್ತದೆ. ಅದರಂತೆ ಕೆರೆ, ಬಾವಿ ಮುಂತಾದ ಜಲಕ್ಕೆ ಸಂಬಂಧಿಸಿದ ರಚನೆಗಳನ್ನು ಕೈಗೆತ್ತಿಕೊಂಡಾಗ ಅಂತಹ ಜಾಗದಲ್ಲಿ ಎಂಟು ಮಡಕೆಗಳಲ್ಲಿ ಎಂಟು ಬಗೆಯ ನೀರನ್ನು ತುಂಬಿಸಿ, ಎಂಟು ದಿಕ್ಕುಗಳಲ್ಲಿ ಅವುಗಳನ್ನು ಸ್ಥಾಪಿಸಬೇಕು. ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಮಳೆಯ ಅಧಿದೇವತೆ ವರುಣಮೂರ್ತಿಯನ್ನು ಊರಿನಲ್ಲಿ ಮೆರವಣಿಗೆ ಮಾಡಿ ನಂತರ ಕೊಳದ ನೀರಿನಲ್ಲಿ ಸ್ಥಾಪಿಸಬೇಕು.[೧೭] ಈ ರೀತಿಯಾಗಿ ವಿದಿಗಳನ್ನು ಆಚರಿಸಿದವನಿಗೆ ಅಶ್ವಮೇಧ ಯಾಗವನ್ನು ಮಾಡಿದ ಫಲವು ಲಭಿಸುತ್ತದೆ ಎಂಬ ನಂಬಿಕೆಗಳಿವೆ.

ಮಳೆಯ ಮೂಲಕ ಬೀಳುವ ನೀರು ಮೊದಲಿಗೆ ಹೊಳೆ–ಹಳ್ಳಗಳಲ್ಲಿ ತುಂಬಿ ಹರಿಯುತ್ತದೆ. ಭಾರತೀಯರಿಗೆ ಪ್ರತಿಯೊಂದು ಹೊಳೆ–ಹಳ್ಳಗಳು ಪವಿತ್ರವಾದವುಗಳಾಗಿವೆ. ಹರಿಯುವ ಹೊಳೆ–ಹಳ್ಳಗಳು ಶೀಲ ಹಾಗೂ ಪರಿಶುದ್ಧತೆಯ ಸಂಕೇತವಾಗಿವೆ. ಅವುಗಳಲ್ಲಿ ಸ್ನಾನ ಮಾಡಿದರೆ ಪುಣ್ಯ ಬರುವುದೆಂದು ನಂಬಲಾಗಿದೆ. 'ಗಂಗಾ ಸ್ನಾನ, ತುಂಗಾ ಪಾನ' ಎಂಬ ಗಾದೆ ಆಯಾ ನದಿಗಳ ಮಹತ್ವವನ್ನೇ ಸೂಚಿಸುತ್ತದೆ. ಹೊಳೆ–ಹಳ್ಳಗಳು ತುಂಬಿ ಹರಿದಾಗ ಗಂಗಾದೇವಿಯನ್ನು ಪೂಜಿಸಿ ಬಾಗೀನ ಅರ್ಪಿಸುವ ಪರಂಪರೆ ಹಿಂದಿನಿಂದಲೂ ನಡೆದು ಬಂದಿದೆ. ಪ್ರತಿಯೊಂದು ನದಿಯ ಹಿಂದೆ ಐತಿಹ್ಯ, ನಂಬಿಕೆ ಕಥೆಗಳಿವೆ. ನದಿಯು ಗುಪ್ತಗಾಮಿನಿಯಾಗಿ ಹರಿಯುತ್ತದೆ. ಎಲ್ಲೋ ಹುಟ್ಟಿ, ಎಷ್ಟೋ ಮೈಲುಗಳವರೆಗೆ ಅಂಕು–ಡೊಂಕಾಗಿ ಹರಿದು ಸಮುದ್ರ ಸೇರುತ್ತದೆ. ಆಧುನಿಕ ಕಾಲದಲ್ಲಿ ಆಣೆಕಟ್ಟುಗಳನ್ನು ಕಟ್ಟಿ ನೀರು ಸಂಗ್ರಹಿಸಿ ಕಲುವೆಗಳ ಮೂಲಕ ಹರಿಸಿ ನೀರಾವರಿ ಕೃಷಿ ಮಾಡಲಾಗುತ್ತಿದೆ. ಈಗೀಗ ನದಿಗಳು ತುಂಬಿ ಹರಿದುದೇ ಕಡಿಮೆ. ನದಿ ನೀರು ರಾಜಗಾಂಭೀರ್ಯದಿಂದ ನಿಧಾನವಾಗಿ ಪ್ರವಹಿಸುತ್ತವೆ. ಹಳ್ಳದ ನೀರು ಬೇಗ ಬಂದು

ಕೆರೆ-ಬಾವಿಗಳು ಜನರ ಸಂಸ್ಕೃತಿಗೆ ವಿಶಿಷ್ಟವಾದವುಗಳಾಗಿವೆ. ಬಯಲುಸೀಮೆಯವರ ಬದುಕಿಗೆ ಕೆರೆ-ಬಾವಿಗಳು ಜೀವಜಲವಾಗಿವೆ. ಅವು ಅವರಿಗೆ ಪವಿತ್ರವಾಗಿವೆ. ಅವುಗಳೊಂದಿಗೆ ಅವರು ಭಾವನಾತ್ಮಕ ಸಂಬಂಧ ಹೊಂದಿರುವರು.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು

ದೇವಗಾರಮಂ ಮಾಡಿಸು[೧೯]

ಇದು ಶಾಸನವೊಂದರ ಮೊದಲ ಸಾಲು. ಆಗಿನ ಕಾಲದ ದೊರೆ ಪಾಲಿಸಬೇಕಾದ ಕರ್ತವ್ಯಗಳಲ್ಲಿ ಕೆರೆ-ಬಾವಿಗಳಿಗೆ ಮೊದಲು ಆದ್ಯತೆ ನೀಡಲಾಗಿದೆ. ಇದು ಅಂದಿನ ಕಾಲದ ಆಚರಣೆಗಳಲ್ಲಿ ಕೆರೆ-ಬಾವಿಗಳಿಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮಹತ್ವವನ್ನು ಅತ್ಯಂತ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಕೆರೆ ಕಟ್ಟಿಸಿ ಜನರಿಗೆ ಅನುಕೂಲ ಮಾಡಿಕೊಡುವುದು ಪುಣ್ಯಕಾರ್ಯವಾಗಿದ್ದು, ಅದನ್ನು ಕಟ್ಟಿಸಿ ದಾನವಾಗಿ ಕೊಡಲಾಗುತ್ತಿತ್ತು. ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಪ್ರಾಣಿಗಳು, ಪಕ್ಷಿಗಳು, ಮನುಷ್ಯರು ನೀರನ್ನು ಕುಡಿದು ತೃಪ್ತರಾಗುವರೋ ಅವರು ಅಶ್ವಮೇಧ ಯಾಗದ ಫಲವನ್ನು ಪಡೆಯುತ್ತಾರೆ ಎಂಬ ನಂಬಿಕೆಯನ್ನು ಮಹಾಭಾರತ ತಿಳಿಸುತ್ತದೆ.[೨೦]

ಹಿಂದಿನ ಕಾಲದಲ್ಲಿ ದೊರೆಗಳು, ಊರಿನ ಪ್ರಮುಖರು, ಹಣವುಳ್ಳವರು, ಪರೋಪಕಾರಿಗಳು ಜನರ ಹಿತಕ್ಕಾಗಿ ಕೆರೆಗಳನ್ನು ಕಟ್ಟಿಸುತ್ತಿದ್ದರು. ಇಂತಹ ಎಷ್ಟೋ ಕೆರೆಗಳು ಪ್ರಸ್ತುತ ತಾಲೂಕಿನೊಳಗೆ ಕಂಡುಬರುತ್ತವೆ. ಅಲ್ಲಮಪ್ರಭು ತಮ್ಮ ಒಂದು ವಚನದಲ್ಲಿ ಈ ರೀತಿ ಹೇಳಿದ್ದಾರೆ.

ತನುವೆಂಬ ಏರಿಗೆ ಮನವೆಂಬ ಕಟ್ಟೆ

ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ

ಕೆರೆಯ ಕಟ್ಟಬಲ್ಲವನಾರನೂ ಕಾಣೆ

ನಾ ಕಟ್ಟಿದ ಕೆರೆ ಸ್ಥಿರವಾಗಿತ್ತು ಗುಹೇಶ್ವರ[೨೧]

ಎಂದು ಭೂಮಿಯ ಮೇಲಿನ ಕರೆಯೊಂದಿಗೆ ಮನದೊಳಗೆ ಕೆರೆಕಟ್ಟುವ ವಿಚಾರವನ್ನು ಶರೀರಕ್ಕೆ ಹೋಲಿಸಿ ಅರ್ಥಪೂರ್ಣವಾಗಿ ಹೇಳಿದ್ದಾರೆ. ಕೆರೆಗಳ ನಿರ್ಮಾಣದ ಇತಿಹಾಸ ಬಹಳ ದೀರ್ಘ ಹಾಗೂ ರೋಚಕವಾದುದು.

ನೀರಿಗೆ ಬಲಿಕೊಡುವ ಆಚರಣೆಯು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ನೀರಿಗೆ ಬಲಿ (ಕೆರೆಗೆ ಹಾರ) ಕೊಡುವ ವಿಧಿಗಳು ಆಚರಣೆಯಲ್ಲಿ ಇದ್ದುದನ್ನು ಜಾನಪದ ವಿದ್ವಾಂಸರು ದಾಖಲಿಸಿದ್ದಾರೆ. ಈ ನೆಲೆಯಲ್ಲಿ ಬಲಿಯ ಆಚರಣೆಯನ್ನು ಕುರಿತು ಆಲೋಚಿಸಿದರೆ ತೆರೆದುಕೊಳ್ಳುವ ಸಂಗತಿಗಳು ಬೆರಗು ಹುಟ್ಟಿಸುತ್ತವೆ. ಬಲಿ ಆಚರಣೆಯನ್ನು

ನೀರು ಮತ್ತು ಮನುಷ್ಯನ ಮೂಲ ಪ್ರವೃತ್ತಿಗಳ ಸಂದರ್ಭದಲ್ಲಿ ಇಟ್ಟು ಚರ್ಚಿಸಬೇಕಾದ ಅಗತ್ಯವಿದೆ. ಪ್ರಕೃತಿಯ ವಿಲಕ್ಷಣ ಗುಣಧರ್ಮಗಳನ್ನು ನೀರಿನಷ್ಟು ಸಮರ್ಥವಾಗಿ ಪ್ರತಿಫಲಿಸುವ ಮತ್ತೊಂದು ವಸ್ತುವನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಈ ಕಥಾನಕಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಕಂಡುಬಂದ ಸಾಮಾನ್ಯ ಅಂಶಗಳನ್ನು ಹೀಗೆ ಗುರುತಿಸಬಹುದು.

೧. ಊರಿನ ಉಪಕಾರಕ್ಕಾಗಿ ಕೆರೆ/ಬಾವಿ/ಕುಂಟೆ/ಕೋಟೆ ಕಟ್ಟಿಸುವುದು.

೨. ಗಂಗೆಯ ಅತೃಪ್ತಿ (ಕೆರೆ ಕಟ್ಟಿಸಿದರೂ ಕೆರೆಗೆ ನೀರು ಬರುವುದಿಲ್ಲ ಅಥವಾ ನೀರು ಬಂದರೆ ಕಟ್ಟು ನಿಲ್ಲುವುದಿಲ್ಲ)

೩. ಕಟ್ಟು ಕಟ್ಟಿಸಿದವನ ಮನೆಯ ಹೆಣ್ಣೊಂದು ಗಂಗೆ ಪೂಜೆಗೆ (ಕಟ್ಟಡಕ್ಕೆ) ಬಲಿ ಹೋಗುವುದು. (ಈ ಬಲಿಗಳಲ್ಲಿ ಹೆಚ್ಚು ಸೊಸೆಯರು, ಹೊನ್ನಮ್ಮ, ಚಿನ್ನಮ್ಮ, ಕೆಂಚಮ್ಮಳು ಕಥೆಯಲ್ಲಿ ಮಾತ್ರ ಮನೆಯ ಹೆಣ್ಣುಮಕ್ಕಳು ಬಲಿ ಹೋಗಿದ್ದಾರೆ).

೪. ಹೆಣ್ಣಿನ ಬಲಿಯ ನಂತರ ನೀರು ಬರುತ್ತೆ. ಕಟ್ಟು ಅಥವಾ ಕಟ್ಟಡ ನಿಲ್ಲುತ್ತೆ.

೫. ಬಲಿಯಾದ ಹೆಣ್ಣು ಒಂದು ಶಕ್ತಿಯಾಗಿ, ದೇವತೆಯಾಗಿ ಆ ಕೆರೆ ಅಥವಾ ಕಟ್ಟಡದಲ್ಲಿ ನೆಲೆಸುವುದು.

ಕೆರೆಗೆ ಹಾರದಂತಹ ಕಥನಗೀತೆಗಳು ಹಿರೇಕೆರೂರು ತಾಲೂಕಿನ ಮದಗ ಕೆರೆ, ಹಂಸಬಾವಿ ಕೆರೆ, ಬೆಟಕೇರೂರು ಭಾಗಗಳಲ್ಲಿ ಕಂಡುಬಂದಿವೆ. ಪ್ರತಿಯೊಂದು ಭಾಗದಲ್ಲಿಯೂ ಇಂತಹ ಒಂದು ಘಟನೆ ನಡೆಯಿತೇನೋ ಎನ್ನುವಷ್ಟರ ಮಟ್ಟಿಗೆ ಪ್ರಾದೇಶಿಕ ಸಂವೇದನೆಗಳನ್ನು ಕಟ್ಟಿಕೊಡುತ್ತವೆ. ಕೆರೆಗೆ ಹಾರದ ಕಥನದಲ್ಲಿ ಕಟ್ಟಿಸಿದ ಕೆರೆಗೆ ನೀರು ಬರದೆ ಮಲ್ಲನಗೌಡ ಹೊತ್ತಿಗೆ ತೆಗೆಸಿ ಕಾರಣ ಕೇಳಿದಾಗ ಹಿರಿಸೊಸೆಯನ್ನು ಬಲಿ ಕೊಡಬೇಕು ಎನ್ನುವ ಪರಿಹಾರ ನುಡಿಯುತ್ತದೆ. ಆದರೆ ಹಿರಿಯ ಸೊಸೆಯ ಬದಲು ಕಿರಿಸೊಸೆ ಭಾಗೀರಥಿಯನ್ನು ಬಲಿ ಕೊಡುತ್ತಾರೆ.[೨] ಕಾಕತಾಳೀಯವಾಗಿ ಭಾಗೀರಥಿ ಎನ್ನುವುದು ಗಂಗೆಯ ಇನ್ನೊಂದು ಹೆಸರು.

ಒಟ್ಟಿನಲ್ಲಿ ಐತಿಹ್ಯಗಳಲ್ಲಿ ಎರಡು ವಿಧದ ಪ್ರಕ್ರಿಯೆಗಳು ನಡೆಯುತ್ತವೆ. ಚಾರಿತ್ರಿಕ ಐತಿಹ್ಯ ಎಂದು ನಾವು ಯಾವುದನ್ನು ಕರೆಯುತ್ತೇವೆಯೋ ಅಲ್ಲಿ ಚಾರಿತ್ರಿಕ ಅಂಶ ಮಸುಕಾಗಿದ್ದು, ಕಾಲ್ಪನಿಕ ಅಂಶವೇ ಪ್ರಧಾನವಾಗಿರುತ್ತದೆ. ಇದು ನೇರವಾಗಿ ಚರಿತ್ರೆಗೆ ಸಂಬಂಧಿಸಿದ್ದು, ಎಂದಾದರೂ ಅಲ್ಲಿ ಸಿಗುವ ಚಾರಿತ್ರಿಕ ಅಂಶ ತೀರ ಕಡಿಮೆ. ಚರಿತ್ರೆಯ ಬಹುತೇಕ ಅಂಶ ವಿರೂಪಗೊಂಡಿರುವುದೇ ಇಲ್ಲಿ ಕಂಡುಬರುತ್ತದೆ. ಇದಕ್ಕೆ ಪ್ರತಿಯಾಗಿ ಚರಿತ್ರೆಗೂ ಐತಿಹ್ಯಕ್ಕೂ ಏನೇನೂ ಸಂಬಂದವಿಲ್ಲ ಎಂದು ಕಂಡುಬರುವ ಐತಿಹ್ಯಗಳಲ್ಲಿ ಚರಿತ್ರೆಕಾರರಿಗೆ, ವಿಜ್ಞಾನಿಗಳಿಗೆ, ಸಮಾಜ ವಿಜ್ಞಾನಿಗಳಿಗೆ ಬೇರೆಡೆ ದೊರಕದ ಅಮೂಲ್ಯ ಆಧಾರಗಳು ಇವುಗಳಲ್ಲಿ ಅಡಗಿರುತ್ತವೆ. ಇಂದು ಜನರಲ್ಲಿ ಪ್ರಚಲಿತವಿರುವ ಹಲವು ನಂಬಿಕೆ, ಆಚಾರ, ವಿಚಾರಗಳ ಹಿನ್ನೆಲೆಯನ್ನು

ನಮಗೆ ಯಾವ ಚರಿತ್ರೆಯ ಪುಸ್ತಕಗಳೂ ತಿಳಿಸಲಾರವು. ಆದರೆ ಐತಿಹ್ಯಗಳು ಅಂತಹ ಪ್ರಮುಖ ಕೆಲಸ ಮಾಡುತ್ತವೆ. ಅವು ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ಕಟ್ಟುಪಾಡುಗಳನ್ನು ಉಳಿಸಿಕೊಂಡು ಬರುತ್ತವೆ.[೨೩]

ಜನಪದ ಗದ್ಯಕಥೆಗಳಲ್ಲಿ 'ಐತಿಹ್ಯ' ಒಂದು ಮುಖ್ಯವಾದ ಪ್ರಕಾರ. ರೂಪದಲ್ಲಿ ತೀರಾ ಸರಳವಾಗಿದ್ದು, ಒಂದು ನಿರ್ಥಿಷ್ಟ ವ್ಯಕ್ತಿ, ಸ್ಥಳ ಅಥವಾ ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕತೆಗಳನ್ನು 'ಐತಿಹ್ಯ' ಎನ್ನುತ್ತೇವೆ. 'ಐತಿಹ್ಯವೂ' 'ಇತಿಹಾಸ'ವೂ ಒಂದೇ ಮೂಲದ ಪದಗಳು. ಇತಿಹಾಸಕ್ಕೆ ಈಗಿನ ಚರಿತ್ರೆ ಎಂಬ ಪದ ಸಂವಾದಿಯಾಗಿದೆ. ಇತಿಹಾಸ ವಾಸ್ತವಗಳನ್ನು ನಿರೂಪಿಸುತ್ತದೆ. ಇಲ್ಲಿ ಕಲ್ಪನೆಗೆ ಎಡೆಯಿಲ್ಲ. ಐತಿಹ್ಯಗಳನ್ನು ನಿಜವಾಗಿ ನಡೆದುವೆಂದೇ ನಂಬಿ ಜನಪದ ನಿರೂಪಿಸುತ್ತರಾದರೂ ಇವುಗಳಿಗೆ ಯಾವುದೇ ಲಿಖಿತ ಆಧಾರಗಳು ಇರುವುದಿಲ್ಲ. ಇವು ಕಂಠಸ್ತ, ಸಂಪ್ರದಾಯದಲ್ಲಿ ಬೆಳೆಯುತ್ತ ಬಂದಿವೆ. ಇತಿಹಾಸ ಒಂದು ಘಟನೆ ಖಚಿತವಾಗಿ ನಡೆದದ್ದು ಎಂಬುದನ್ನು ಆಧಾರಗಳಿಂದ ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ ಐತಿಹ್ಯದಲ್ಲಿ ನಿರೂಪಿತವಾಗುವ ವಿಷಯಗಳೆಲ್ಲವೂ ನಿಜವೆಂದೇ ಹೇಳುವುದಕ್ಕೆ ಗಟ್ಟಿಯಾದ ಆಧಾರಗಳು ಸಿಗುವುದಿಲ್ಲ. ಎಲ್ಲ ಐತಿಹ್ಯಗಳಲ್ಲಿ ಸತ್ಯಾಂಶ ಹಾಗೂ ಕಾಲ್ಪನಿಕ ಎಂಬುದನ್ನು ವಿಶ್ಲೇಷಣೆಯಿಂದ ಕಂಡುಕೊಳ್ಳಬಹುದು.[೨೪]

ಐತಿಹ್ಯದಲ್ಲಿ ಕತೆಗೆ ಕಾರಣವಾದ ವಸ್ತು ಮೊದಲೇ ವಾಸ್ತವ ಪ್ರಪಂಚದಲ್ಲಿ ನಡೆದಿರುತ್ತದೆಂದು ಜನಪದರು ಭಾವಿಸುತ್ತಾರೆ. ಯಾವುದೋ ಒಂದು ನಿರ್ಥಿಷ್ಟತೆಗೆ ಇಡೀ ಕತೆ ಬದ್ಧವಾಗಿರುತ್ತದೆ. ಐತಿಹ್ಯಗಳ ಕ್ರಿಯೆ ವಾಸ್ತವ ಪ್ರಪಂಚಕ್ಕೆ ಸಂಬಂಧಿಸಿರುವುದರಿಂದ ಇದು ಕೇಳುವವರಿಗೆ ತೀರಾ ಹತ್ತಿರ ಮತ್ತು ಅದರ ಪರಿಣಾಮ ನೇರ, ನಿರಂತರ, ಭಾವನಾತ್ಮಕ.

ವ್ಯಕ್ತಿ, ಘಟನೆ, ಸ್ಥಳ, ಚರಿತ್ರೆ, ಸಂಸ್ಕೃತಿ, ಸಮಾಜ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ.

ಕಲ್ಲನಕೇರಿ ಮಲ್ಲನಗೌಡ ಕೆರೆ ಕಟ್ಟಿಸಿದ 'ಕೆರೆಗೆ ಹಾರ', ಮದಗದ ಕೆಂಚಮ್ಮ ಕೆರೆಗೆ ಹಾರವಾದ 'ಮದಗದ ಕೆರೆ' ಹಾಡುಗಳು ಪ್ರಸಿದ್ಧವಾಗಿವೆ. ಈ ಹಾಡುಗಳಲ್ಲಿ ಬರುವ ಭಾಗೀರಥಿ ಮತ್ತು ಕೆಂಚಮ್ಮ ಜನರ ಒಳಿತಿಗಾಗಿ, ಲೋಕ ಕಲ್ಯಾಣಾರ್ಥವಾಗಿ ತಮ್ಮ ಅಮೂಲ್ಯ ಜೀವನವನ್ನು ಕೆರೆಗಾಗಿ ಸಮರ್ಪಿಸಿಕೊಂಡಿದ್ದಾರೆ. ಅವರ ತ್ಯಾಗ, ಬಲಿದಾನಗಳು ಪ್ರಶಂಸನೀಯ. ಆ ಕುರಿತ ಹಾಡುಗಳು ತಾಲೂಕಿನ ಹಲವೆಡೆ ಪ್ರಸಿದ್ಧವಾಗಿವೆ. ಕೆರೆಗೆ ಆತ್ಮಾರ್ಪಣೆ ಮಾಡಿಕೊಂಡ ಆ ಸೊಸೆಯಂದಿರು ವಿವಿಧ ಸಂದರ್ಭ, ಸನ್ನಿವೇಶಗಳು ಒತ್ತಡದಿಂದ ತಂದೆ-ತಾಯಿ, ಪತಿ-ಮಕ್ಕಳು, ಬಂಧು-ಬಳಗ ತನ್ನ ಪ್ರೀತಿಯ ಎಲ್ಲ ಸಂಬಂಧಗಳನ್ನು ತೊರೆದು ಅಸಂತೋಷದಿಂದ ನೀರಿನ ಪಾಲಾಗುವರು. ಅವರು ನೀರು ಬಾರದ ಕೆರೆಯಲ್ಲಿ ನೀರು ತಂದರು. ಒಡೆದು ಹೋಗಬಹುದಾದ ಕೆರೆಯನ್ನು ಉಳಿಸಿದವರು ಜನಮನದಲ್ಲಿ ಇಂದಿಗೂ

ಪ್ರಾತಃಸ್ಮರಣೀಯರಾದರು. ವಿಶಿಷ್ಟ ಆಶಯದ ಹಿನ್ನೆಲೆಯಲ್ಲಿ ಈ ಸಂಗತಿಗಳು ಮಹುಮಟ್ಟಿಗೆ ಕಾಲ್ಪನಿಕ ಕಥೆಗಳಾಗಿರದೆ ನಿಜವಾಗಿಯೂ ನಡೆದ ಘಟನೆಗಳೇ ಆಗಿರುವವು ಎಂಬುದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ.

ತ್ಯಾಗ, ಬಲಿದಾನಗಳ ಕಥನಗಳಾಗಿ ಈಗಾಗಲೇ ಪ್ರಚಲಿತವಾಗಿರುವ ಕೆರೆ ಹೊನ್ನಮ್ಮ, ಬಾನಾವತಿ ದೊರೆ, ಕೆರೆಗೆ ಹಾರ, ಅಣಜಿ ಹೊನ್ನಮ್ಮ, ಒಡ್ಡರ ಭೋವಿ ಮುಂತಾದ ಲಾವಣಿಗಳು ನೀರಿನ ಮೂಲ ಹಾಗೂ ಅದರ ಸಮೃದ್ಧಿಯ ಜೊತೆಗೆ ನರಬಲಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಸುತ್ತವೆ. ಸ್ತ್ರೀ ಬಲಿಯ ಹಿಂದಿರುವ ಉದ್ದೇಶ ಪುರುಷ ಸ್ವಾರ್ಥದ ವಿವರಗಳೊಂದಿಗೆ ಪುರುಷ ಹಾಗೂ ಪ್ರಕೃತಿಯ ನಡುವಣ ನಿರಂತರ ಹೋರಾಟವನ್ನೇ ಕಟ್ಟಿಕೊಡುತ್ತದೆ. ಹೀಗೆ ಮನೆತನದ ಗೌರವಕ್ಕೆ, ಊರ ಒಳಿತಿಗೆ, ಜಲಮೂಲಕ್ಕೆ ಬಲಿಯಾಗುವ ಹೆಣ್ಣನ್ನು ದೇವತೆಯಾಗಿಸುವ ಕ್ರಮದಲ್ಲಿಯೇ ಪ್ರಕೃತಿಯ ಮೇಲಿನ ಮನುಷ್ಯನ ಅಸಹಜ ಅತಿಕ್ರಮಣವನ್ನು ಪ್ರತಿಭಟಿಸುವ ನೆಲೆಗಳನ್ನು ಕಾಣಬಹುದು. ಕೆರೆ, ಬಾವಿ ತೋಡುವ ಮೂಲಕ ಪ್ರಕೃತಿಯ ಮೇಲೆ ನಿಯಂತ್ರಣ ಸಾಧಿಸಿ ಹೋರಾಡುವ ಮನುಷ್ಯ ಅಹಂಕಾರವನ್ನು ಪ್ರಕೃತಿಯು ನೀರು ಬರದಿರುವ ಮೂಲಕ, ಕಟ್ಟಿದ ಕೆರೆಯೊಡೆದು ಹಾಗೂ ಹರಿದು ಹೋಗುವ ಮೂಲಕ ಪ್ರತಿಭಟಿಸುತ್ತದೆ. ನೀರು ಮತ್ತು ಮನುಷ್ಯನ ನಡುವಿನ ಈ ಹೋರಾಟವೇ ವಿಸ್ಮಯವಾದದ್ದು. ನೀರು ನೀರಾಗಿದ್ದಾಗ ಅಥವಾ ಸ್ತ್ರೀ ಪ್ರಧಾನವಾಗಿದ್ದಾಗ ಸಂಘರ್ಷ ಹಾಗೂ ಬಲಿದಾನದ ಕುರುಹುಗಳು ಕಾಣುವುದಿಲ್ಲ. ನೀರು ಹೆಣ್ಣಾಗಿ ಉಪಭೋಗದ ವಸ್ತುವಾಗಿ ಪುರುಷಾಧಿಕಾರದ ನಿಯಂತ್ರಣದ ವ್ಯಾಪ್ತಿಗೆ ಬಂದಾಗ ಅಲ್ಲಿ ಸಂಘರ್ಷ ಕಾಣುತ್ತದೆ. ನೀರನ್ನು ಎಲ್ಲಾ ಸಂಸ್ಕೃತಿಗಳು ಮಾತೃದೇವತೆಯಾಗಿ ಸ್ವೀಕರಿಸಿವೆ. ಜೋಗತಿ ಹಾಡಿನಲ್ಲಿ ಕಾಣುವ 'ನೀರಾಗಿರುವ ಜಗಜೋಳಿತೆಮ್ಮ', ನದಿಗೊಮ್ಮೆ ಹಚ್ಚಲಗಿ ತುಂಬಿದಿ' ಎನ್ನುವ ಸಾಲುಗಳು ನೀರಿಗೂ ಎಲ್ಲಮ್ಮನಿಗೂ ಇರುವ ಸಂಬಂಧಗಳನ್ನು ಸೂಚಿಸುತ್ತವೆ. ಪುರುಷನ ಅಹಂಕಾರ ಹಾಗೂ ನಿಯಂತ್ರಣದ ಹಪಾಹಪಿಯಲ್ಲಿ ಪ್ರತಿಭಟಿಸುವುದು, ಪುರುಷ ಮತ್ತೆ ಮತ್ತೆ ಅದರ ನಿಯಂತ್ರಣಕ್ಕೆ ಹಾತೊರೆಯುವುದು ತನ್ನ ಯಶಸ್ಸಿಗೆ ಹೆಣ್ಣನ್ನೇ ಬಲಿಯಾಗಿ ನೀಡುವುದು ಅದು ಲೋಕಕಲ್ಯಾಣ ಹಾಗೂ ತ್ಯಾಗದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಎಲ್ಲವೂ ಒಂದು ಮಾನವ ಚರಿತ್ರೆಯ ಕಥನವನ್ನು ಕಟ್ಟಿಕೊಡುವಂತಹವು.

ಕೆರೆ ಹೊನ್ನಮ್ಮ, ಬಾನಾವತಿ, ದೊರೆ, ಕೆರೆಗೆ ಹಾರ, ಮಲಪುರಿ, ಅಣಜಿ ಹೊನ್ನಮ್ಮ, ಒಡ್ಡ ಭೋವಿ ಇತ್ಯಾದಿ ಲಾವಣಿಗಳನ್ನು ಪ್ರಕೃತಿ–ಪುರುಷನ ಸಂಘರ್ಷದ ನೆಲೆಗಳನ್ನೇ ಕಾಣುತ್ತೇವೆ. ಬಾಯಾರಿ ಬಂದ ಮೂಡಲ ದೇಶದ ಒಡ್ಡರಿಗೆ ಕೆರೆ ಹೊನ್ನಮ್ಮ ಮಜ್ಜಿಗೆ ನೀಡುತ್ತಾಳೆ. ಪ್ರತಿಯಾಗಿ ಒಡ್ಡರು ಕೆರೆ ಕುಡಿದು ತಮ್ಮ ಋಣ ಮುಟ್ಟಿಸು ಮಾತನ್ನು ಮಳಿತೆ ಮಲ್ಲೇಗೌಡರ ಮುಂದೆ ಪ್ರಸ್ತಾಪಿಸುತ್ತಾಳೆ. ಒಪ್ಪಂದದಂತೆ ಅಡ್ಡ ಆರುಮಾರು, ಉದ್ದ ಒಂಭತ್ತು ಮಾರು ಹನ್ನೆರಡು ಆಳುದ್ದ ಕೆರೆಯನ್ನು ತೋಡುತ್ತಾರೆ. ಜಲ ಬರುವುದಿಲ್ಲವೆಂದು ಒಡ್ಡಗೌಡನ

ಹೆಂಡತಿಯನ್ನು ಕೆರೆ ಅಹುತಿ ಕೇಳುತ್ತದೆ. ಹೆದರಿದ ಒಡ್ಡ ಪರಾರಿಯಾಗುತ್ತಾನೆ. ಆಗ ಗೌಡರು ಜ್ಯೋತಿಷ್ಯ ಕೇಳಲು, ಗೌಡರ ಕಿರುಬೆರಳು ಆಹುತಿ ಕೊಟ್ಟರೆ ಕೆರೆ ತುಂಬಿ ಬರುತ್ತದೆ ಎನ್ನುವ ಉತ್ತರ ಬರುತ್ತದೆ. ಗೌಡರು ಇದಕ್ಕೆ ಒಪ್ಪುವುದಿಲ್ಲ. ಕೊನೆಗೆ ಕಿರುಬೆರಳಿನ ಬದಲಾಗಿ ಹಿರಿಯ ಸೊಸೆ ದೊಡ್ಡ ಹೊನ್ನಮ್ಮನನ್ನೇ ಕೆರೆಗೆ ಹಾರವಾಗಿಸುತ್ತಾರೆ. ಕೊನೆಯಲ್ಲಿ ನೀರು ಬರುತ್ತದೆ. ಬೆರಳು ನೀಡುವ ಹಾಗೂ ನಿರಾಕರಿಸುವ ಸಂಕಥನ ಕನ್ನಡ ಸಂಸ್ಕೃತಿಯಲ್ಲಿ ಅಂತಹ ಚರ್ಚೆಗೆ ಒಳಗಾಗಿಲ್ಲ. ಪುರುಷನ ಬೆರಳಿಗಿರುವ ಮಹತ್ವ ಅಂದರೆ ಕೊನೆಯ ಬೆರಳಾದ ಕಿರುಬೆರಳು ಅಥವಾ ಹೆಬ್ಬೆರಳು ಇವುಗಳಿಗಿರುವ ಬೆಲೆ ಒಂದು ಹೆಣ್ಣಿಗಿಲ್ಲವೇ? ಅಷ್ಟು ನಿಕೃಷ್ಟವೇ ಹೆಣ್ಣು? ಹೆಚ್ಚಿನ ಸಂದರ್ಭದಲ್ಲಿ ತ್ಯಾಗ ಬಲಿದಾನಗಳ ಪ್ರತೀಕವಾಗಿಯೇ ಹೆಣ್ಣು ಕಂಡುಬರುತ್ತಾಳೆ. ಇಲ್ಲಿ ಬಲಿಯಾಗುವ ಹೆಣ್ಣುಗಳೆಲ್ಲವೂ ಪರರಮಕ್ಕಳು ಅಂದರೆ ಸೊಸೆಯಂದಿರು ಸ್ವತಃ ಗೌಡನ ಕರುಳು ಕುಡಿಗಳಲ್ಲಿ ಎಂಬುದು ಗಮನಾರ್ಹ.[೨೫]

ಕೈಗೊಳ್ಳುವ ಕೆಲಸ ಬಹುಕಾಲ ಉಳಿಯಬೇಕೆಂಬ ಆಶಯದಿಂದ ಶಾಂತಿ ಮಾಡುವ ಉಪಕ್ರಮ ಬೆಳೆದು ಬಂದಿದೆ. ಅವುಗಳಲ್ಲಿ ಪ್ರಾಣಿಬಲಿ, ನರಬಲಿ ಪದ್ಧತಿಯೂ ಒಂದು. ಹೊಸದಾದ ಸೇತುವೆಯನ್ನು, ಕಟ್ಟಡವನ್ನು, ಆಣೆಕಟ್ಟನ್ನು ಕಟ್ಟಿಸಬೇಕಾದಾಗ ಆ ನಿವೇಶನದಲ್ಲಿ ನೆಲೆಸಿರುವ ಶಕ್ತಿಯಿಂದ ಸ್ಥಳವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಮತ್ತು ಕಟ್ಟಲಿರುವ ವಾಸ್ತುವಿಗೆ ಯಾವ ವಿಧವಾದ ತೊಂದರೆಯೂ ಆಗದಂತೆ ಕಾಪಾಡಲು ಬಲಿಗಳನ್ನು ನೀಡಲಾಗುತ್ತಿತ್ತು. ಇದರ ಜೊತೆಗೆ ನರಬಲಿಯಾದ ವ್ಯಕ್ತಿಯ ಆತ್ಮವು ಆ ಜಾಗದಲ್ಲಿ ನೆಲೆಸಿ ಅದನ್ನು ರಕ್ಷಿಸುವುದೆಂಬ ನಂಬಿಕೆಯೂ ಇರುತ್ತಿತ್ತು. ಹಲವಾರು ಪ್ರಾಚೀನ ಅವಶೇಷಗಳನ್ನು ಅಗೆದಾಗ ಸಿಗುವ ಅಸ್ಥಿಪಂಜರಗಳು ಇಂತಹ ಬಲಿಗಳಿಗೆ ಸಾಕ್ಷಿಯಾಗಿ ನಿಂತಿವೆ. ಇಂದಿಗೂ ಕೂಡ ಹೊಸ ಕಟ್ಟಡಗಳನ್ನು ಕಟ್ಟುವಾಗ ಈಶಾನ್ಯ ಮೂಲೆಯಲ್ಲಿ ವಾಸ್ತುಪುರುಷನಿಗೆ ನರಬಲಿಯ ಬದಲೀ ಸ್ವರೂಪಗಳನ್ನು ಅರ್ಪಿಸಿಯೇ ಕಾರ್ಯಾರಂಭ ಮಾಡುವ ವಾಡಿಕೆ ಉಳಿದು ಬಂದಿದೆ. ಕೆರೆ, ಆಣೆಕಟ್ಟು, ಸೇತುವೆಗಳನ್ನು ಕಟ್ಟಿದಾಗ ಅವು ಸುಭದ್ರವಾಗಿ ನಿಲ್ಲಲೆಂದು ನರಬಲಿ ನೀಡಿದರೆಂದು ಇಂದಿಗೂ ಪತ್ರಿಕೆಗಳಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಕಟ್ಟಡ, ಕೆರೆ–ಬಾವಿ, ಆಣೆಕಟ್ಟುಗಳನ್ನು ನಿರ್ಮಿಸುವಾಗ ಪಶುಬಲಿ, ನರಬಲಿ, ಶಿಶುಬಲಿ ನೀಡುವುದರ ಜೊತೆಗೆ ನಿಧಿಯನ್ನು ಇಡುವ ಪದ್ಧತಿಯೂ ಇತ್ತು.[೨೬] ಹೀಗೆ ಹಿರೇಕೆರೂರು ತಾಲೂಕಿನಲ್ಲಿ ಕೆರೆಗಳ ನಿರ್ಮಾಣ ಹಂತದ ಆಚರಣೆಗಳನ್ನು ಗುರುತಿಸಬಹುದು.

ಜನಪದ ಸಂಸ್ಕೃತಿಯಲ್ಲಿ ಕೆರೆ–ಕಟ್ಟೆ ಕಟ್ಟಿಸುವುದು ಸ್ವಜನ ಅನ್ನದಾನ ಹಾಗೂ ಸ್ವಾವಲಂಬಿತನದ ಮೂಲವಾಗಿಯೇ ಕಂಡುಬರುತ್ತದೆ. ಸಮುದಾಯದ ಉಪಯೋಗಕ್ಕಾಗಿ ಪುಣ್ಯ ಕಾರ್ಯದ ಭಾಗವಾಗಿ ಇವುಗಳ ನಿರ್ಮಾಣ ನಡೆದಿದೆ. ಇಂದಿನ ಮಾರುಕಟ್ಟೆ ಆಧಾರಿತ ನೀರಾವರಿ ಕಲ್ಪನೆ ಅವರಿಗೆ ಇರಲಿಲ್ಲ. ಆದರೂ ಸಾರ್ವಜನಿಕ ಬಳಕೆ ಹಾಗೂ ಸಂಪನ್ಮೂಲದ

ಅಭಿವೃದ್ಧಿಗಾಗಿ ಇಂತಹ ಕಾರ್ಯಗಳು ನಡೆದದ್ದು ಕಾಣಬರುತ್ತವೆ. ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಆಹಾರವನ್ನು ಉತ್ಪಾದಿಸುವ ವಿಜಯನಗರದ ಅರಸರು ಭೂಮಿಯನ್ನು ಕೃಷಿಗೆ ಒಳಪಡಿಸಿದರು. ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಹಗಳಾದ ಕೆರೆ ಹಾಗೂ ಬಾವಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸಿದ್ದನ್ನು ಕಾಣಬಹುದು.

ಕಂಡುಗದಷ್ಟು ಪಾಪ ಮಾಡಿದ್ದರೂ ಗಂಗೆಯಲ್ಲಿ ಒಂದು ಸಾರಿ ಮುಳುಗಿದರೆ ಪಾಪ ಪರಿಹಾರವಾಗುತ್ತೆ ಅಂತ ಜನ ಆಡಿಕೊಳ್ಳುವುದನ್ನು ಕೇಳಿದ್ದೇವೆ. ಈ ನಂಬಿಕೆಯ ಹಿಂದೆ ಪವಿತ್ರಗೊಳ್ಳುವ, ಪ್ರಾಯಶ್ಚಿತ್ತದ ಆಶಯವು ಕೆಲಸ ಮಾಡುತ್ತದೆ. ಈ ನಂಬಿಕೆಯನ್ನು ಮೂಢನಂಬಿಕೆ ಅಂತ ತೀರ್ಮಾನಿಸುವಾಗ ನಾವು ಪರಿಗಣಿಸುವುದು ಮಲಿನಗೊಂಡ ಕೊಳ ಅಥವಾ ನದಿಯನ್ನು ಗಮನದಲ್ಲಿಟ್ಟುಕೊಂಡು ಹೇಳಿರುತ್ತೇವೆ. ಈ ನಂಬಿಕೆಯನ್ನು ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ವಿವರಿಸಿಕೊಂಡಾಗ ನಮ್ಮ ದೇಶದಲ್ಲಿ ನೀರಿನ ಮಲಿನತೆ ಆಧುನಿಕ ಪ್ರಕ್ರಿಯೆಗಳ ಆರಂಭದೊಂದಿಗೆ ಮೊದಲಾಯಿತು. ವಸಾಹತುಶಾಹಿ ಆಡಳಿತಕ್ಕಿಂತ ಹಿಂದಿನ ಭಾರತದಲ್ಲಿ ಕೆರೆಯನ್ನು ವರ್ಷಕ್ಕೆ ಒಂದೆರಡು ಬಾರಿ ಹೂಳೆತ್ತಿ ಶುದ್ಧ ಮಾಡುತ್ತಿದ್ದರು. ಕೈಗಾರಿಕೆಗಳು ಇರಲಿಲ್ಲವಾದ್ದರಿಂದ ನದಿಗಳು, ಕೆರೆಗಳು ಮಲಿನವಾಗುವ ಸಾಧ್ಯತೆ ಇರಲಿಲ್ಲ. ಇಂತಹ ಕೆರೆಗಳಲ್ಲಿ ಸ್ನಾನ ಮಾಡುವುದರಿಂದ ಯಾವುದೇ ರೋಗಗಳ ಭಯವಿಲ್ಲದ ಸಂದರ್ಭದಲ್ಲಿ ಈ ನಂಬಿಕೆಯನ್ನು ಮೌಢ್ಯ, ಅವೈಜ್ಞಾನಿಕ ಎಂದು ಕರೆಯಬಹುದೇ?

ಕೆರೆಯ ನೀರಲ್ಲಿ ಮುಳುಗುವುದರಿಂದ ಪ್ರಾಯಶ್ಚಿತ ಹಾಗೂ ಪರಿಶುದ್ಧತೆಯನ್ನು ಗಳಿಸಬಹುದು ಎಂದು ಗಾಢವಾಗಿ ನಂಬುವ ಮನುಷ್ಯ ಇಂದಿನ ಮಲಿನತೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಒತ್ತಡವೇ, ತೀರ್ಥ ಕೊಳಕಾಗಿದ್ದರೂ ಅಸಹ್ಯಪಡದೇ ಸ್ನಾನ ಮಾಡು, ಕುಡಿ ಎನ್ನುವ ನಂಬಿಕೆಯನ್ನು ಸೃಷ್ಟಿಸುತ್ತದೆ. ಕೆರೆಯ ನೀರಲ್ಲಿ ಸ್ನಾನ ಮಾಡಬೇಕು ಎನ್ನುವ ನಂಬಿಕೆ ಇಲ್ಲಿಂದ ಹೊತ್ತ ನೀರು ಕೊಳಕಾಗಿದ್ದರೂ, ಅಸಹ್ಯಪಡದೇ ಸ್ನಾನ ಮಾಡಬೇಕು ಎಂದು ಮಾರ್ಪಾಡಾಗಿದೆ. ಈ ಮಾರ್ಪಾಡಿನ ಒಳರಚನೆಯಲ್ಲಿ ಎಂಥ ಚಾರಿತ್ರಿಕ ಹಾಗೂ ಧಾರ್ಮಿಕ ಅನಿವಾರ್ಯಗಳು ಹುದುಗಿರುತ್ತವೆ ಎನ್ನುವುದನ್ನು ವಿವರಿಸಲು ಸಾಧ್ಯವಾಗಿದೆ.

ಮಾನವನ ಜನನದಿಂದ ಮರಣದವರೆಗೂ ನೀರು ಬೇಕೆ ಬೇಕು. ನೀರಿಲ್ಲದ ಜೀವವಿಲ್ಲ; ಜನಾಂಗವಿಲ್ಲ. ನೀರಿನ ಬಗೆಗೆ ವಿವಿಧ ಆಚರಣೆಗಳನ್ನು ಹೊಂದಿದ್ದಾರೆ. ಮಗು ಹುಟ್ಟಿದಾಗ ಅದಕ್ಕೆ ಎಣ್ಣೆ ಹಚ್ಚಿ ಬೆಚ್ಚಗಿನ ನೀರಿನಿಂದ ಎರೆಯುತ್ತಾರೆ. ಮಗುವಿನ ತಾಯಿ ಬಾಣಂತಿಗೂ ಮಜ್ಜನವಿರುತ್ತದೆ.

ಹೆಣ್ಣು ಹುಡುಗಿ ಋತುಮತಿಯಾದಾಗ ಮುತ್ತೈದೆಯರು ಸ್ನಾನ ಮಾಡಿಸುವ ಪದ್ಧತಿಯಿದೆ. ಮದುವೆ ಸಂದರ್ಭದಲ್ಲಿ ಅರಿಷಿಣ ಹಚ್ಚಿದ ನಂತರ ಮದುಮಕ್ಕಳನ್ನು ಸ್ನಾನ ಮಾಡಿಸುತ್ತಾರೆ. ಈ ಕಾರ್ಯಕ್ಕೆ 'ಅರಿಷಿಣ ನೀರು' ಎನ್ನುವರು. ಹೆಣ್ಣನ್ನು ಧಾರೆಯೆರೆದು ಕೊಡುವಾಗ ಪವಿತ್ರವಾದ

ನೀರು ಬೇಕೆ ಬೇಕು. ಅಕ್ಷತೆ ಮುಗಿದ ಮೇಲೆ ಮದುಮಕ್ಕಳ 'ಕಾಲು ತೊಳೆಯುವ ಸಂಪ್ರದಾಯ' ಇದೆ. ಹೆಣ್ಣಿನ ಕಡೆಯವರು ಮನೆಯೂಟ ಮತ್ತು ಉಡುಗೊರೆಗಳನ್ನು ಗಂಡಿಗೆ ಕೊಡಲು ಬರುವಾಗ ಮುತ್ತೈದೆ ಪೂರ್ಣಕುಂಭ ಹೊತ್ತು ಬರುತ್ತಾಳೆ. ಹೀಗೆ ವಿವಿಧ ಜನಾಂಗಗಳಲ್ಲಿ ವಿವಿಧ ರೀತಿಯಲ್ಲಿ ಜಲ ಬಳಕೆಯ ಆಚರಣೆಗಳಿವೆ.

ದೇವರ ಪೂಜೆಗೆ, ಇಷ್ಟಲಿಂಗ ಪೂಜೆಗೆ, ಶಿಲಾಮೂರ್ತಿಗೆ ಮಡೆನೀರಿನ ಮಜ್ಜನವಾಗುತ್ತದೆ. ಜಂಗಮನನ್ನು ಮನೆಗೆ ಕರೆಸಿ ಆತನ ಪಾದ ಪೂಜೆ ಮಾಡಿದ ನಂತರ ಆ ಪಾದೋದಕವನ್ನು ಮನೆಯ ಸಂದುಗೊಂದುಗಳಲ್ಲಿ ಚಿಮುಕಿಸುತ್ತಾರೆ. ಇದರಿಂದ ಹುಳು-ಹುಪ್ಪಡಿಗಳು ಬರುವುದಿಲ್ಲವೆಂಬ ನಂಬಿಕೆಯಿದೆ. ಹಿಂದಿನ ಕಾಲದಲ್ಲಿ ಮನೆಗೆ ಬಂದ ಅತಿಥಿಗಳಿಗೆ 'ಬೆಲ್ಲ-ನೀರು' ಕೊಡುವ ಸಂಪ್ರದಾಯವಿತ್ತು. ಸಾಯುವ ಸಂದರ್ಭದಲ್ಲಿ ಸಂಬಂಧಿಕರು ಸಾಯುವವರ ಬಾಯಲ್ಲಿ ನೀರು ಹಾಕುವ ರೂಢಿಯಿದೆ. ಸತ್ತಮೇಲೆ ಹೆಣವ ತೊಳೆದು ಶೃಂಗರಿಸುತ್ತಾರೆ. ಬ್ರಾಹ್ಮಣರಲ್ಲಿ ಸತ್ತ ವ್ಯಕ್ತಿಗೆ ಅಗ್ನಿಸ್ಪರ್ಶ ಮಾಡುವ ಮುನ್ನ ಪ್ರೇತೋದಕ ಗಡಿಗೆ ಹೊತ್ತು ಮಂತ್ರಾಗ್ನಿ ಹೇಳುತ್ತ ಎಡಗಡೆಯಿಂದ ಪ್ರದಕ್ಷಿಣೆ ಹಕಿ ಗಡಿಗೆಯನ್ನು ಹೆಗಲಿನ ಹಿಂಭಾಗದಿಂದ ಕೈಬಿಡುತ್ತಾರೆ. ದನ-ಕರುಗಳು ಬೆದರಿದಾಗ ಅಥವಾ ಮೇವು ತಿನ್ನದೇ ಇದ್ದರೆ ತಾಮ್ರಸದ ತಂಬಿಗೆಯಲ್ಲಿ ಜಂಗಮರಿಂದ ಮಂತ್ರಿಸಿದ ನೀರನ್ನು ಗೊತ್ತಾಗದೇ ಹೋಗಿ ಅವುಗಳಿಗೆ ಸಿಂಪಡಿಸುತ್ತಾರೆ. ಇದರಿಂದ ಅವು ಆರಾಮವಾಗುವವೆಂಬ ನಂಬಿಕೆಯಿದೆ. ಇಂಥ ಎಷ್ಟೋ ನಂಬಿಕೆ, ಆಚರಣೆಗಳು ನಮ್ಮಲ್ಲಿವೆ. ಇವುಗಳ ಬಗೆಗೆ ಅಧ್ಯಯನ ನಡೆಯಬೇಕಾಗಿದೆ. ಎಲ್ಲದಕ್ಕೂ ಮುಖ್ಯವಾಗಿ ಪ್ರಕೃತಿ ನೀಡಿದ ಅಮೂಲ್ಯವಾದ ನೀರನ್ನು ಅಪವ್ಯಗೊಳಿಸದೆ ಹಿತ-ಮಿತವಾಗಿ ಬಳಸಬೇಕಾಗಿದೆ. ಮಳೆಯ ನೀರನ್ನು ಸಂಗ್ರಹಿಸುವ ವಿವಿಧ ವಿಧಾನಗಳನ್ನು ಅಳವಡಿಸಿಕೊಂಡು ನಮ್ಮ ಜಲಸಂಸ್ಕೃತಿಯನ್ನು ರಕ್ಷಿಸಬೇಕಾದ ಅಗತ್ಯವಿದೆ.[೨೭]

೪.೩ ಆಚರಣೆಗಳಲ್ಲಿ ಬೇರೆ ಬೇರೆಯಾದ ನೀರಿನ ವಿವಿಧ ರೂಪಗಳು

ಗಂಗಮ್ಮ

ಜನಪದ ಸಂಸ್ಕೃತಿಯಲ್ಲಿ ಗಂಗೆ ಕೇವಲ ನೀರನ್ನು ಸಂಕೇತಿಸುವ ಜಲದೇವತೆಯಲ್ಲ, ನಿಸರ್ಗದ ಪ್ರತೀಕ. ಮೇಲಾಗಿ ನೀರು ಸ್ತ್ರೀರೂಪಿ. ಕೃಷಿಗೆ ಸಂಬಂಧಿಸಿದ ಅಸಂಖ್ಯ ಜನಪದ ದೇವತೆಗಳಲ್ಲಿ ಹೆಚ್ಚಿನವರು ಸ್ತ್ರೀಯರೇ. ಈ ಎಲ್ಲ ದೇವರುಗಳ ಅಧಿದೇವತೆ ಗಂಗೆ. ಗ್ರಾಮಾಂತರ ಪ್ರದೇಶದಲ್ಲಿ ಕಂಡುಬರುವ ನೂರಾರು ಮಾರಿಕಾಂಬ, ಚೌಡಮ್ಮ, ದುರ್ಗಮ್ಮ ಮುಂತಾದ ದೇವತೆಗಳ ಪೂಜೆಗಳು ಆರಂಭಗೊಳ್ಳುವುದೇ ಗಂಗೆ ಪೂಜೆಯಿಂದ. ಈ ಆಚರಣೆಯಲ್ಲಿ ಗ್ರಾಮದೇವತೆಗಳನ್ನು ಸಮೀಪದ ಜಲಮೂಲವೊಂದರ ಬಳಿ ಕರೆದೊಯ್ದು ಪೂಜೆ ಸಲ್ಲಿಸುವರು.[೨೮]

ಕರಗ

ಕರಗವು ಹಸಿಮಣ್ಣಿನಿಂದ ಮಾಡಿದ ಗಡಿಗೆ. ಇದು ಬೆಂಕಿಗಿರಲಿ, ಬಿಸಿಲಿಗೂ ಒಣಗಬಾರದು ಎನ್ನುವುದು ನಿಯಮ. ಇದು ಅತ್ಯಂತ ಶಕ್ತಿಯುತ ದೇವತೆ. ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಕಂಡುಬರುವ ಕರಗವು ಮಾತೃದೇವತೆಯ ಪಂಥದ ಬಲಿಷ್ಠ ಗುರುತುಗಳು. ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಕರಗ ಉತ್ಸವಗಳು ಪ್ರತಿವರ್ಷ ನಡೆಯುತ್ತವೆ.[೨೯]

ಕಳಸ

ಕುಂಭ ಕಳಸವು ನೀರನ್ನು ತುಂಬಿಕೊಂಡಿರುವ ತಾಮ್ರದ ಸಣ್ಣ ಪಾತ್ರೆ. ಇದರ ಮೇಲೆ ಎಲೆ ಜೋಡಿಸಿ ತೆಂಗಿನಕಾಯಿ ಇಟ್ಟು ಪೂಜಿಸುವುದು ವಾಡಿಕೆ. ಕಳಸವು ಜಲ ಮತ್ತು ಅಗ್ನಿ ಪರಂಪರೆಯ ಸಮನ್ವಯದ ಸಂಕೇತವಾಗಿ ತೋರುತ್ತದೆ. ಕುಂಭ ಜಲಸಹಿತವಾಗಿಯೇ ಗರ್ಭದ ಮತ್ತು ಸೃಷ್ಟಿಯ ಸಂಕೇತವಾಗಿದೆ. ಕಳಸವನ್ನು ಮದುವೆ, ಪೂಜೆ ಮತ್ತು ಇನ್ನಿತರ ಯಾವುದೇ ಶುಭಕಾರ್ಯದ ಸಂದರ್ಭಗಳಲ್ಲಿ ಇಟ್ಟು ಪೂಜಿಸುವುದು ರೂಢಿಯಾಗಿದೆ.

ಗಡಿಗೆ/ಮಡಿಕೆ/ಹರಿವೆ

ಶುಭ ಕಾರ್ಯದಲ್ಲಿ ಮಾತ್ರವಲ್ಲದೇ ಸಾವು, ತಿಥಿ, ಜಾತ್ರೆ ಮುಂತಾದ ಎಲ್ಲಾ ಕಾರ್ಯಗಳಲ್ಲಿ ದೇವರನ್ನು ಕಲ್ಪಿಸುವ ಸಲುವಾಗಿ ಬಳಸದ ಹೊಸ ಗಡಿಗೆಳನ್ನು ಜಲಮೂಲಕ್ಕೆ ತೆಗೆದುಕೊಂಡು ಹೋಗಿ ತೊಳೆದು, ನೀರು ತುಂಬಿ ದೇವರೆಂದು ತಂದು ಪೂಜಿಸುವ ಪದ್ಧತಿಗಳು ಎಲ್ಲ ಗ್ರಾಮಗಳಲ್ಲಿ ನಡೆಯುತ್ತವೆ. ಸಾಮಾನ್ಯವಾಗಿ ಶೂದ್ರ ಮತ್ತು ಕೆಳವರ್ಗದವರು ಮಾತ್ರ ದೇವರನ್ನು ಕಲ್ಪಿಸುವ ಈ ಪದ್ಧತಿಗಳನ್ನು ಬಳಸುತ್ತಾರೆ.[೩೦]

ಈ ನಂಬಿಕೆ, ಆಚರಣೆಗಳು ಪ್ರಸ್ತುತ ೨೧ ನೇ ಶತಮಾನದಲ್ಲಿಯೂ ರೂಢಿಯಲ್ಲಿದ್ದು, ಮುಂದುವರೆಯುತ್ತಿರುವುದು ಗಮನಾರ್ಹ ಸಂಗತಿ. ಇದರಿಂದ ಒಂದು ವಿಷಯ ಸ್ಪಷ್ಟ ಅದೇನೆಂದರೆ, ಯಾವುದೇ ನಂಬಿಕೆ ಅಥವಾ ಆಚರಣೆಯು ಇತ್ತೆಂದು ರಾತ್ರೋರಾತ್ರಿ ಬರುವುದಿಲ್ಲ, ಅವುಗಳಿಗೆ ನೂರಾರು, ಸಾವಿರಾರು ವರ್ಷಗಳ ಪಾರಂಪರಿಕ ಹಿನ್ನೆಲೆ ಇರುವುದು ಸ್ಪಷ್ಟವಾಗುತ್ತದೆ. ವ್ಯಕ್ತಿಯ ಮರಣಾನಂತರವೂ ಅದೃಶ್ಯ ಸ್ಥಿತಿಯಲ್ಲಿದ್ದು, ಬದುಕಿರುತ್ತಾನೆ ಎಂಬ ನಂಬಿಕೆ ಅವರದು. ಇದಕ್ಕೆ ಪೋಷಕವಾಗಿ ಪಿತೃಕರ್ಮದ ಆಚರಣೆಯೂ ನಮ್ಮಲ್ಲಿದೆ.

ಕೊನೆಟಿಪ್ಪಣಿಗಳು :

೧. ಸೀತಾಪುರ ಜಯಲಕ್ಷ್ಮೀ., ೨೦೦೯, **ನಂಬಿಕೆ ಮತ್ತು ಆಚರಣೆ,** ಸಿ. ಮಹದೇವ (ಸಂ)., ತೋಣ್ಣೂರು, ಪು. ೧೮೬
೨. ನಾಯಕ ಪಿ.ಬಿ., ೨೦೦೫, **ಜಾನಪದ ಲೇಖನಗಳು,** ಪು. ೧೨೨
೩. ಸೋಮೇಶ ಎಂ., ೨೦೧೧, **ಥಣಾಯಕನ ಕೆರೆ,** ಪು. ೪೫
೪. ಕೂಡ್ಲೂರು ವೆಂಕಟಪ್ಪ., ೨೦೦೭, **ಸ್ಥಳನಾಮ ವೀರರು,** ಪು. ೧೭
೫. ಅದೇ
೬. ಅದೇ
೭. ಕೂಡ್ಲೂರು ವೆಂಕಟಪ್ಪ., ೨೦೦೭ ಪೂರ್ವೋಕ್ತ, ಪು. ೧೭
೮. ಸೋಮೇಶ ಎಂ., ೨೦೧೧, ಪೂರ್ವೋಕ್ತ, ಪು. ೪೫
೯. ಅದೇ
೧೦. ಅದೇ
೧೧. ನಾವಡ ಎ.ವಿ., ೧೯೯೯, **ಜನಪದ ನಂಬಿಕೆಗಳ ತಾತ್ವಿಕತೆ,** ಎಂ.ಬಿ. ನೇಗಿನಾಳ (ಪ್ರ.ಸಂ), ಬಿ.ಪಿ. ಪಾಟೀಲ (ಸಂ)., ಜಾನಪದ ಸಾಹಿತ್ಯ ದರ್ಶನ; ಭಾಗ–೨೩, ಪು. ೧೬
೧೨. ಅದೇ
೧೩. ಅದೇ ಪು. ೧೭
೧೪. ಅದೇ ಪು. ೧೮
೧೫. ಅದೇ ಪು. ೧೧೯
೧೬. ನಾಯಕ ಡಿ.ಬಿ. (ಸಂ)., ೨೦೦೫, ಪೂರ್ವೋಕ್ತ, ಪು. ೧೧೮
೧೭. ಅದೇ ಪು. ೧೧೯
೧೮. ಅದೇ ಪು. ೧೨೧
೧೯. ಅದೆ ಪು. ೧೨೨
೨೦. ಅದೇ
೨೧. ಅದೇ

೨೨. ನಾರಾಯಣಸ್ವಾಮಿ ಕೆ.ವೈ., ೨೦೧೦, **ನೀರ ದೀವಿಗೆ**, ಪು. ೧೪೦

೨೩. ಸಂಧ್ಯಾರೆಡ್ಡಿ ಕೆ.ಆರ್., **ಐತಿಹ್ಯಗಳ ಐತಿಹಾಸಿಕ ವಿಶ್ಲೇಷಣೆ**, ಲಕ್ಷ್ಮಣ್ ತೆಲಗಾವಿ (ಸಂ) ಹರತಿಸಿರಿ, ೧೯೮೭, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ. ಹಿರಿಯೂರು (ತಾ), ಪು. ೮೦೩

೨೪. ಅದೆ ಪು. ೮೦೦

೨೫. ನಾಯಕ ಡಿ.ಬಿ. (ಸಂ), ೨೦೦೫, ಪೂರ್ವೋಕ್ತ, ಪು. ೧೨೧

೨೬. ವೀರೇಶ ಬಡಿಗೇರ., ೨೦೧೦, **ಲಾವಣಿ ಸಾಹಿತ್ಯದಲ್ಲಿ ನೀರಾವರಿ ವ್ಯವಸ್ಥೆ**, ಪು. ೨೮

೨೭. ನಾರಾಯಣಸ್ವಾಮಿ ಕೆ.ವೈ., ೨೦೧೦, ಪೂರ್ವೋಕ್ತ, ಪು. ೧೮೦

೨೮. ನಾರಾಯಣಸ್ವಾಮಿ ಕೆ.ವೈ., ೨೦೧೦, ಪೂರ್ವೋಕ್ತ, ಪು. ೧೮೦

೨೯. ಅದೇ

೩೦. ಅದೇ

* * *

ಅಧ್ಯಾಯ – ಐದು

ಸಮಾರೋಪ

ಅಧ್ಯಾಯ – ಐದು

ಸಮಾರೋಪ

ಒಂದು ಪ್ರದೇಶದ ಸಂಸ್ಕೃತಿಯ ವಿವೇಚನೆ ಸೂಕ್ಷ್ಮ ಹಾಗೂ ಸಮಗ್ರವಾಗಿರಬೇಕು. ಗ್ರಾಮ, ಹೋಬಳಿ, ತಾಲೂಕು ಹಾಗೂ ಜಿಲ್ಲೆಗಳ ಮಟ್ಟದಲ್ಲಿ ನಡೆಯುತ್ತಿರುವ ಸ್ಥಳೀಯ ಸಂಶೋಧನೆಗಳು ಚರಿತ್ರೆ ಅಧ್ಯಯನಗಳಲ್ಲಿ ಮಹತ್ವದ ಹೆಜ್ಜೆ ಗುರುತುಗಳು. ಸ್ಥಳೀಯ ಚರಿತ್ರೆಯು ರಾಜಕೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳ ದಾಖಲೆ ಹಾಗೂ ಅವುಗಳ ವಿಮರ್ಶಾತ್ಮಕವಲ್ಲದೆ ವಿಶ್ಲೇಷಣಾತ್ಮಕ ಅಧ್ಯಯನವಾಗಿದೆ.

"ಹಿರೇಕೆರೂರು ತಾಲೂಕಿನ ಕೆರೆಗಳ ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆಯ ಪ್ರಸ್ತುತ ಸಂಪ್ರಬಂಧದಲ್ಲಿ ಹಿರೇಕೆರೂರು ತಾಲೂಕಿನ ಕೆರೆಗಳ ಚರಿತ್ರೆ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಸಮಗ್ರವಾಗಿ ದಾಖಲಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ನೀರು ವಿಶ್ವದಲ್ಲಿರುವ ಸಕಲ ಜೀವರಾಶಿಗಳಿಗೆ ಆಧಾರ. ಇದು ದೈನಂದಿನ ಚಟುವಟಿಕೆಗಳಲ್ಲಿ ಮುಖ್ಯವಾದದ್ದು. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡ ದಿನದಿಂದ ಅವನು ನೀರಿನ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಕೆರೆ, ಕುಂಟೆ, ಬಾವಿ, ಕಟ್ಟೆ ಮತ್ತು ನದಿಗಳು ಮಾನವನ ಅಗತ್ಯಕ್ಕೆ ನೀರನ್ನೊದಗಿಸುವ ಪ್ರಾಥಮಿಕ ಮೂಲಗಳಾಗಿವೆ. ಆದರೂ ಭೂಮಿಯಲ್ಲಿ ನೀರು ಕಡಿಮೆ ಪ್ರಮಾಣದಲ್ಲಿದ್ದು, ಮಳೆಯ ಅಭಾವದಿಂದ ಈ ಸಮಸ್ಯೆ ಇನ್ನೂ ಹೆಚ್ಚುತ್ತಿದೆ. ಈ ಸಮಸ್ಯೆಯನ್ನು ಹೋಗಲಾಡಿಸಲು ಇರುವ ಮುಖ್ಯ ಸಾಧನವೆಂದರೆ ಜಲವನ್ನು ಸಂಗ್ರಹಣೆ ಮಾಡಿ ಅದನ್ನು ಸಂರಕ್ಷಿಸುವುದು. ಈ ಆಧಾರದ ಮೇಲೆ ತಾಲೂಕಿನ ವಿವಿಧ ಕಾಲಘಟ್ಟಗಳಲ್ಲಿನ ಕೆರೆಗಳ ನೀರಾವರಿ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ.

ಹಿರೇಕೆರೂರು ತಾಲೂಕನ್ನು ಭೌಗೋಳಿಕವಾಗಿ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದು, ತಾಲೂಕು ಕರ್ನಾಟಕ ರಾಜ್ಯದ ಉತ್ತರ ಮೈದಾನದ ಪ್ರದೇಶದಲ್ಲಿದೆ. ಈ ತಾಲೂಕಿನಲ್ಲಿ ಜಲಸಂಪನ್ಮೂಲಗಳು ವಿರಳವಾಗಿದ್ದು, ತುಂಗಭದ್ರಾ, ಕುಮದ್ವತಿ ನದಿಗಳು ಹರಿಯುತ್ತಿದ್ದು, ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಕಾರಿಯಾಗಿವೆ. ಹಾಗೆಯೇ ಗುಪ್ತರು,

ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು, ವಿಜಯನಗರ, ಯಾದವರು, ಮಾಂಡಲಿಕರು ಈ ತಾಲೂಕಿನಲ್ಲಿ ಆಡಳಿತ ನಡೆಸಿದ್ದಾರೆ. ತಾಲೂಕಿನಲ್ಲಿ ನೀರಾವರಿಗೆ ಆದ್ಯತೆ ನೀಡಿ ಹಲವಾರು ಕೆರೆ-ಬಾವಿಗಳನ್ನು ನಿರ್ಮಿಸಿದ್ದಾರೆ. ಅರಸರಲ್ಲದೇ ಸಾಮಂತರು, ಶ್ರೀಮಂತರು ಇನ್ನೂ ಮುಂತಾದವರು ಕೆರೆಗಳ ನೀರಾವರಿಗೆ ಅಂದು ಹೆಚ್ಚಿನ ಆದ್ಯತೆ ನೀಡಿದ್ದರು.

ಹಿರೇಕೆರೂರು ತಾಲೂಕು ಮಳೆಯಾಧಾರಿತ ಕೃಷಿ ಪ್ರದೇಶವಾಗಿದ್ದು, ಕೆರೆ-ಬಾವಿಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿದ್ದನ್ನು ಕಾಣಬಹುದು. ಮಳೆಯಾಧಾರಿತ ಕೆರೆಗಳು ಮತ್ತು ನದಿ ನೀರನ್ನು ಆಧರಿಸಿದ ಕೆರೆಗಳನ್ನು ನೋಡಬಹುದು. ಮಳೆನೀರು ಮತ್ತು ನದಿ ನೀರನ್ನು ಕೆರೆಗಳಿಗೆ ತುಂಬಿಸಿಕೊಂಡು ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಪ್ರಯತ್ನವನ್ನು ಪ್ರಾಚೀನರು ಅನುಸರಿಸುತ್ತಿದ್ದರು. ಇದರಿಂದ ಬಾವಿ ಮತ್ತು ಕೊಳವೆ ಬಾವಿಗಳಲ್ಲಿ ಇಂದಿಗೂ ನೀರು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲದ ಕೆರೆಗಳ ಬಗ್ಗೆ ಪರಾಮರ್ಶಿಸಲಾಗಿದೆ. ತಾಲೂಕಿನಲ್ಲಿ ಪ್ರಾಚೀನ ಕಾಲದ ಕೆರೆಗಳು ಇಂದಿಗೂ ಸುಸ್ಥಿತಿಯಲ್ಲಿದ್ದು, ಅವುಗಳ ಅಸ್ತಿತ್ವವನ್ನು ಉಳಿಸಿಕೊಂಡು ಹೋಗುವ ಕಾರ್ಯ ಜರೂರಾಗಬೇಕಿದೆ.

ತಾಲೂಕನ್ನು ಆಳಿದ ರಾಜರು, ಸಾಮಂತರು, ಮಾಂಡಲಿಕರು ಮೊದಲಾದವರು ಕೆರೆಗಳನ್ನು ನಿರ್ಮಿಸಿ ಕೆರೆ-ಬಾವಿಗಳ ನಿರ್ಮಾಣ, ಅವುಗಳ ದುರಸಸ್ತಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಆ ಕಾಲದಲ್ಲಿ ಕೆರೆಗಳ ನಿರ್ಮಾಣ ವ್ಯಕ್ತಿಗೆ ಪ್ರತಿಷ್ಠೆಯನ್ನು ಹೆಚ್ಚಿಸಿದ್ದಲ್ಲದೆ, ಕೊಡುಗೆಯ ರೂಪದಲ್ಲಿ ಭೂಮಿ, ಹಣ ದೊರೆಯುತ್ತಿತ್ತು. ಹಾಗೆಯೇ ಕೆರೆಗಳ ನಿರ್ಮಾಣ ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಯ ಮೇಲೆ ಬೆಳೆದುಬಂದಿರುವ ಜೊತೆಗೆ ಸಮಾಜದ ಅಭಿವೃದ್ಧಿಗಾಗಿ ಹೆಚ್ಚಿನಾದ್ಯತೆಯನ್ನು ನೀಡಲಾಗಿತ್ತು.

ಹಿರೇಕೆರೂರು ತಾಲೂಕು ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವ ನೆಲೆಯಾಗಿತ್ತು. ಹಾಗೆಯೇ ಇತಿಹಾಸ ಕಾಲದಲ್ಲಿ ಇದು ಹಲವು ರಾಜಮನೆತನಗಳ ಆಳ್ವಿಕೆಗೊಳಪಟ್ಟಿತ್ತು. ತಾಲೂಕಿನಲ್ಲಿ ರೈತ ಗುಂಪುಗಳು ಕೃಷಿಗೆ, ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ನೀರಾವರಿ ಪದ್ಧತಿಯನ್ನು ಹಂತ-ಹಂತವಾಗಿ ಸ್ಥಾಪಿಸಿಕೊಂಡರು. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದ ರೈತ ಗುಂಪುಗಳು ಹಾಗೂ ಗ್ರಾಮ ಮುಖಂಡರು ಸಣ್ಣ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ನಿರ್ಮಿಸಿ ಹಲವು ಬಗೆಯ ವಿಶೇಷ ಸವಲತ್ತುಗಳನ್ನು ಹಾಗೂ ಸಾಮಾಜಿಕ ಪ್ರತಿಷ್ಠೆ ಗಳಿಸಿಕೊಂಡರು. ಕೆರೆ, ಕಟ್ಟೆ, ಕುಂಟೆ, ಕೊಳ, ಡೋಣಿ, ಬಾವಿಗಳ ನಿರ್ಮಾಣ, ದುರಸ್ತಿಯಂತಹ ಎಲ್ಲಾ ಜವಾಬ್ದಾರಿಗಳನ್ನು ಸ್ಥಳೀಯರೇ ನಿರ್ವಹಿಸುತ್ತಿದ್ದುದು ಒಂದು ದೊಡ್ಡ ಪರಂಪರೆಯಾಗಿ ಬೆಳೆದು ಬಂದಿರುವುದು ಗಮನಾರ್ಹ. ಪ್ರಾಚೀನ ಕಾಲದಲ್ಲಿ ವಿದ್ವಾಂಸರ ನೆಲೆಗಳಿಗಾಗಿ ಹಳ್ಳಿಗಳನ್ನು ಕಟ್ಟುವುದು; ಅಲ್ಲಿ ಕೆರೆ-ಬಾವಿಗಳನ್ನು ನಿರ್ಮಿಸುವುದು ಆ ಕಾಲದ ಪ್ರಧಾನ ಲಕ್ಷಣ. ಅಗ್ರಹಾರ,

ಛತ್ರ, ಕೆರೆ, ಬಾವಿ, ದೇವಾಲಯ ಈ ಕಾರ್ಯಗಳು ಪರಸ್ಪರ ಸಂಬಂಧಿಸಿದ್ದವು. ಕೆರೆ ನಿರ್ಮಾಣದ ಜೊತೆಯಲ್ಲಿ ಕೃತಜ್ಞತೆಯ ರೂಪವಾಗಿ ಒಂದು ಗುಡಿಯನ್ನು ಕೆರೆಯ ಹತ್ತಿರ ಕಟ್ಟಲಾಗುತ್ತಿತ್ತು. ಕೆರೆ ದುರಸ್ತಿ, ನಿರ್ವಹಣೆಗಳಿಗೆ ದೇವಾಲಯದ ನಿಧಿಯೂ ಬಳಕೆಯಾಗುತ್ತಿತ್ತು. ದೇವಾಲಯಗಳಿಗೆ ಬಿಟ್ಟ ಭೂಮಿ, ದಾನ-ದತ್ತಿಗಳು ನೀರಾವರಿ ಚೌಕಟ್ಟಿನಲ್ಲಿ ಬಹುಮುಖ್ಯ ಪಾತ್ರವಹಿಸಿದ್ದವು. ಹಿರೇಕೆರೂರು ತಾಲೂಕಿನಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೆಚ್ಚಿನ ಪ್ರಮಾಣದ ಶಾಸನಗಳು ಕೆರೆಗಳ ಕುರಿತಂತೆ ಉಲ್ಲೇಖಿಸಿವೆ.

ಕೆರೆಗಳ ಸ್ವರೂಪ ಮತ್ತು ರಚನೆಯ ದೃಷ್ಟಿಯಿಂದ ಹಿರೇಕರೂರು ತಾಲೂಕಿನ ಎಲ್ಲಾ ಕೆರೆಗಳು ಒಂದೇ ತೆರನಾಗಿ ಕಂಡುಬಂದಿಲ್ಲ. ಬಹುತೇಕ ಕೆರೆಗಳು ಅರ್ಧಚಂದ್ರಾಕೃತಿ, ಆಯತಾಕೃತಿ, ವೃತ್ತಾಕಾರ, ಚೌಕಾಕಾರ ಕೆರೆಗಳಾಗಿವೆ. ಗುಡ್ಡ, ದಿಣ್ಣೆ ಮತ್ತು ಕಾಡುಗಳ ಹತ್ತಿರವೇ ನಿರ್ಮಿಸಿರುವುದರಿಂದ ಉತ್ತಮ ಜಲಾನಯನ ಪ್ರದೇಶ ಹೊಂದಿವೆ. ಎಲ್ಲಾ ಕೆರೆಗಳ ಜಲಯಾನಯನ ಪ್ರದೇಶದಲ್ಲಿ ಬೀಳುವ ವಾರ್ಷಿಕ ಸರಾಸರಿ ಮಳೆ ಪ್ರಮಾಣವು ಕೂಡ ಜಾಸ್ತಿ ಇದೆ. ಕೆರೆಗಳನ್ನು ಸರಣಿ ವ್ಯವಸ್ಥೆಯಲ್ಲಿ ನಿರ್ಮಿಸಿರುವುದು ಅಂದಿನ ತಾಂತ್ರಿಕತೆಗೆ ಹಿಡಿದ ಕೈಗನ್ನಡಿ.

ಕೆರೆಯ ಏರಿಯು ಒಡೆಯದಿರಲೆಂದು ಹೆಚ್ಚಿನ ಕಡೆ ಏರಿಯನ್ನು ಅಂಕುಡೊಂಕಾಗಿ ನಿರ್ಮಿಸುವುದು ಹಿಂದಿನಿಂದಲೂ ರೂಢಿಯಲ್ಲಿರುವ ಕ್ರಮ. ಏರಿಯ ಹೊರಮೈಯನ್ನು ಮಣ್ಣಿನಿಂದ ಕಟ್ಟಲಾಗಿದೆ. ಏರಿಯ ಕೌಶಲ್ಯವನ್ನು ಹಿರೇಕೆರೂರಿನ ಹಿರೇಕೆರೆ/ದುರ್ಗಾದೇವಿ ಕೆರೆ, ಚಿಕ್ಕೇರೂರಿನ ದೊಡ್ಡಕೆರೆ, ಹಂಸಬಾವಿಯ ದುರ್ಗಿ ಕೆರೆಗಳಲ್ಲಿ ಕಾಣಬಹುದು. ದೊಡ್ಡ ದೊಡ್ಡ ಪಾಲಿಶ್ ಮಾಡದ ಕಲ್ಲುಗಳನ್ನು ಹೊಂದಿಸಿ ಗಾರೆಯನ್ನು ಬಳಸದೆ ಕಟ್ಟಲಾಗಿದೆ. ಅವುಗಳಲ್ಲಿ ಹಂಸಬಾವಿಯ ನಿಂಬಿಕೆರೆ, ದುರ್ಗಿಕೆರೆ, ಹಿರೇಕೆರೂರಿನ ಹಿರೇಕೆರೆ, ಬೆಟಕೇರೂರಿನ ದೊಡ್ಡ ಕೆರೆಗಳನ್ನು ಹೆಸರಿಸಬಹುದು. ಸ್ವಾತಂತ್ರ್ಯ ನಂತರ ನಿರ್ಮಿಸಿದ ಅನೇಕ ಕೆರೆಗಳು ಕೂಡ ಪ್ರಕೃತಿಯ ಮಡಿಲಲ್ಲೇ ಇವೆ.

ಸಾಮಾನ್ಯವಾಗಿ ಎರಡು ತೂಬು, ಎರಡು ಕಾಲುವೆ, ಒಂದು ಕೋಡಿ ರಚನೆಯುಳ್ಳ ಕೆರೆಗಳು ಹೆಚ್ಚು. ಆದರೆ ಚಿಕ್ಕೇರೂರು ಕೆರೆಯಲ್ಲಿ ಮೂರು ತೂಬು, ಮೂರು ಕಾಲುವೆಗಳನ್ನು ಕಾಣಬಹುದು. ಕೆರೆಯ ಏರಿಯ ಬದಿ, ಕೆರೆಯ ದಂಡೆಯ ಮೇಲೆ ದೇವಾಲಯಗಳನ್ನು ಕಟ್ಟಿರುವುದು ಕಂಡುಬರುತ್ತದೆ. ದೇವಾಲಯ ಇಲ್ಲದ ಕಡೆ ಆಲ, ಅರಳಿ, ಬನ್ನಿ, ಬೇವಿನ ಮರಗಳ ಬುಡದಲ್ಲಿ ಕಟ್ಟೆ ಕಟ್ಟಿ ಹೆಣ್ಣುದೇವತೆ ಇಲ್ಲವೇ ನಾಗನ ಪ್ರತಿಮೆ ಮತ್ತು ಈಶ್ವರ ಶಿಲ್ಪಗಳನ್ನು ನಿಲ್ಲಿಸಿರುವುದನ್ನು ಕಾಣಬಹುದು. ಉದಾ : ಬೆಟಕೇರೂರಿನ ಕೆರೆಯ ದಂಡೆಯ ಮೇಲೆ ಒಂದು ಈಶ್ವರ ಶಿಲ್ಪ ಕಂಡುಬಂದಿದೆ. ಅದಕ್ಕೆ ಒಂದು ಚಚ್ಚೌಕಾರದ ಮಂದಿರ ವಿಧದ ಕಲ್ಲು ಚಪ್ಪಡಿಗಳನ್ನು ಹಾಕಿದ್ದಾರೆ. ಅದರ ಪಕ್ಕ ಒಂದು ಬಂಡೆಗಲ್ಲು ಶಾಸನವೂ ಕೂಡ

ಕಂಡುಬಂದಿದ್ದು, ಅಕ್ಷರಗಳು ಅಳಿಸಿ ಹೋಗಿವೆ. ಆದ್ದರಿಂದ ಅದನ್ನು ಯಾರ ಅವಧಿಯಲ್ಲಿ ಕೆತ್ತಿಸಿದರು ಎಂಬುದು ಉತ್ತರ ಸಿಗದ ಪ್ರಶ್ನೆಯಾಗಿದೆ. ಕೆಲವು ಊರುಗಳಲ್ಲಿರುವ ಕೆರೆ ಮತ್ತು ದೇವಾಲಯಗಳು ನಮ್ಮ ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿ ಬೆಳೆದು ಬಂದಿವೆ.

'ಕೆರೆ ಇದ್ದಲ್ಲಿ ಕೊಕ್ಕರೆ' ಎನ್ನುವ ಮಾತಿದೆ. ಹಿರೇಕೆರೂರು ತಾಲೂಕಿನ ಪ್ರದೇಶದ ಕೆರೆಗಳಲ್ಲಿ ಕೊಕ್ಕರೆಯ ಹಿಂಡನ್ನು ಕಾಣಬಹುದು. ಧೂಪದಹಳ್ಳಿ ಕೆರೆಗೆ ವಲಸೆ ಬರುವ ರಾಜಹಂಸ, ಮಲನಿಯ ಹಕ್ಕಿ ನವಿಲು, ನೀರುಗಾಗೆ, ಗಂಡು ಮುತ್ತುಗ, ಗೀಜುಗ ಮತ್ತು ಬಾನಾಡಿಯಂತಹ ಹಲವು ಜಾತಿಯ ಹಕ್ಕಿಗಳನ್ನು ಕಾಣಬಹುದು. ಆದರೆ ಪ್ರಸ್ತುತ ಸಂದರ್ಭದಲ್ಲಿ ಕೆರೆಗಳ ಅವನತಿಯಿಂದಾಗಿ ಹೆಚ್ಚಿನ ಕೆರೆಗಳಲ್ಲಿ ಪಕ್ಷಿಗಳ ಕಲರವ ಅಡಗಿ ಹೋಗಿದೆ.

೧೯೫೫ರ ನಂತರ ತಾಲೂಕಿನಲ್ಲಿ ಇತ್ತೀಚೆಗೆ ಗುಡ್ಡದ ಮಾದಾಪುರ ಮತ್ತು ಬುಳ್ಳಾಪುರ ಗ್ರಾಮಗಳಲ್ಲಿ ತಲಾ ಒಂದೊಂದು ಕೆರೆಯು ನಿರ್ಮಾಣಗೊಂಡಿವೆ. ಈ ಕುರಿತ ಅಧ್ಯಯನ ಇನ್ನೂ ಆಗಬೇಕಿದೆ. ಇರುವ ಕೆರೆಗಳ ಮತ್ತು ಹೊಸದಾಗಿ ಕೆರಗಳ ದುರಸ್ತಿ, ಜೀರ್ಣೋದ್ಧಾರವೇ ಆದ್ಯ ಗಮನವಾಗಿದೆ. ಕೆರೆಗಳ ನಿರ್ಮಾಣವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿತ್ತು. ಈ ಸಮಯದಲ್ಲಿ ಕೆರೆಗಳ ಅಭಿವೃದ್ಧಿ ಆಗಿಲ್ಲ ಎನ್ನಬಹುದು. ಲೋಕೋಪಯೋಗಿ ಇಲಾಖೆಯಿಂದ ನೀರಾವರಿ ಇಲಾಖೆಯೆಂದು ಪ್ರತ್ಯೇಕ ಇಲಾಖೆಯಾಗಿ ಮಾಡಲಾಯಿತು. ತಾಲೂಕಿನಲ್ಲಿ ಪ್ರಸ್ತುತ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದ ೪೯ ಕೆರೆಗಳು ಕಂಡುಬರುತ್ತವೆ. ಉಳಿದ ಕೆರೆಗಳು ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗೆ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿವೆ. ಇವುಗಳ ನಿರ್ವಹಣೆ, ಜೀರ್ಣೋದ್ಧಾರ ಮತ್ತು ಸಂರಕ್ಷಣೆಯ ಕಾರ್ಯಗಳನ್ನು ಇಲಾಖೆ ನಿರ್ವಹಿಸುತ್ತದೆ.

ಇತ್ತೀಚಿನ ಕೆರೆಗಳಲ್ಲಿ ಹೂಳು ತುಂಬಿದ್ದ ಆ ಕೆರೆಗಳಲ್ಲಿ ನಿರ್ಧಿಷ್ಟ ಪ್ರಮಾಣದ ನೀರನ್ನು ಶೇಖರಿಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಕೆರೆಗಳನ್ನು ಒತ್ತುವರಿ ಮಾಡಿ ಕೆರೆಗಳು ತಮ್ಮ ವಿಸ್ತೀರ್ಣ ಕಳೆದುಕೊಂಡಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಇದರಿಂದ ಕೆರೆಗಳು ವಿನಾಶದ ಅಂಚಿನಲ್ಲಿರುವೆ. ಆದ್ದರಿಂದ ಕೆರೆಗಳಲ್ಲಿನ ಹೂಳನ್ನು ತೆಗೆಸಿ ಕೆರೆ ಒತ್ತುವರಿಯನ್ನು ಬಿಡಿಸಿ ಹೆಚ್ಚಿನ ನೀರು ಸಂಗ್ರಹಿಸಲು ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮವನ್ನು ಕೈಗೊಳ್ಳಬೇಕು. ಕ್ರಮ ಕೈಗೊಳ್ಳದಿದ್ದರೆ ಕೆರೆಗಳು ಮಾಯವಾಗುವ ಸಂಭವವೇ ಹೆಚ್ಚು. ಹೊಸ ಕೆರೆಗಳ ನಿರ್ಮಾಣ ಕಡಿಮೆ ಪ್ರಮಾಣದಲ್ಲಿಯಾದರೂ ಇರುವ ಕೆರೆಗಳ ಸಂರಕ್ಷಣೆಯ ಪುನಶ್ಚೇತನವೇ ನಮ್ಮ ಮುಂದಿನ ಉದ್ದೇಶವಾಗಬೇಕು.

ತಾಲೂಕಿನಲ್ಲಿ ಕೆರೆಗಳು ಸರಣಿ ವ್ಯವಸ್ಥೆ ಹೊಂದಿವೆ. ಅಂದರೆ ಒಂದು ಕೆರೆ ತುಂಬಿದ ನಂತರ ಅದರ ಕೋಡಿಯ ಮೂಲಕ ನೀರು ಹೊರಬಂದು ಅದರ ಕೆಳಗಿನ ಕೆರೆ ತುಂಬಲು ಮತ್ತೆ ಆ ಕೆರೆಯಿಂದ ಹೊರಬಂದ ನೀರು ಮತ್ತೊಂದು ಕೆರೆಯನ್ನು ಸೇರುತ್ತದೆ. ಕೆರೆ–

ಬಾವಿಗಳ ನೀರಾವರಿ ಪದ್ಧತಿಯು ಬಹಳ ಹಿಂದಿನಿಂದಲೂ ವ್ಯವಸ್ಥಿತವಾಗಿ ಇಂದಿನವರೆಗೂ ಅದರ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಕೆರೆಗಳ ಸಂರಕ್ಷಣೆ ನಮ್ಮ ಮುಂದಿನ ತಲೆಮಾರಿನವರಿಗೆ ಬಿಟ್ಟುಹೋಗುವ ಕೊಡುಗೆಯೆಂದೇ ಹೇಳಬಹುದು.

ಕೆರೆಗಳನ್ನು ಕುರಿತಂತೆ ಕೆಲವು ನಂಬಿಕೆ ಮತ್ತು ಆಚರಣೆಗಳು ಅನಾದಿಕಾಲದಿಂದಲೂ ಇವೆ. ಒಂದು ಕೆರೆಯನ್ನು ನಿರ್ಮಿಸುವ ಕಾಲದಲ್ಲಿ ಆದ ಅಡಚಣೆಗಳನ್ನು ನಿವಾರಿಸಲು ನರಬಲಿ, ಪ್ರಾಣಿಬಲಿಗಳನ್ನು ನೀಡಿರುವುದು ಜನಪದ ಕಥೆಗಳಾಗಿ ಹೊರಹೊಮ್ಮಿವೆ. ಹಂಸಬಾವಿಯ ಗಚ್ಚಿನ ಬಾವಿಯು ಪ್ರಾಚೀನ ಕಾಲದ್ದಾಗಿದ್ದು, ಅದರ ನೀರು ಕುಡಿದರೆ ಚರ್ಮರೋಗ ಹೋಗುತ್ತಿತ್ತು. ಇದೇ ಬಾವಿಯಲ್ಲಿ ೧೨ ತಿಂಗಳೂ ನೀರು ಸತತವಾಗಿ ಇರುತ್ತದೆ. ಹಿರೇಕೆರೂರಿನ ದುರ್ಗಾದೇವಿ ಕೆರೆಯ ನೀರು ಪವಿತ್ರವೆಂದು ಪರಿಗಣಿಸಲ್ಪಟ್ಟಿದ್ದು, ಇಲ್ಲಿ ಸ್ನಾನ ಮಾಡಿದರೆ ರೋಗ-ರುಜಿನಗಳು ಮಾಯವಾಗುತ್ತವೆ. ಈ ಜಲವನ್ನು ಒಯ್ದು ಹೊಲಗಳಿಗೆ ಚಿಮುಕಿಸಿದಲ್ಲಿ ಬೆಳೆ ಹುಲುಸಾಗಿ ಬರುವುದೆಂಬ ನಂಬಿಕೆ ಇಂದಿಗೂ ಜೀವಂತವಾಗಿದೆ.

ಯುಗಾದಿ, ದಸರಾ, ದೀಪಾವಳಿ ಮುಂತಾದ ಹಬ್ಬಗಳಲ್ಲಿ ಕೆರೆ-ಬಾವಿಗಳೊಂದಿಗಿನ ಆಚರಣೆಗಳು ಕಂಡುಬರುವವು. ಹಾಗೆಯೇ ಬಿತ್ತುವಾಗ ಕೆರೆಯ ಮೇಲಿರುವ ಚೌಡಮ್ಮ, ಮಾತಂಗೆಮ್ಮ, ಉಚ್ಚಂಗೆಮ್ಮ, ಹೊನ್ನಮ್ಮ, ಈಶ್ವರ ಗುಡಿಗಳಿಗೆ ಪೂಜೆ ಮಾಡಿ ಬಿತ್ತುವ ಕಾರ್ಯವನ್ನು ಆರಂಭಿಸುತ್ತಾರೆ. ಫಸಲನ್ನು ಕೊಯ್ಯುವಾಗ ಜೋಳ, ಭತ್ತಗಳಿದ್ದರೆ ಚೌಡಮ್ಮ ಅಥವಾ ಕೆಂಚಮ್ಮನ ಗುಡಿಗೆ ಹೋಗಿ ಐದು ಮುಷ್ಟಿ ಪ್ರಮಾಣದಲ್ಲಿ ಧಾನ್ಯವನ್ನು ಗುಂಪುಗಳಾಗಿಟ್ಟು ಅರ್ಪಿಸಿ ನಂತರ ಬೆಳೆಯನ್ನು ಕೊಯ್ದು, ಕಣ ಮಾಡಿ ತುಂಬುತ್ತಾರೆ. ಇಂತಹ ಆಚರಣೆಗಳು ಕಡೂರು, ಕುಡುಪಲಿ, ಹಂಸಬಾವಿ, ಧೂಪದಹಳ್ಳಿ, ಹಿರೇಯಡಚಿ, ಅಣಜಿ, ನಾಗವಂದ, ಮೇದೂರು ಪ್ರದೇಶಗಳಲ್ಲಿ ಜರುಗುತ್ತವೆ. ಹೊಲಕ್ಕೆ ಬಿತ್ತಲು ಹೋಗುವಾಗ ಕೆರೆ ದಂಡೆಯಲ್ಲಿರುವ ದೇವಸ್ಥಾನಗಳಿಗೆ ಮೊದಲಿಗೆ ನಿಧಿಕಾಳು ಅರ್ಪಿಸಿ ಬಿತ್ತನೆ ಕಾರ್ಯ ಮಾಡುವರು.

ಪ್ರಸ್ತುತ ದಿನಗಳಲ್ಲಿ ಬಹುತೇಕ ಕೆರೆಗಳು ಅನೇಕ ರೀತಿಯ ಕಸ-ಕಡ್ಡಿಗಳಿಂದ ಚರಂಡಿ ನೀರಿನ ಒಳಹರಿವಿನಿಂದ ಕಶ್ಮಲಗೊಂಡಿವೆ. ಇಂತಹ ನೀರಿನಲ್ಲಿ ಸ್ನಾನ ಮಾಡಿದರೆ ಪಾಪ ಪರಿಹಾರವಾಗುವ ಬದಲು ನಾವೇ ಪಾಪಕ್ಕೆ ಗುರಿಯಾಗಬೇಕು ಎನ್ನುವ ಎಚ್ಚರಿಕೆಯನ್ನು ವೈಯಕ್ತಿಕ ಶುಚಿತ್ವದ ನೆಲೆಯಲ್ಲಿ ನಮ್ಮ ವಿಜ್ಞಾನ ತಿಳಿಸುತ್ತದೆ. ಇದು ಮೂಢನಂಬಿಕೆ ಎಂದು ವಾದಿಸಬಹುದು. ಆದರೆ ದೇವರು ಗುಡಿಯ ಮುಂದಿನ ಕೆರೆಯಲ್ಲಿ ಸ್ನಾನ ಮಾಡಿ ತೀರ್ಥವನ್ನು ಸೇವಿಸುವುದರ ಮೂಲಕ ಪ್ರಾಯಶ್ಚಿತ್ತ ಪ್ರಾಪ್ತಿಯಾಗುತ್ತದೆ. ಪಾಪ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಒಂದು ಮಾದರಿ ತಾಲೂಕಿನ ಹಿರೇಕೆರೆ/ದುರ್ಗಾದೇವಿ ಕೆರೆ, ಮದಗದ ಕೆರೆಗಳಲ್ಲಿ ಜರುಗುವ ಆಚರಣೆಗಳು ಉದಾಹರಣೆಗಳಾಗಿ ಗೋಚರಿಸುತ್ತವೆ.

ತಾಲೂಕಿನಲ್ಲಿ ಪರಂಪರಾನುಗತವಾಗಿ ಬೆಳೆದು ಬಂದಿರುವ ಕೆರೆ–ಬಾವಿಗಳ ನೀರಾವರಿ ಚೌಕಟ್ಟು ಹಿಂದಿಗಿಂತಲೂ ಇಂದು ಪ್ರಸ್ತುತವೆನಿಸುತ್ತದೆ. ತಾಲೂಕಿನ ಸ್ವಾಭಾವಿಕ ಲಕ್ಷಣಗಳ ಹಿನ್ನೆಲೆಯಲ್ಲಿ ಜೀವ ಸಂಕುಲದ ಅಗತ್ಯಗಳಿಗೆ ಮೂಲಾಧಾರವಾದ ನೀರನ್ನು ಪಡೆಯುವ, ಸಂರಕ್ಷಿಸುವ, ಬಳಸಿಕೊಳ್ಳುವ ಪಾರಂಪರಿಕ ಜ್ಞಾನ ಇಂದಿನ ನೀತಿ ನಿರೂಪಕರಿಗೆ ಮತ್ತು ಜನಸಮುದಾಯಕ್ಕೆ ದಾರಿದೀಪವಾಗಲಿದೆ.

ಒಟ್ಟಿನಲ್ಲಿ ಕೆರೆ–ಬಾವಿ, ಪುಷ್ಕರಣಿ ಮುಂತಾದ ನೀರಾವರಿ ರಚನೆಗಳು ನಮ್ಮ ಪೂರ್ವಜರು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕಾರಣಗಳಿಗಾಗಿ ನಿರ್ಮಿಸಿದ್ದರೂ ಅವುಗಳ ಪ್ರಯೋಜನವನ್ನು ಇಂದಿನ ಪೀಳಿಗೆ ಪಡೆದಿರುವುದಂತೂ ಸತ್ಯ. ನಮ್ಮ ಪೂರ್ವಜರು ತಮ್ಮ ಅನುಭವದ ನೆಲೆಯಲ್ಲಿ ಅದಕ್ಕನುಗುಣವಾಗಿ ನೀರಾವರಿ ರಚನೆಗಳನ್ನು ಮಾಡುತ್ತಿದ್ದರು. ಆದರೆ ಇಂದು ಅವರ ತಂತ್ರಜ್ಞಾನವನ್ನು ನಾವು ಅರಿಯದೇ ಹೊಸದಾದ ತಂತ್ರಜ್ಞಾನಕ್ಕೆ ಮೊರೆಹೋಗಿ ಪಾರಂಪರಿಕವಾಗಿ ಬಂದಿರುವ ತಂತ್ರಜ್ಞಾನವನ್ನು ಅಲಕ್ಷ್ಯ ಮಾಡಿದ್ದೇವೆ. ಅಂದಿನ ತಂತ್ರಜ್ಞಾನವನ್ನು ನಾವು ಇಂದಿನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ನಮ್ಮ ಆರ್ಥಿಕ ಜೀವನವನ್ನು ಸುಧಾರಿಸಿಕೊಳ್ಳವುದರ ಜೊತೆಗೆ ನಮ್ಮ ಪರಿಸರವನ್ನು ರಕ್ಷಿಸಿಕೊಳ್ಳಬಹುದಾಗಿದೆ.

* * *

ಆಕರ ಗ್ರಂಥಗಳು

ಕನ್ನಡ ಪುಸ್ತಕಗಳು

ಅರ್ಕಸಾಲಿ ವೃಷಭೇಂದ್ರಚಾರ್ಯ., ೨೦೧೦, **ಮಳೆರಾಜ ಪರಂಪರೆ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ ಎಂ.ಎಂ., ೧೯೭೫, **ಧಾರವಾಡ ಜಿಲ್ಲೆ ಶಾಸನ ಸೂಚಿ**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಾಮತ್ ಸೂರ್ಯನಾಥ್., ೧೯೮೪, **ಕರ್ನಾಟಕ ರಾಜ್ಯ ಗ್ಯಾಝೆಟಿಯರ್ ಭಾಗ-೧**,ಕರ್ನಾಟಕ ಸರ್ಕಾರ, ಬೆಂಗಳೂರು

ಕುಂಚೂರು ಬಸವರಾಜ, ೨೦೦೯, **ನಮ್ಮೂರ ಕೆರೆಗಳು**, ಪ್ರಕಾಶಕರು ಶ್ರೀಚಕ್ರ ಪ್ರಕಾಶನ ಕುಂಚೂರು, ಹರಪನಹಳ್ಳಿ ತಾ. ದಾವಣಗೆರೆ ಜಿ.

ಕೊಟ್ರಯ್ಯ ಸಿ.ಟಿ.ಎಂ., ೨೦೦೬, **ವಿಜಯನಗರ ಕಾಲದ ತುಂಗಭದ್ರಾ ನದಿಯ ಆಣೆಕಟ್ಟುಗಳು** ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಾಮತ್ ಸೂರ್ಯನಾಥ್., ೧೯೯೫, **ಭಾರತದ ಗ್ಯಾಝೆಟಿಯರ್ ಧಾರವಾಡ ಜಿಲ್ಲೆ**, ಕರ್ನಾಟಕ ಸರ್ಕಾರ, ಬೆಂಗಳೂರು

ಗೋವಿಂದಯ್ಯ ಟಿ. ೨೦೦೪, **ಕರ್ನಾಟಕ ನೀರಾವರಿ ಆರ್ಥಶಾಸ್ತ್ರ**, ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು

ಗೋವಿಂದಯ್ಯ ಟಿ. ೨೦೦೪, **ಅಂತರ್ಜಲ**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್‌ಹೌಸ್ ಬೆಂಗಳೂರು.

ಜಯಮ್ಮ ಕೆರೆಯಣ್ಣ ಎಚ್., ೨೦೧೦, **ಶಾಸನಗಳಲ್ಲಿ ದಾನದತ್ತಿಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ದಿಬ್ಬದ ಶಾಂತಿನಾಥ, ೧೯೯೫, **ಶಾಸನಗಳಲ್ಲಿ ಕೆರೆ-ಕಾಲುವೆಗಳು**, ಸಂ-೦೫, ಕರ್ನಾಟಕ ಭಾರತಿ, ಧಾರವಾಡ.

ದಿವಾಕರ್ ಆರ್. ಆರ್., ೨೦೦೬, **ಕರ್ನಾಟಕ ಪರಂಪರೆ** ಸಂ-೦೨, ಮಧ್ಯಕಾಲ ಮತ್ತು ಆಧುನಿಕ ಕಾಲ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ದುರ್ಗದಮಠ ಎಂ.ಬಿ. ಮತ್ತು ಒಡೆಯರ್ ಎಂ.ಕೆ., ೧೯೯೦ **ಭೂ ಅಂತರ್ಜಲ ವೈಜ್ಞಾನಿಕ ಅರಿವು,** ಕನ್ನಡ ಭಾರತಿ, ಸಂ-೦೨, ಸಂ-೦೩, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಧೃವನಾರಾಯಣ (ಅನು)., ಕೊಟ್ರಯ್ಯ ಸಿ.ಟಿಎಂ. (ಮೂಲ), ೨೦೦೧, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವರಕೊಂಡಾರೆಡ್ಡಿ (ಸಂ)., ೨೦೦೬, **ಹಂಪಿ ಸಂಪುಟ** (ಕಲೆ, ಕ್ರೀಡೆ ಮತ್ತು ಕೌಶಲ) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗಭೂಷಣಯ್ಯ ಎಚ್.ಎಸ್., ೧೯೯೪, **ಅಂತರ್ಜಲ ಸಮಸ್ಯೆಗಳು,** ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ನೀಲತ್ತಹಳ್ಳಿ ಕಸ್ತೂರಿ (ಅನು) ಧೀಕ್ಷಿತ್ ಜಿ.ಎಸ್. ಹಾಗೂ ಇತರರು., (ಮೂಲ) ಪರಮಶಿವಮೂರ್ತಿ ಡಿ.ವಿ. ೨೦೦೦, **ಕರ್ನಾಟಕದಲ್ಲಿ ಕೆರೆ ನೀರಾವರಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನರಹರಿ ಈ.ಡಿ., ೧೯೯೯, **ನೀರು,** ಕಲಾ ಕುಟೀರ ಪ್ರಕಾಶನ, ಕಾಸರಗೋಡು.

ನಾಗರಾಜ ಟಿ.ವಿ., ೨೦೦೮, **ಮೈಸೂರು ಸಂಸ್ಥಾನದಲ್ಲಿ ನೀರಾವರಿ,** ಜನನಿ ಪ್ರಕಾಶನ, ಬೆಂಗಳೂರು.

ಪಂಚಮುಖಿ ಆರ್.ಎಸ್., ೧೯೪೨, **ಕರ್ನಾಟಕ ಅರಸು ಮನೆತನಗಳು,** ಸಂಶೋಧನಾ ಮಂಡಲ, ಧಾರವಾಡ.

ಪಾಟೀಲ ವಿನೋದ., ೨೦೦೬, **ಕರ್ನಾಟಕದ ಪ್ರಾಚೀನ ಬಾವಿಗಳು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಪಾಟೀಲ ಬಿ.ವಿ., ೧೯೯೬, **ಗ್ರಾಮ ದೇವತೆಗಳು,** ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಾಟೀಲ ಬಿ.ಪಿ. (ಸಂ), ನೇಗಿನಾಳ್ ಎಂ.ಬಿ. (ಪ್ರ.ಸಂ), ೧೯೯೯, **ಜನಪದ ಸಾಹಿತ್ಯ ದರ್ಶನ ಭಾಗ-೨೩,** ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಾವಟೆ ಚೆನ್ನಕ್ಕ., ೨೦೦೩, **ಕೆರೆ ಗ್ರಾಮನಾಮ ವಿವೇಚನೆ,** ಶಾಸನ ಸಂಜೀವಿನಿ, ಚೆನ್ನಗಂಗಾ ಪ್ರಕಾಶನ ಧಾರವಾಡ.

ಪೂಜಾರಹಳ್ಳಿ ವಿರೂಪಾಕ್ಷ., ೨೦೦೧, **ಜಲಸಂಬಂಧಿ ಚಳುವಳಿಗಳು,** ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪೂಜಾರಹಳ್ಳಿ ವಿರೂಪಾಕ್ಷ, ೨೦೦೮, **ಚರಿತ್ರೆ ಅಧ್ಯಯನ**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಾಟೀಲ ಭೋಜರಾಜ., ೨೦೧೨, **ಹಿರೇಕೆರೂರು ತಾಲೂಕು ಗ್ರಾಮನಾಮ ಅಧ್ಯಯನ**, ಶಿವಯೋಗಿ ಸಿದ್ಧಲಿಂಗ ಪ್ರಕಾಶನ, ಹಂಸಬಾವಿ

ಭಟ್ ಎಸ್.ಎಸ್., ೧೯೮೪, **ಪ್ರಾಚೀನ ಭಾರತದಲ್ಲಿ ಜನಜೀವನ**, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

ಬಾಲಸುಬ್ರಹ್ಮಣ್ಯ, ಸಿ.ಎಸ್. ವಾಸುದೇವನ್ ಹಾಗೂ ಶ್ರೀ ರಮೇಶ ನಾಯಕ., ೨೦೦೭, **ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ**, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮುಮ್ಮಿಗಟ್ಟಿ ಎಸ್. ಸುಮಂಗಲ, ೨೦೧೦, **ನಮ್ಮ ಭೂಮಿ ನಮ್ಮ ಪರಿಸರ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಮುನಿರಾಜಪ್ಪ (ಸಂ), ೨೦೦೯, **ಕರ್ನಾಟಕ ಕೆರೆ ನೀರಾವರಿ ಅಧ್ಯಯನ**, ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ, ಕನಕಪುರ.

ರಘುನಾಥ ಶಾಲಿನಿ (ಸಂ), ಇಮ್ರಾಪುರ ಸೋಮಶೇಖರ (ಪ್ರ.ಸಂ)., ೨೦೦೧, **ಜಾನಪದ ಸಾಹಿತ್ಯ ದರ್ಶನ, ಭಾಗ-೨೪**, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವೆಂಕಟರಾವ್ ಡಿ., ೨೦೧೩, **ಕೃಷಿ ಬೆಳವಣಿಗೆ**, ವಿದ್ಯಾನಿಧಿ ಪ್ರಕಾಶನ, ಗದಗ

ಶಿವಾನಂದಶಾಸ್ತ್ರಿ ಶಂಕಿನಮಠ, ೨೦೧೨, **ಶ್ರೀ ಹೊಳಲಮ್ಮದೇವಿ ಚರಿತಾಮೃತ**, ಅಂಬಿಕಾ ಪ್ರಕಾಶನ, ಗದಗ.

ಶ್ರೀಕಾಂತ್ ಎಂ.ಪಿ., ೨೦೦೮, **ಬಾವಿ ಬಾವಿಗೂ ಅಂತರ**, ಆಯ್.ಬಿ.ಎಚ್. ಪ್ರಕಾಶನ, ಬೆಂಗಳೂರು.

ಶ್ರೀಕಾಂತ್ ಎಂ.ಪಿ., ೨೦೦೯, **ಅಂತರ್ಜಲ ಅನ್ವೇಷಣೆಯ ವಿಧಾನಗಳು**, ಕೋಮಲ್ ಎಂಟರ್‌ಪ್ರೈಸಸ್, ರಾಮ್‌ರಾವ್ ಲೇಔಟ್, ಬೆಂಗಳೂರು.

ಶ್ರೀಧರ, ೨೦೦೮, **ತುಮಕೂರು ಪರಿಸರದ ಐತಿಹಾಸಿಕ ಕೆರೆಗಳ ಒಂದು ಅವಲೋಕನ**, ಯುವ ಸಂಶೋಧನೆ, ಸುವರ್ಣ ಕರ್ನಾಟಕ ಮಾಲೆ, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಸತ್ಯನಾಥ ಟಿ.ಎನ್. ೧೯೯೯, **ನರಬಲಿ ಒಂದು ಸಾಂಸ್ಕೃತಿಕ ಅಧ್ಯಯನ**, ಸಂಸ್ಕೃತಿ ವಿಕಾಸ ಮಾಲೆ, ಬೆಂಗಳೂರು.

ಹೊಸಪಾಳ್ಯ ಮಲ್ಲಿಕಾರ್ಜುನ, ೨೦೦೮, **ಕೃಷಿ ಆಚರಣೆ**, ಕನ್ನಡ ಪುಸ್ತಕ ಪ್ರಾಧಿಕಾರ, ಸಂ-೫, ಬೆಂಗಳೂರು.

English Books :

Desai P.B., (Ed), 1970, **History of Karnatak**, Kannada Research institute.

Desayar M., 1995, **Irrigation in Medieval Tamilnadu** QJMS, April to June, Vol-LXXVI, Banglore.

Dikshit G.S, Kuppuswamy, 1993, **Taluk Irrigation in Karnatak;** G.R. & Mohan, A Historical Survey, Banaglore.

Kotraiah C.T.M., 1999, **Irrigation Systems Under Vijayanagar Empire,** Directorate of Archaeology & Museum, Mysore.

Kuppuswamy G.R., 1990, **Irrigation System in Karnataka methods and techniq,** QJMS-Vol- LXXXI, Vol-81, No-34, Banglore.

Shrinivasam T.M., 1991, **Irrigation and Water Supply in South India, 200 BC to 1600 AD,** New Era Publications, Madras.

ooo

ಅಪ್ರಕಟಿತ ಎಂ.ಫಿಲ್ ಮತ್ತು ಪಿಎಚ್.ಡಿ. ಮಹಾಪ್ರಬಂಧಗಳು

ಅನಂತಕುಮಾರ್ ಡಿ.ಎನ್., ೨೦೦೮, **ಮಂಡ್ಯ ಜಿಲ್ಲೆಯ ನೀರಾವರಿ ಪದ್ಧತಿ ಒಂದು ಸಾಂಸ್ಕೃತಿಕ ಅಧ್ಯಯನ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಧನಂಜಯ ಸಿ., ೨೦೧೦, **ತುಮಕೂರು ಪರಿಸರದ ಕೆರೆಗಳು,** ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮ ಬಿ.ಎಸ್., ೨೦೧೦, **ತುರವೇಕೆರೆ ತಾಲೂಕಿನ ಕೆರೆಗಳು : ಸಾಂಸ್ಕೃತಿಕ ಅಧ್ಯಯನ,** ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬಡಿಗೇರ ಮೌನೇಶ್ವರ ಶಂಕ್ರಪ್ಪ., ೨೦೧೫, **ಗದಗ ಜಿಲ್ಲೆಯ ಕೆರೆ–ಬಾವಿಗಳು : ಚಾರಿತ್ರಿಕ ಅಧ್ಯಯನ,** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾದಳ್ಳಿ ಸೋಮೇಶ., ೨೦೦೯, **ಢಣಾಯಕನ ಕೆರೆ,** ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಂಚಿನಮನಿ ಉಮಾದೇವಿ., ೨೦೦೯, **ಜಮಖಂಡಿಯ ಕೆರೆಗಳು,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಕ್ಷೇಪ ಸೂಚಿ

ಎ.ಆರ್.ಎಫ್. – ಅನ್ಯುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ.

ಎ.ಆರ್.ಎಸ್.ಎಫ್. – ಅನ್ಯುವಲ್ ರಿಪೋರ್ಟ್ ಆನ್ ಸೌಥ್ ಇಂಡಿಯನ್ ಎಪಿಗ್ರಾಫಿ.

ಎಫ್‌ಕಾರ್ನ್ – ಎಪಿಗ್ರಾಫಿಯ ಕರ್ನಾಟಕ.

ಎಸ್.ಆಯ್.ಆಯ್. – ಸೌಥ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್

ಕ್ಯೂ.ಜೆ.ಎಂ.ಎಸ್. – ಕ್ವಾರ್ಟನರಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ.

ಎಂ.ಎ.ಆರ್. – ಮೈಸೂರ ಆರ್ಕಿಯಲಾಜಿಕಲ್ ರಿಪೋರ್ಟ್.

ಎಂ.ಸಿ.ಎಫ್.ಟಿ. – ಮಿಲಿಯನ್ ಕ್ಯೂಬಿಕ್ ಫೀಟ್.

ವಕ್ತೃ ವಿವರ

೦೧. ಭರಮಗೌಡ ಶಿವಪ್ಪ ವಡೇನಪುರ, ಎಂ.ಕೆ. ಎತ್ತಿನಹಳ್ಳಿ, ಅಧ್ಯಕ್ಷರು(ಜ.ಸ.ಯೋ)

೦೨. ತೇಜಪ್ಪ ಬಸವಣ್ಣೆಪ್ಪ ಬಸರೀಹಳ್ಳಿ, ಎಂ.ಕೆ. ಎತ್ತಿನಹಳ್ಳಿ, ಗ್ರಾಮಸ್ಥರು

೦೩. ಮಂಜುನಾಥ ಬಿ. ಜಕ್ಕನಹಳ್ಳಿ, ಗೊಡಚಿಕೊಂಡ, ಗ್ರಾಮಸ್ಥರು

೦೪. ವೀರನಗೌಡ ಎಂ. ಕರೇಗೌಡ್ರ, ಗೊಡಚಿಕೊಂಡ, ಗ್ರಾಮಸ್ಥರು

೦೫. ಭರಮಪ್ಪ ಬಿ. ಯತ್ನಳ್ಳಿ, ಗೊಡಚಿಕೊಂಡ, ಗ್ರಾಮಸ್ಥರು

೦೬, ರುದ್ರಪ್ಪ ಬ. ಕಮ್ಮಾರ, ಅಬಲೂರು, ಅಕೌಂಟೆಂಟ್(ಗ್ರಾ.ಪಂ)

೦೭. ವಿ.ಬಿ. ತಳವಾರ, ಧೂಪದಹಳ್ಳಿ, ಗ್ರಾಮಸ್ಥರು

೦೮. ಗೋಣೆಪ್ಪ ಹರಿಜನ, ಧೂಪದಹಳ್ಳಿ, ಗ್ರಾಮಸ್ಥರು

೦೯, ಅಣ್ಣಪ್ಪ ಹರಿಜನ, ಧೂಪದಹಳ್ಳಿ, ಗ್ರಾಮಸ್ಥರು

೧೦. ನಾಗಪ್ಪ ಭ. ತಳವಾರ, ಆಲದಕಟ್ಟಿ, ಗ್ರಾಮಸ್ಥರು

೧೧. ನಾಗಪ್ಪ ಚಿಕ್ಕಮತ್ತೂರ, ಆಲದಕಟ್ಟಿ, ಗ್ರಾಮಸ್ಥರು

೧೨. ನಾಗನಗೌಡ ಮ. ಮಾಳಗಿ, ಶಿರಗಂಬಿ, ಸದಸ್ಯರು (ಗ್ರಾ.ಪಂ)

೧೩. ಹನುಮಂತಗೌಡ ಮಾಳಗಿ, ಶಿರಗಂಬಿ, ಗ್ರಾಮಸ್ಥರು

೧೪. ನಾಗಮ್ಮ ಗೊಂದೇರ, ಶಿರಗಂಬಿ, ಅಧ್ಯಕ್ಷರು (ಗ್ರಾ.ಪಂ)

೧೫. ಪ್ರೇಮಾ ಮಂ. ಚಕ್ರಸಾಲಿ, ಗುಂಡಗಟ್ಟಿ, ಅಧ್ಯಕ್ಷರು (ಗ್ರಾ.ಪಂ)

೧೬, ಮಂಜಪ್ಪ ಹರಿಜನ, ಇಂಗಳಗೊಂದಿ, ಸದಸ್ಯರು (ಗ್ರಾ.ಪಂ.)

೧೭. ಎನ್.ಎನ್. ಮಡ್ಲೂರ, ಕ್ಯಾತನಕೇರಿ, ಸದಸ್ಯರು (ಗ್ರಾ.ಪಂ.)

೧೮. ಬಸವರಾಜ ಚೌ. ಹರಿಜನ, ಕ್ಯಾತನಕೇರಿ, ಗ್ರಾಮಸ್ಥರು

೧೯. ಹನುಮಂತಗೌಡ ಕುಪ್ಪೇಲೂರು, ಹಿರೇಯಡಚಿ, ಸದಸ್ಯರು (ಗ್ರಾ.ಪಂ.)

೨೦. ಶಂಕರಗೌಡ ಅಬಲೂರು, ತಾವರಗಿ, ಅಧ್ಯಕ್ಷರು (ಗ್ರಾ.ಪಂ)

೨೧. ಬಸನಗೌಡ ಹಾ. ಹೆಡಿಯಾಲ, ಆರಿಕಟ್ಟಿ, ಗ್ರಾಮಸ್ಥರು

೨೨. ಮಹದೇವಪ್ಪ, ಇಂಗಳಗೊಂದಿ, ಬೆಟಕೇರೂರು, ಸದಸ್ಯರು (ಗ್ರಾ.ಪಂ.)

೨೩. ರೇವಣೆಪ್ಪ ಕಮ್ಮಾರ, ಚಿಕ್ಕೋಣತಿ, ಗ್ರಾಮಸ್ಥರು

೨೬. ಕರೀಂಖಾನ್ ರಫಾತ್‌ಖಾನವರ, ಕಚವಿ, ಗ್ರಾಮಸ್ಥರು

೨೭. ಶೇಖರ್, ಹಿರೇಕೆರೂರು, ಸದಸ್ಯರು (ಪ.ಪಂ)

೨೮. ಈರಪ್ಪ ಪೂಜಾರ, ಮೇದೂರು, ಗ್ರಾಮಸ್ಥರು

೨೩. ವೀರೇಶ ಬಾರ್ಕಿ, ಚಿಕ್ಕೇರೂರು, ಸದಸ್ಯರು (ಗ್ರಾ.ಪಂ.)

೨೪. ಮಲ್ಲೇಶಪ್ಪ ಬಾರ್ಕಿ, ಸಾತೇನಹಳ್ಳಿ, ಗ್ರಾಮಸ್ಥರು

೨೭. ಶೇಖರ್, ಹಿರೇಕೆರೂರು, ಸದಸ್ಯರು (ಪ.ಪಂ)

೨೮. ಈರಪ್ಪ ಪೂಜಾರ, ಮೇದೂರು, ಗ್ರಾಮಸ್ಥರು

೨೯. ಸುಭಾಸಪ್ಪ ದೊಡ್ಡಮನಿ, ಕಡೂರು, ಗ್ರಾಮಸ್ಥರು

೩೦. ನಾಗಪ್ಪ ಬಾರ್ಕಿ, ಕಡೂರು, ಬಿಲ್ ಕಲೆಕ್ಟರ್


* * *

ನಕ್ಷೆಗಳು

ಹಾವೇರಿ ಜಿಲ್ಲೆ ನಕ್ಷೆ



ಹಿರೇಕೆರೂರು ತಾಲೂಕು ನಕ್ಷೆ



ಕೆರೆಗಳು

ಛಾಯಾಚಿತ್ರಗಳು



ಊರಮುಂದಿನ ಕೆರೆ, ಅಣಜಿ



ದೊಡ್ಡಕೆರೆ, ಅಬಲೂರು



ಹಿರೇಕೆರೆ, ಹಿರೇಕೆರೂರು



ಚೌಡೀಕಟ್ಟೆ ಕೆರೆ, ಆರಿಕಟ್ಟೆ



ವಡ್ಡಿನ ಕೆರೆ, ಆಲದಕಟ್ಟೆ



ದೊಡ್ಡಹೊಂಡ, ಆರಿಕಟ್ಟೆ



ಹೊಸಕಟ್ಟೆ ಕೆರೆ, ಆಲದಕಟ್ಟೆ



ಹಿರೇಕೆರೆ, ಎಂ.ಕೆ. ಎತ್ತಿನಹಳ್ಳಿ



ಉಂಬಳಿ ಕೆರೆ, ಕ್ಯಾತನಕೇರಿ



ದೊಡ್ಡಕೆರೆ, ಚಿಕ್ಕೋಣತಿ



ಹೊಸಗೆರೆ, ಆರಿಕಟ್ಟೆ



ದೊಡ್ಡಕೆರೆ, ಗುಡ್ಡದಮಾದಾಪುರ



ದೊಡ್ಡಕೆರೆ, ಗೊಡಚಿಕೊಂಡ



ದೊಡ್ಡಕೆರೆ, ಚಿಕ್ಕೇರೂರು



ದುರ್ಗಿ ಕೆರೆ, ಹಂಸಬಾವಿ



ಹಿರೇಕೆರೆ, ಸಾತೇನಹಳ್ಳಿ



ಗಚ್ಚಿನ ಬಾವಿ, ಹಂಸಬಾವಿ



ದೊಡ್ಡಕೆರೆ ಬೆಟಕೇರೂರು



ಮದಗದ ಕೆರೆ, ಮಾಸೂರು



ಬಳಕೆರೆ, ಭೋಗಾವಿ

ತೂಬುಗಳು



ಚೌಡೀಕಟ್ಟೆ ಕೆರೆ ತೂಬು, ಆರಿಕಟ್ಟೆ



ನವೀಕರಣಗೊಂಡ ಹಿರೇಕೆರೆ ತೂಬು, ಎಂ.ಕೆ. ಎತ್ತಿನಹಳ್ಳಿ



ದೊಡ್ಡಕೆರೆ ತೂಬು, ಚಿಕ್ಕೇರೂರು



ದುರ್ಗಿ ಕೆರೆ ತೂಬು, ಹಂಸಬಾವಿ



ದೊಡ್ಡಕೆರೆ ತೂಬು, ಬೆಟಕೇರೂರು



ಅಣ್ಣಸಾಬನ ಕೆರೆ ತೂಬು, ಶಿರಗಂಬಿ

ನೀರಾವರಿ ಕಾಲುವೆಗಳು



ನೀರಾವರಿ ಕಾಲುವೆ, ಚಿಕ್ಕೇರೂರು



ನೀರಾವರಿ ಕಾಲುವೆ, ಆಲದಕಟ್ಟಿ



ನೀರಾವರಿ ಕಾಲುವೆ, ಎಂ.ಕೆ. ಎತ್ತಿನಹಳ್ಳಿ



ಬೆಟಕೇರೂರಿನ ದೊಡ್ಡಕೆರೆಯ ದಂಡೆ ಮೇಲೆ ದೊರೆತ ಶಾಸನ




ಬೆಟಕೇರೂರಿನ ದೊಡ್ಡಕೆರೆಯ ದಂಡೆಯ ಮೇಲೆ ಲಭ್ಯವಿರುವ ಶಿಲ್ಪ



ಬೆಟಕೇರೂರಿನ ದೊಡ್ಡಕೆರೆ ದಂಡೆಯ ಮೇಲೆ ದೊರೆತ ಈಶ್ವರ ಶಿಲ್ಪ



ಭೋಗಾವಿಯ ವಡ್ಡಿನಕೆರೆಯ ಕುರಿತ ಶಾಸನ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ